# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ನವೆಂಬರ್, ೨೦೧೪ **ಸಂಪಾದಕ : ಡಿ.ಎಸ್.ನಾಗಭೂಷಣ** ಸಂಪುಟ: ೪ ಸಂಚಿಕೆ: ೪

**ಚಂದಾ** : ವಾರ್ಷಿಕ: ರೂ. ೧೫೦/-(ವ್ಯಕ್ತಿಗಳಿಗೆ) ರೂ.೨೫೦/-(ಸಂಸ್ಥೆ/ಗ್ರಂಥಾಲಯಗಳಿಗೆ) ಬಿಡಿ ಪ್ರತಿ: ರೂ. ೨೦/- ಪುಟ: ೨೪



**ವಿಳಾಸ:** ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

**ದೂ:** ೦೮೧೮೨-೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** dsnagabhushana@gmail.com


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ನರೇಂದ್ರ ಮೋದಿಯವರು ಪ್ರಧಾನ ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿ ೧೫೦ ದಿನಗಳು ಕಳೆದಿವೆ. ಈಗ ನಿಂತು ರಾಷ್ಟ್ರಜೀವನವನ್ನೊಮ್ಮೆ ನೋಡಿದರೆ, ಇಡೀ ರಾಷ್ಟ್ರ ಭಿತ್ತಿಯ ಉದ್ದಗಲಗಳನ್ನೂ ಅವರೇ ಏಕಮೇವಾದ್ವಿತೀಯರಾಗಿ ಆವರಿಸಿಕೊಂಡಿರುವುದು ಕಾಣುತ್ತದೆ. ಹೆಸರಿಗೆ ಇನ್ನೊಬ್ಬರ ಸದ್ದಿಲ್ಲ, ಸುಳಿವಿಲ್ಲ. ವಿರೋಧ ಪಕ್ಷಗಳ ನಾಯಕರಿರಲಿ, ಅವರ ಪಕ್ಷದ ಇತರ ನಾಯಕರಿರಲಿ, ರಾಷ್ಟ್ರಪತಿಗಳು ಕೂಡ ಸದ್ದಿಲ್ಲದೆ ತಮ್ಮ ಭವನದಲ್ಲಿ ತಮ್ಮ ಪಾಡಿಗೆ ತಾವಿದ್ದಂತೆ ತೋರುತ್ತಿದೆ. ಚುನಾವಣೆಗಳು ಬಂದು ಹೋಗುತ್ತಿವೆ. ಮೋದಿ ಜ್ವರ ಇಳಿಯದೆ ಇಡೀ ರಾಷ್ಟ್ರ ತದೇಕಚಿತ್ತವಾಗಿ ಹಲವು ನಿರೀಕ್ಷೆಗಳೊಂದಿಗೆ ಮೋದಿಯವರತ್ತ ನೋಡುತ್ತಿರುವಂತಿದೆ. ೧೫೦ ದಿನಗಳ ಹಿಂದೆ ಅವರು ನೀಡಿದ 'ಒಳ್ಳೆಯ ದಿನ'ಗಳ ಭರವಸೆಯ ಈಡೇರಿಕೆಗಾಗಿ ಯಾವುದೇ ಅನುಮಾನವಿಲ್ಲದಂತೆ ಕಾಯುತ್ತಿರುವಂತಿದೆ.

ಜನತೆಗೆ ಮೋದಿ ಬಗ್ಗೆ ನಂಬಿಕೆ ಬೆಳೆದಂತಿದೆ. ಗೋಧ್ರಾ ಹತ್ಯಾಕಾಂಡದ ನೆನಪು ಮಾಸಿಹೋಗಿದೆ. ಏಕೆಂದರೆ ಈ ೧೫೦ ದಿನಗಳಲ್ಲಿ ಯಾವುದೇ ಕಳಂಕ ತಮಗೆ ಅಥವಾ ತಮ್ಮ ಸರ್ಕಾರಕ್ಕೆ ತಾಗದಂತೆ ಅವರು ಎಚ್ಚರಿಕೆ ವಹಿಸಿದ್ದಾರೆ. ಗುಜರಾತ್‌ನಲ್ಲಿ ತಾವೇ ನೇಮಿಸಿದ್ದ ಯುವತಿಯೊಬ್ಬಳ ಮೇಲಿನ ಕಣ್ಗಾವಲು ಪ್ರಕರಣದ ಬಗೆಗಿನ ತನಿಖಾ ಆಯೋಗ ಕೂಡ ರದ್ದಾಗುವಂತೆ ವ್ಯವಸ್ಥೆ ಮಾಡಿದ್ದಾರೆ! ಮೋದಿ, ಸರ್ಕಾರದ ಮೇಲೆ ಪೂರ್ಣ ಹಿಡಿತ ಸಾಧಿಸಿದ್ದಾರೆ. ಇನ್ನೂ ಸ್ಪಷ್ಟವಾಗಿ ಹೇಳಬೇಕಾದರೆ, ಸರ್ಕಾರವೆಂದರೆ ಅವರೇ ಆಗಿದ್ದಾರೆ. ಇನ್ನೂ ಮುಂದೆ ಹೋಗಿ ಹೇಳುವುದಾದರೆ, ಭಾರತವೆಂದರೇ ಸದ್ಯಕ್ಕೆ ಅವರೇ ಆಗಿಬಿಟ್ಟಿದ್ದಾರೆ.

ಇದೆಲ್ಲ ಸರಿಯೋ ತಪ್ಪೋ, ಅದು ಒಳ್ಳೆಯದಕ್ಕೋ-ಕೆಟ್ಟದ್ದಕ್ಕೋ ಅದು ಬೇರೆ ಚರ್ಚೆ. ಆ ಚರ್ಚೆಯ ತುರ್ತು ಇನ್ನೂ ಉಂಟಾಗಿಲ್ಲ. ಆದರೆ ಇದನ್ನೆಲ್ಲ ಅವರು ತಮ್ಮದೇ ಆದ ಕರಾರುವಕ್ಕಾದ ಮತ್ತು ವಿವರವಾದ ಯೋಜನೆಯ ಪ್ರಕಾರ ಸಾಧಿಸಿಕೊಂಡಿದ್ದಾರೆಂಬುದಂತೂ ನಿಜ. ಅವರ ಪ್ರತಿ ಮಾತು, ಪ್ರತಿ ಘೋಷಣೆ, ಪ್ರತಿ ನೋಟ, ಪ್ರತಿ ಭೇಟಿ, ಪ್ರತಿ ಕೈಕುಲುಕು, ಪ್ರತಿ ವೇದಿಕೆಯ ಆರೋಹಣ, ಪ್ರತಿ ದರ್ಶನ, ಹೀಗೆ ಅವರ ಸಾರ್ವಜನಿಕ ಬದುಕಿನ ಪ್ರತಿಯೊಂದು ಹೆಜ್ಜೆಯೂ ವಿವರವಾದ ಪೂರ್ವಸಿದ್ಧತೆಯೊಂದಿಗೇ-ತಮ್ಮದೇ ವಸ್ತ್ರವಿನ್ಯಾಸಕ, ವ್ಯಕ್ತಿತ್ವ ಪ್ರಸ್ತುತಿ ಸಲಹಾಕಾರ, ಶಬ್ದಕೋಶ ಸಲಹಾಕಾರ, ಸಾರ್ವಜನಿಕ ಸಂಪರ್ಕ ಸಲಹಾಕಾರ ಇತ್ಯಾದಿ 'ಮಾರುಕಟ್ಟೆ' ಪರಿಣತರ ತಂಡದ ಮಾರ್ಗದರ್ಶನದಲ್ಲಿ ದಕ್ಷವಾಗಿ ಆಯೋಜಿತವಾಗಿರುತ್ತದೆ. ಪಶ್ಚಿಮದ ಅತ್ಯಾಧುನಿಕ ತಂತ್ರಜ್ಞಾನ ಮತ್ತು ಅಧ್ಯಯನ ಶಿಸ್ತುಗಳ ಪಾಠಗಳ ಮೂಲಕ ರಾಷ್ಟ್ರದ ಮುಂದೆ, ಜಗತ್ತಿನ ಮುಂದೆ ಪ್ರಸ್ತುತಗೊಳ್ಳುತ್ತಿರುವ ಅಪ್ಪಟ ಭಾರತೀಯ 'ಉತ್ಪನ್ನ'ವಾಗಿದ್ದಾರೆ ಮೋದಿ. ಇದನ್ನು ಬೇಕಾದರೆ ಅಪ್ಪಟ ವೈಜ್ಞಾನಿಕ ಅಥವಾ ತಂತ್ರಜ್ಞಾನ ಪೋಷಿತ ಹಿಂದುತ್ವದ ಮಾದರಿ ಎಂದು ಕರೆಯಬಹುದು. ಸದ್ಯಕ್ಕೆ ರಾಷ್ಟ್ರಕ್ಕೆ ಇದಕ್ಕಿಂತ 'ಹೆಮ್ಮೆ'ಯ ವಸ್ತು ಇನ್ನಾವುದಿದ್ದೀತು? ಮೋದಿ ಹೀಗೇ ಕಾಲಕ್ಕೆ ತಕ್ಕ ನಾಯಕನಾಗಿ ಮೂಡಿರುವುದು. ಇದೇ ಅವರ ಭೂತಾನ, ನೇಪಾಳ, ಜಪಾನ್, ಅಮೆರಿಕಾಗಳ ಭೇಟಿಗಳನ್ನು-ಇವು ನಿಜವಾಗಿ ಈ ಮುಂಚಿನ ಪ್ರಧಾನಿಗಳ ಭೇಟಿಗಳಿಗಿಂತ ಹೆಚ್ಚಿನದೇನನ್ನೂ ಸಾಧಿಸದಿದ್ದರೂ- 'ಅಪೂರ್ವ ದಿಗ್ವಿಜಯ'ಗಳಂತೆ ನಮ್ಮ ಬಾಡಿಗೆ ಮಾಧ್ಯಮಗಳಲ್ಲಿ ಪ್ರತಿಬಿಂಬಿತವಾಗುವಂತೆ ಮಾಡಿರುವುದು.

ಆದರೆ ಮುಖ್ಯ ಪ್ರಶ್ನೆ: ಮೋದಿಯವರು ತಮ್ಮ ಬಿಂಬವನ್ನು ಇಷ್ಟೆಲ್ಲ ತಾಂತ್ರಿಕ ಪರಿಣಿತಿಯೊಂದಿಗೆ ಸಾಧಿಸಿ ರಾಷ್ಟ್ರಕ್ಕೆ ಏನು ಮಾಡಿದ್ದಾರೆ? ಹೇಳಲು ಗಣನೀಯವಾದದ್ದು-ಬಹುಶಃ 'ಜನಧನ್' ಯೋಜನೆಯ ಹೊರತಾಗಿ- ಸದ್ಯಕ್ಕೆ ಏನೂ ಇಲ್ಲ! ದಿನಕ್ಕೊಂದು ಹಗರಣ ಬಯಲಾಗುತ್ತಿದ್ದ ಕಾಂಗ್ರೆಸ್ಸಿನ ಆ ಕೆಟ್ಟ ದಿನಗಳು ಹೋದವು, ನಿಜ. ಆದರೆ ಮೋದಿ ಹೇಳಿದ 'ಅಚ್ಛೇ ದಿನ'ಗಳು ಬಂದಿವೆಯೇ? ಬರಲಿವೆಯೇ? ಮೋದಿ ಸಂಸಾರಸ್ಥರಾಗಿರದೆ ವೈಯಕ್ತಿಕ ಭ್ರಷ್ಟಾಚಾರಕ್ಕೆ ಎಡೆಯಿಲ್ಲವಾಗಿರುವುದರಿಂದ ಮತ್ತು ಮೋದಿಯವರೇ ಸರ್ಕಾರವೂ ಆಗಿರುವುದರಿಂದ ಸರ್ಕಾರ ಸದ್ಯಕ್ಕೆ ಸ್ವಚ್ಛವಾಗಿ ಕಾಣುತ್ತಿದೆ. ಈ ದೃಷ್ಟಿಯಿಂದ ಮೋದಿ ಹೊಸ ಮಾದರಿಯ ನಾಯಕ. ಇಂದಿಗೆ ರಾಷ್ಟ್ರಕ್ಕೆ ಅನಿವಾರ್ಯವಾಗಿ ಬೇಕಾಗಿದ್ದ ನಾಯಕನಂತೆಯೂ ಕಾಣತೊಡಗಿದ್ದಾರೆ. ಆ ಕಾರಣದಿಂದಲೇ ಜನ ಕೂಡ ಅವರ ಆಡಳಿತದ ಒಳ್ಳೆಯ ಫಲಗಳಿಗಾಗಿ ಅಶಾಂತರಾಗದೆ ಕಾಯುತ್ತಿದ್ದಾರೆ. ಗಲಾಟೆ ಮಾಡಬಹುದಾಗಿದ್ದ ವಿರೋಧ ಪಕ್ಷಗಳು-ನಿರ್ದಿಷ್ಟವಾಗಿ ಕಾಂಗ್ರೆಸ್ ಪಕ್ಷ- ಒಂದಾದರಮೇಲೊಂದರಂತೆ ಚುನಾವಣೆಗಳಲ್ಲಿ ಸೋತು ಸುಣ್ಣವಾಗಿ ನೆಲ ಕಚ್ಚಿವೆ.

ನಮ್ಮ ಪ್ರಜಾಪ್ರಭುತ್ವ ಕಳೆದ ೧೫೦ ದಿನಗಳಲ್ಲಿ, ಸರ್ಕಾರವೇ ಇಲ್ಲದಿದ್ದ ದುಃಸ್ಥಿತಿಯಿಂದ ವಿರೋಧ ಪಕ್ಷವೇ ಇಲ್ಲದ ದುಃಸ್ಥಿತಿಗೆ ತಲುಪಿದೆ! ಆದರೆ ಇದೆಲ್ಲದರಿಂದಾಗಿ ಮೋದಿ ಎಂತಹ ಸುಸ್ಥಿತಿಯಲ್ಲಿದ್ದಾರೆಂದರೆ ಅವರು ಏನು ಮಾಡಿದರೂ ಜನ ಒಪ್ಪುವಂತಾಗಿದೆ. ಆದರೆ ಮೋದಿ ಈಗ ಏನು ಮಾಡಬಲ್ಲವರಾಗಿದ್ದಾರೆ? ನಿಜವಾಗಿ ಮಾಡಬಲ್ಲುದನ್ನೆಲ್ಲ ಈಗಾಗಲೇ ಮಾಡಿ ಮುಗಿಸಿಯಾಗಿದೆ. ಚುನಾವಣಾ ಸಂದರ್ಭದಲ್ಲಿ ಭ್ರಷ್ಟ ಕಾಂಗ್ರೆಸ್ಸನ್ನು ಜನ ಚಪ್ಪಾಳೆ ತಟ್ಟಿ, ಸಿಲ್ಲು ಹೊಡೆದು ಸುಸ್ತಾಗುವಂತೆ ಅಟ್ಟಾಡಿಸಿಕೊಂಡು ಹೊಡೆದು ಮಲಗಿಸಿದ್ದಾರೆ. ಆದರೆ ಈಗ ಅಧಿಕಾರದ ಗದ್ದುಗೆ ಏರಿದ ಮೇಲೆ ಅವರಿಗೆ ಗೊತ್ತಾಗುತ್ತಿರುವಂತಿದೆ, ಜಾಗತೀಕರಣದ ಬಿಗಿ ಬಂಧನಗಳಲ್ಲಿ ಭಾರತದಂತಹ ದೇಶಗಳು ಮನಮೋಹನ ಸಿಂಗ್‌ಗಳಂತಹ ನಾಯಕರನ್ನು ಮಾತ್ರ ಸೃಷ್ಟಿಸಬಲ್ಲುವೆಂದು. ಹೆಚ್ಚೆಂದರೆ, ಪಕ್ಷ ನಾಯಕತ್ವದ ದಾಕ್ಷಿಣ್ಯವಿಲ್ಲದೆ ಹೆಚ್ಚು ಸ್ವಾತಂತ್ರ್ಯವಿರುವ ಮತ್ತು ಹಾಗಾಗಿ ಹೆಚ್ಚು ದಕ್ಷ, ಪ್ರಾಮಾಣಿಕ ಮನಮೋಹನ ಸಿಂಗ್‌ಗಳು ಸೃಷ್ಟಿಯಾಗಬಲ್ಲರು. ಅವರು ಗಂಗಾ ಶುದ್ಧೀಕರಣ, ಸ್ವಚ್ಛತಾ ಆಂದೋಲನಗಳಂತಹ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಬಲ್ಲರು. ಅದೂ ಗಾಂಧಿ ಜಯಂತಿಯಂತಹ ಮಹತ್ವದ ಸಂದರ್ಭದ ಮಿಕ್ಕೆಲ್ಲ ಸಂದೇಶಗಳನ್ನೂ ಗುಡಿಸಿಹಾಕುವ ಮೂಲಕ.

ಮೋದಿ ಈ ಅರ್ಥದಲ್ಲಿ ಮನಮೋಹನಸಿಂಗ್‌ರಗಿಂತ ಹೆಚ್ಚು ಸ್ವತಂತ್ರರಾದ ಪ್ರಧಾನ ಮಂತ್ರಿಯೇ. ಹಾಗಾಗಿಯೇ ಅವರಿಂದ ಮನಮೋಹನಸಿಂಗ್‌ರ ಕಾಲದಲ್ಲಿ ಹಿಂದೆ ಬಿದ್ದಿದ್ದ ಜಾಗತೀಕರಣದ ಸೂತ್ರಗಳು-ವಿಶ್ವಬ್ಯಾಂಕ್ ಮತ್ತು ಐ.ಎಂ.ಎಫ್. ಪ್ರಣೀತವಾದ ಮುಂದಿನ ತಲೆಮಾರುಗಳ ಆರ್ಥಿಕ ಮತ್ತು ಮಾರುಕಟ್ಟೆ ಸುಧಾರಣೆಗಳು, ಕಾರ್ಮಿಕ ಸುಧಾರಣೆಗಳು ಇತ್ಯಾದಿ ನವ ಉದಾರೀಕರಣದ ಕ್ರಮಗಳು-ಹೆಚ್ಚು ದಕ್ಷವಾಗಿ ಮತ್ತು ಪ್ರಾಮಾಣಿಕವಾಗಿ ಜಾರಿಗೆ ಬರಲಿವೆ. ಅಮೆರಿಕಾದಲ್ಲಿ ಅವರು ಔಷಧ ಉದ್ಯಮಿಗಳೂ ಸೇರಿದಂತೆ ಎಲ್ಲ ತರದ ಉದ್ಯಮಿಗಳೊಂದಿಗೆ ಈ ಸಂಬಂಧ ಫಲಪ್ರದ ಮಾತುಕತೆ ನಡೆಸಿಬಂದಿದ್ದಾರೆ. ಅದರ ಒಟ್ಟು ಸಾರಾಂಶವನ್ನೇ ಅವರು ಮ್ಯಾಡಿಸನ್ ಸಭೆಯಲ್ಲಿ ಹುಚ್ಚೆದ್ದು ಕುಣಿಯುತ್ತಿದ್ದ ಅನಿವಾಸಿ ಭಾರತೀಯ ಸಮೂಹಕ್ಕೆ ಹೇಳಿದ್ದು: 'ನಿಮ್ಮ ಕನಸಿನ ಭಾರತವನ್ನು ನಿರ್ಮಿಸುವುದೇ ನನ್ನ ಗುರಿ!' ಅಮೆರಿಕಾದ ಭಾರತೀಯರ ಕನಸಿನ ಭಾರತವಾದರೂ ಯಾವುದು? ಅದು ಅಮೆರಿಕಾ! ಹಾಗಾಗಿಯೇ ಅಲ್ಲವೇ ಅವರೆಲ್ಲ ಅಲ್ಲಿಗೆ ಹೋದದ್ದು?.

ಅವರು ಗುಜರಾತನ್ನು ಅಮೆರಿಕಾ ಮಾಡಿಮುಗಿಸಿ ಈಗ ಭಾರತವನ್ನೆಲ್ಲ ಅಮೆರಿಕಾ ಮಾಡಹೊರಟಿದ್ದಾರೆ. ಇಲ್ಲಿನ ಜನಕ್ಕೂ ಅದೇ ಬೇಕಾದಂತಿದೆ. ಆದರೆ ಯಾವ ಜನಕ್ಕೆ ಎಂಬುದೇ ಮುಖ್ಯ ಪ್ರಶ್ನೆ. ಮನಮೋಹನಸಿಂಗ್‌ರೂ ಇದನ್ನೇ ಮಾಡಲು ಹೊರಟವರಲ್ಲವೇ? ಏನಾಯಿತು? ಅವರು ಹತ್ತು ವರ್ಷಗಳ ಕಾಲವಾದರೂ ಬಾಳಿದರು. ಹೆಚ್ಚು ಸ್ವತಂತ್ರ, ಹೆಚ್ಚು ದಕ್ಷ ಮತ್ತು ಹೆಚ್ಚು 'ಪ್ರಾಮಾಣಿಕ'ರಾದ ಮೋದಿ? ಕಾದು ನೋಡಬೇಕು! ಏಕೆಂದರೆ ಅವರ ಸರ್ಕಾರ ಮತ್ತು ಪಕ್ಷ ಇನ್ನೂ ತನ್ನ ಒಳ ಅಸ್ತ್ರಗಳನ್ನಿನ್ನೂ ಪೂರ್ಣ ಪ್ರಮಾಣದಲ್ಲಿ ಹೊರ ತೆಗೆದಿಲ್ಲ. ಹೊರತೆಗೆಯಲಿ, ಜನ ಏನು ಮಾಡುತ್ತಾರೆ ನೋಡೋಣ.

ಇನ್ನು ಇತ್ತ ನಮ್ಮ ರಾಜ್ಯದಲ್ಲಿ ಸಿದ್ಧರಾಮಯ್ಯ-ಜನರ ಒತ್ತಡಕ್ಕೆ ಮಣಿದಾದರೂ-ಒಂದು ಒಳ್ಳೆಯ ನಿರ್ಧಾರ ಪ್ರಕಟಿಸಿದ್ದಾರೆ. ಸಾವಿರಾರು ಎಕರೆಗಳ ಸರ್ಕಾರಿ ಭೂ ಒತ್ತುವರಿ ಕುರಿತ ಎ.ಟಿ. ರಾಮಸ್ವಾಮಿ ವರದಿಯ ಮೇಲೆ ಕಟ್ಟುನಿಟ್ಟಿನ ಕ್ರಮಕ್ಕೆ ಆದೇಶ ಹೊರಡಿಸಿದ್ದಾರೆ. ಮಾತ್ರವಲ್ಲ, ಅದಕ್ಕಾಗಿ ಸೂಕ್ತ ಆಡಳಿತಾತ್ಮಕ ಕ್ರಮಗಳನ್ನೂ ಪ್ರಕಟಿಸಿದ್ದಾರೆ. ಇದಕ್ಕಾಗಿ ಸಿದ್ಧರಾಮಯ್ಯನವರ ಸರ್ಕಾರವನ್ನು ಈಗಲೇ ಅಭಿನಂದಿಸುವ ಅಗತ್ಯವಿಲ್ಲ. ಏಕೆಂದರೆ, ಈ ಹಗರಣದಲ್ಲಿ ಎಂತೆಂತಹ ಭಾರಿ ಕುಳಗಳಿದ್ದಾರೆ ಎಂದರೆ ಅವರ ತರಹೇವಾರಿ ಒತ್ತಡಗಳನ್ನು ಎದುರಿಸುವಷ್ಟು ಶೀಲಶಕ್ತಿ ಈ ಸರ್ಕಾರಕ್ಕಿದೆಯೇ ಎಂಬುದನ್ನು ಕಾದು ನೋಡಬೇಕಿದೆ. ಏಕೆಂದರೆ ಇದು ಸರ್ಕಾರದ ರಾಶಿ ರಾಶಿ ಹಣ ತಿಂದು ಅದರಲ್ಲಿ ಒಂದಿಷ್ಟನ್ನು ಒಂದಿಷ್ಟು ಜನರಿಗೆ ತಿನ್ನಿಸಿದರೆ ಸಾಕು, ಅವರನ್ನು ದೇವರಂತೆ ಪೂಜಿಸುವ ದೇಶವಿದು! ಜಯಲಲಿತಾ ಪ್ರಕರಣದಲ್ಲಿ ಕಣ್ತುಂಬಾ ಇದನ್ನು ನೋಡಿದೆವಲ್ಲಾ?

ಸ್ವತಂತ್ರ ಭಾರತದ ಮೊದಲ ಭೂ ಚಳುವಳಿ ಎಂದೇ ಹೆಸರಾದ ಕಾಗೋಡು ಸತ್ಯಾಗ್ರಹದ ರೂವಾರಿ ಎಚ್. ಗಣಪತಿಯಪ್ಪ ನಮ್ಮನ್ನು ಅಗಲಿ ಹೋಗಿದ್ದಾರೆ. ಅವರು ಅಸ್ವಸ್ಥರಾಗಿ ಮಣಿಪಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಂದರ್ಭದಲ್ಲೇ ಪತ್ರಿಕೆ-ಎರಡು ಸಂಚಿಕೆಗಳ ಹಿಂದೆ-ಅವರ ಬಗ್ಗೆ ಬರೆದಿತ್ತು. 'ಭಾರತ ಬಿಟ್ಟು ತೊಲಗಿ ಚಳುವಳಿ'ಯಲ್ಲಿ ಬ್ರಿಟಿಷ್ ಪ್ರಭುತ್ವದ ವಿರುದ್ಧ ಬಂಡೆದ್ದು, ಉತ್ತರ ಕನ್ನಡದ ಸಿದ್ಧಾಪುರದಿಂದ ಸ್ವತಂತ್ರ' ಮೈಸೂರು ಸಂಸ್ಥಾನದ ಸಾಗರ ತಾಲ್ಲೂಕಿಗೆ ವಲಸೆ ಬಂದ ಗಣಪತಿಯಪ್ಪ ನಿಜವಾದ ಗಾಂಧೀವಾದಿಯಾಗಿ ಅಲ್ಲಿ ದಟ್ಟ ದರಿದ್ರ ಸ್ಥಿತಿಯಲ್ಲಿದ್ದ ದೀವರೇ ಪ್ರಧಾನವಾಗಿದ್ದ ಗೇಣೀದಾರರಿಗೆ ಮೊದಲು ಕಲಿಸಿದ್ದು, ಅಚ್ಚುಕಟ್ಟಾದ ಬದುಕಿನ ಪಾಠಗಳನ್ನು. ಅದು ಆನಂತರ ಗೋಪಾಲಗೌಡರ ನೇತೃತ್ವದ ಸಮಾಜವಾದಿಗಳಿಂದ ಭೂ ಹೋರಾಟವಾಗಿ ಪರಿವರ್ತಿತವಾಯಿತಷ್ಟೆ. ಇದರ ಪರಿಣಾಮ ಇಂದು ದೀವ ಸಮುದಾಯ ಮಲೆನಾಡಿನ ರಾಜಕಾರಣವನ್ನು ನಿಯಂತ್ರಿಸುವಷ್ಟು ಪ್ರಬಲವಾಗಿ ಬೆಳೆದಿದೆ. ದೀವಕುಲ ಇರುವವರೆಗೂ ಗಣಪತಿಯಪ್ಪನವರ ಹೆಸರು-ಅವರ ಹಲವು ವಿವಾದಗಳು ಮತ್ತು ದೌರ್ಬಲ್ಯಗಳ ಹೊರತಾಗಿಯೂ- ಹಸುರಾಗಿರುತ್ತದೆ.



**-ಸಂಪಾದಕ**

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಅಕ್ಟೋಬರ್ ಸಂಚಿಕೆಯ 'ಸಮಕಾಲೀನ'ದಲ್ಲಿನ ಗಾಂಧಿ ಯಂತ್ರದರ್ಶನ ಕುರಿತ ನಿಮ್ಮ ಸಂಪಾದಕೀಯದ ಮಾತುಗಳು ಅಪರೂಪದ ಒಳನೋಟಗಳಿಂದ ಕೂಡಿ ಗಮನ ಸೆಳೆಯುತ್ತವೆ. ಡಾ. ಶಂಕರನಾರಾಯಣರ ಲೇಖನ ಆಧುನಿಕ ಯಂತ್ರದಷ್ಟೇ ಜಟಿಲವಾಗಿದ್ದು, ಅಸ್ಪಷ್ಟವಾಗಷ್ಟೇ ಅರ್ಥವಾಯಿತು. ಆದರೆ ಎಚ್. ಗೋವಿಂದಯ್ಯನವರ ಲೇಖನ ಹೊಸತನದಿಂದ ಕೂಡಿದ್ದು, ಗಾಂಧಿಯನ್ನು ಹೊಸಬೆಳಕಿನಲ್ಲಿ ನೋಡುವ ಪ್ರಯತ್ನ ಮಾಡುತ್ತಾ ಕುತೂಹಲ ಹುಟ್ಟಿಸುವಂತಿದೆ.

**-ಆರ್. ಸುರೇಶ್ ಕುಮಾರ್,** ಹೊಸಪೇಟೆ

ಕಳೆದ ಸಂಚಿಕೆಯಲ್ಲಿ 'ಅಲ್ಪಸಂಖ್ಯಾತರಲ್ಲಿ ಬದಲಾವಣೆಯ ಗಾಳಿ?' ಲೇಖನ ಜಡ ಸೆಕ್ಯುಲರ್‌ವಾದಿಗಳ ಕಣ್ಣು ತೆರೆಸಬೇಕು. ಸಮಾಜವಾದಿ ಪತ್ರಿಕೆ ಎಂದು ಕರೆದುಕೊಂಡೂ ಬಿಜೆಪಿ ನಾಯಕರೊಬ್ಬರ ಲೇಖನವನ್ನು ಪ್ರಕಟಿಸಿರುವ ನಿಮ್ಮ ಧೈರ್ಯ ಮೆಚ್ಚುವಂತಹದ್ದು. ಸಿದ್ಧಾಂತವೊಂದು ಜಡವಾಗದೆ ಚೈತನ್ಯಶೀಲವಾಗಿ ಬೆಳೆಯಬೇಕಾದದ್ದು ಹೀಗೆ ಎನಿಸುತ್ತದೆ.

ಹಿಂದೂ ಕೋಮುವಾದದ ಬಗ್ಗೆಯೇ ಹುಯ್ಲಿಡುವ ಭರದಲ್ಲಿ ಇತರ ಮತಗಳ ದುಷ್ಟ ಪ್ರವೃತ್ತಿಗಳ ಬಗ್ಗೆ ಮುಗುಮ್ಮಾಗಿದ್ದುದೇ, ಸೆಕ್ಯುಲರ್ ಎಂದು ಕರೆದುಕೊಳ್ಳುವ ರಾಜಕೀಯ ಚಿಂತನೆ ಜನರ ಕಣ್ಣಲ್ಲಿ ಪ್ರಶ್ನಾರ್ಹವಾಗಿ ಬಿಜೆಪಿ ಬಲಗೊಂಡು ಅಧಿಕಾರಕ್ಕೆ ಬರಲು ಒಂದು ಮುಖ್ಯ ಕಾರಣವಾಯಿತು.

ಈ ಲೇಖನಕ್ಕೆ ನೀವು ಆರಿಸಿ ಹಾಕಿರುವ ಚಿತ್ರ (ಬುರ್ಖಾ ಹಾಕಿಕೊಂಡಿರುವ ಮಹಿಳೆಯರ ಸಮೂಹವನ್ನು ತನ್ನ ಕ್ಯಾಮರಾದಲ್ಲಿ ಚಿತ್ರಿಸಲು ಅತ್ಯುತ್ತಮ ಕೋನವೊಂದಕ್ಕಾಗಿ ತಡಕಾಡುತ್ತಿರುವ ಸಂಪ್ರದಾಯಸ್ಥ ಮುಸ್ಲಿಂ ಪುರುಷ) ಮಾರ್ಮಿಕವಾಗಿದೆ. ನಿಮಗೆ ಅಭಿನಂದನೆಗಳು.

**-ಎಸ್.ಎಂ. ನಾಗರಾಜ್,** ದಾವಣಗೆರೆ

ಅಕ್ಟೋಬರ್ ಸಂಚಿಕೆಯ ನಿಮ್ಮ ಸಂಪಾದಕೀಯದಲ್ಲಿ ಮೋದಿಯವರು ಇಂಗ್ಲಿಷ್ ವ್ಯಾಮೋಹಕ್ಕೆ ಧಿಕ್ಕಾರ ಹೇಳಿರುವ ರೀತಿಯನ್ನು ಮತ್ತು ಮಾಧ್ಯಮಗಳನ್ನು ಸುದೂರದಲ್ಲಿಟ್ಟಿರುವ ನೀತಿಯನ್ನು ಗುರುತಿಸಿ ಮೆಚ್ಚಿರುವುದು ಪತ್ರಿಕೆಯ ಸಮಾಜವಾದಿ ಬದ್ಧತೆ ಕುರುಡಾದುದಲ್ಲ ಎಂಬುದನ್ನು ಸೂಚಿಸುವಂತಿದೆ.

**-ಎಂ.ಎಸ್. ದಿವಾಕರ ಹೆಗ್ಗಡೆ,** ಹಳೇಹೊನ್ನಾಪುರ

ಕಳೆದ ಸಂಚಿಕೆಯ 'ನಿಮ್ಮ ಪತ್ರ' ವಿಭಾಗದಲ್ಲಿ ಯು.ಆರ್. ಅನಂತಮೂರ್ತಿಯವರನ್ನು ಅಪ್ರಾಮಾಣಿಕ ವೈಚಾರಿಕ ಎಂದು ಪರೋಕ್ಷವಾಗಿ ಜರೆದಿದ್ದ ಎಂ. ಪ್ರಭಾಕರ ಜೋಷಿಯವರ ಪತ್ರವನ್ನು ಓದಿದ ದಿನವೇ ಅವರ ಭಾಷಣವನ್ನು ಹೆಗ್ಗೋಡಿನ ನೀನಾಸಂ ಸಂಸ್ಕೃತಿ ಶಿಬಿರದಲ್ಲಿ ಕೇಳುವ ಸುಯೋಗ ಒದಗಿತು. ಅಲ್ಲಿ ಅವರು ಸಂಪೂರ್ಣ ಪ್ಲೇಟ್ ಬದಲಿಸಿ ತಮ್ಮ ಭಾಷಣದಲ್ಲಿ ಅನಂತಮೂರ್ತಿಯವರನ್ನು ವಾಚಾಮಗೋಚರವಾಗಿ ಹೊಗಳಿ ಶ್ರದ್ಧಾಂಜಲಿ ಸಲ್ಲಿಸಿದ್ದನ್ನು ಕಂಡು ಸೋಜಿಗವೆನಿಸಿತು. ಪ್ರಾಮಾಣಿಕತೆಯ ಹೊಸ ವ್ಯಾಖ್ಯಾನ?

**-ಆರ್. ಜಗದೀಶ,** ಸಾಗರ

ಪ್ರೊ. ಬಿ.ಕೃಷ್ಣಪ್ಪನವರನ್ನು ಕುರಿತ ಲೇಖನ ಮಾಲೆ ಚೆನ್ನಾಗಿ ಬರುತ್ತಿದೆ. ಅದಕ್ಕಾಗಿ ಇಂದಿರಾ ಮೇಡಂ ಅವರಿಗೆ ಧನ್ಯವಾದಗಳು. ಆದರೆ, ಅದನ್ನು ಕೃಷ್ಣಪ್ಪನವರ ಬದುಕಿನ ಕಥೆ ಮಾತ್ರವಲ್ಲದೆ ದಸಂಸದ ಕಥೆಯನ್ನಾಗಿಯೂ ಅವರು ನಿರೂಪಿಸುತ್ತಿರುವುದರಿಂದ, ಅದು ಕರ್ನಾಟದಲ್ಲಿ ದಲಿತ ಚಳುವಳಿಯನ್ನು ಕಟ್ಟಿದವರು ಬಿ. ಕೃಷ್ಣಪ್ಪನವರೊಬ್ಬರೇ ಏನೋ ಎಂಬ ಅನುಮಾನವನ್ನೂ ಹುಟ್ಟಿಸುವಂತಿದೆ. ಉದಾಹರಣೆಗೆ ಅನುಸೂಯಮ್ಮನವರ ಪ್ರಕರಣದಲ್ಲಿ ಕೃಷ್ಣಪ್ಪನವರಿಗಿಂತ ಮಹತ್ವದ ಪಾತ್ರ ವಹಿಸಿದ ಅನೇಕ (ವಿಶೇಷವಾಗಿ ಕೋಲಾರ ಜಿಲ್ಲೆಯ) ದಲಿತ ನಾಯಕರಿದ್ದಾರೆ. ಆದರೆ ಅವರ ಪ್ರಸ್ತಾಪವೇ ಇಲ್ಲ! ಇದು ಸಲ್ಲದು. ದಲಿತ ಚಳುವಳಿ ಅನೇಕ ನಾಯಕರಿಂದ ಕಟ್ಟಲ್ಪಟ್ಟಿತು ಮತ್ತು ಅದು ಅನೇಕ ನಾಯಕರನ್ನು ಹುಟ್ಟುಹಾಕಿತು.

**-ಎಂ. ಮುನಿರಾಜು,** ಹೊಸಕೋಟೆ

'ಹೊಸ ಮನುಷ್ಯ' ಎಂಬ ಮಾಸಿಕವನ್ನು ನೀವು ಮೂರು ವರ್ಷಗಳಿಂದ ಹೊರತರುತ್ತಿರುವುದು ಅಭಿನಂದನೀಯ. ನನ್ನ ಕುರಿತು ವಿಷ್ಣುನಾಯ್ಕರು ಬರೆದ ಲೇಖನ ಪ್ರಕಟವಾಗಿರುವ ಸಂಚಿಕೆಯನ್ನು ನೋಡಿದೆ. ಇಂಥದೊಂದು ಸಮಾಜವಾದಿ ಪತ್ರಿಕೆ ಅಗತ್ಯವಿತ್ತು. ಅದನ್ನು 'ಹೊಸ ಮನುಷ್ಯ' ಸಮರ್ಥವಾಗಿ ತುಂಬಿದೆ. ಪತ್ರಿಕೆಯ ವಾಚಕರ ಬಳಗ ಸಾಕಷ್ಟು ಬೆಳೆದಿದೆ ಎಂಬುದನ್ನು ನನ್ನ ಕುರಿತ ಲೇಖನ ಓದಿ ಹಲವಾರು ಕಡೆಯಿಂದ ನನಗೆ ಬಂದ ದೂರವಾಣಿ ಕರೆಗಳು ಮನದಟ್ಟು ಮಾಡಿದೆ.

**-ಅಮ್ಮೆಂಬಳ ಆನಂದ,** ಮಣಿಪಾಲ

'ಮಂಗಳಯಾನ'ದ ಯಶಸ್ಸಿನ ಹಿಂದಿರುವವರು ಸಣ್ಣ ಊರುಗಳ ಅಪ್ರತಿಷ್ಠಿತ ಕಾಲೇಜುಗಳಲ್ಲಿ ಓದಿದ ಪ್ರತಿಭಾವಂತರು ಎಂಬ ನಿಮ್ಮ ಮಾತು ನಿಜ. ಗುಡಿಬಂಡೆ ತಾಲ್ಲೂಕಿನ ಕುಗ್ರಾಮವೊಂದರ ವಾಲ್ಮೀಕಿ ಜನಾಂಗದ ಗುರಪ್ಪ ಎಂಬ ಹುಡುಗ ಕೂಡ ಈ ಯಶಸ್ಸಿನ ಹಿಂದಿದ್ದಾನೆ ಎಂಬುದು ಬಹಳ ಜನಕ್ಕೆ ಗೊತ್ತಿದ್ದಂತಿಲ್ಲ.

**-ಪ್ರೊ. ಎಂ.ಜಿ.ಚಂದ್ರಶೇಖರಯ್ಯ,** ದೊಡ್ಡಬಳ್ಳಾಪುರ

'ಪ್ರಜಾವಾಣಿ'ಯಲ್ಲಿ ಪ್ರಕಟವಾಗದ ನಿಮ್ಮ ಪತ್ರ ಓದಿ ನಮ್ಮ ದೊಡ್ಡ ಪತ್ರಿಕೆಗಳಿಗೆ ಬಡಿದಿರುವ ದೊಡ್ಡ ರೋಗ ಎಂತಹುದು ಎಂಬುದು ಗೊತ್ತಾಯಿತು..

**-ಎಂ.ಎನ್. ಶಂಕರ್,** ಮಂಡ್ಯ

'ಹೊಸ ಮನುಷ್ಯ'ದ ವಿಶೇಷ ಸಂಚಿಕೆಯಲ್ಲಿನ ವಿಜಯೇಂದ್ರ ಪಾಟೀಲರ 'ನಾನೇಕೆ ಬರೆಯುವುದಿಲ್ಲ?' ಎಂಬ ಲಲಿತ ಪ್ರಬಂಧ ನಕ್ಕು ನಲಿಸಿತು. ಹೊಟ್ಟೆ ಹಿಡಿದು ನಕ್ಕೆ. ತುಂಬ ದಿನವಾಗಿತ್ತು ಇಷ್ಟು ಒಳ್ಳೆಯ ಲಲಿತ ಪ್ರಬಂಧ ಓದಿ.

**-ಸಂಗೀತಾ ಶೆಣೈ,** ಬೆಂಗಳೂರು

# ಕುಪ್ಪಳ್ಳಿಯಲ್ಲಿ ಆಧುನಿಕತೆಯೊಂದಿಗೆ ಮುಖಾಮುಖಿ: ಅಧ್ಯಯನ ಶಿಬಿರ: ಒಂದು ವರದಿ



**ಲೋ**ಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನವು ಅಕ್ಟೋಬರ್ ೧೯ ಮತ್ತು ೨೦ರಂದು ಕುಪ್ಪಳ್ಳಿಯಲ್ಲಿ 'ಆಧುನಿಕತೆಯೊಂದಿಗೆ ಮುಖಾಮುಖಿ' ಎಂಬ ವಿಷಯದ ಕುರಿತು ಅಧ್ಯಯನ ಶಿಬಿರವನ್ನು ಏರ್ಪಡಿಸಿತ್ತು. ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ ಹಾಗೂ ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆಯ ಸಹಯೋಗದೊಂದಿಗೆ ಈ ಶಿಬಿರ ನಡೆಯಿತು.

ಶಿಬಿರವನ್ನು ಉದ್ಘಾಟಿಸಿದ ರೈತ ಋಷಿ ಎಂದೇ ಪ್ರಸಿದ್ಧರಾದ ನಾಡೋಜ ಡಾ.ಎಲ್.ನಾರಾಯಣರೆಡ್ಡಿ ಆಧುನಿಕತೆಯಿಂದ ನಮ್ಮ ಅಗತ್ಯಗಳು ಮಿತಿಮೀರಿ ಹೆಚ್ಚುವಂತಾಗಿದ್ದು, ಮನುಷ್ಯನ ಜೀವನಕ್ಕೆ ಅಗತ್ಯವಾಗಿರುವ ನೆಮ್ಮದಿ, ಪ್ರೀತಿಯ ಬದಲು ಗೌರವ ಮತ್ತು ಹಣಕ್ಕೆ ದುಂಬಾಲು ಬೀಳುತ್ತಿರುವ ಪ್ರವೃತ್ತಿ ಅಧಿಕವಾಗುತ್ತಿರುವ ಬಗೆಯನ್ನು ವಿವರಿಸಿದರು.

ಆಧುನಿಕ ತಂತ್ರಜ್ಞಾನವನ್ನು ಎಷ್ಟು ಬೇಕೋ ಅಷ್ಟನ್ನು ಬಳಸುವ ವಿವೇಕ ನಮಗೆ ಇರಬೇಕು. ಆದರೆ ದೃಶ್ಯ ಮಾಧ್ಯಮ ಇಂತಹ ವಿವೇಕವನ್ನು ಮರೆಸುತ್ತಿದೆ. ಇನ್ನೊಬ್ಬರ ಸಂತೋಷಕ್ಕಾಗಿ ಬದುಕುವ ಕೆಟ್ಟ ಮಾದರಿಯನ್ನು ಆಧುನಿಕತೆ ಸೃಷ್ಟಿಸಿದೆ ಎಂದರು. ಫಲವತ್ತಾದ ಭೂಮಿ, ದನಕರುಗಳು, ಮರ ಗಿಡಗಳು, ಆರೋಗ್ಯವಂತರಾಗಿ, ಶಕ್ತಿವಂತರಾಗಿ ದುಡಿಯುವ ಜನ ಸಮಾಜದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇದ್ದರೆ ಅದು ಅಭಿವೃದ್ಧಿಯ ಸಂಕೇತ. ಇವುಗಳನ್ನು ಬಿಟ್ಟು ಗಗನಚುಂಬಿ ಕಟ್ಟಡ, ಅಗಲದ ರಸ್ತೆ ಇದ್ದ ಮಾತ್ರಕ್ಕೆ ಅದನ್ನು ಅಭಿವೃದ್ಧಿ ಎನ್ನಲಾಗದು ಎಂದು ಹೇಳಿದರು.

ಮೊದಲ ಗೋಷ್ಠಿಯಲ್ಲಿ 'ಆಧುನಿಕತೆ: ಒಂದು ಚಾರಿತ್ರಿಕ ಮತ್ತು ತಾತ್ವಿಕ ಹಿನ್ನಲೆ' ಎಂಬ ವಿಷಯದ ಕುರಿತು ಲೇಖಕ ಡಿ.ಎಸ್.ನಾಗಭೂಷಣ್ ಮಾತನಾಡಿ ೧೫-೧೬ನೇ ಶತಮಾನದಲ್ಲಿ ಯುರೋಪ್‌ನಲ್ಲಿ ಆರಂಭಗೊಂಡ 'ಪುನರುಜ್ಜೀವನ'ದ ಸಂದರ್ಭದಲ್ಲಿ ಹುಟ್ಟಿದ ಆಧುನಿಕತೆಯ ಪರಿಕಲ್ಪನೆ ವಿಜ್ಞಾನ-ತಂತ್ರಜ್ಞಾನ ಮತ್ತು ವೈಚಾರಿಕತೆಗಳನ್ನು ಮುಂದಿಟ್ಟುಕೊಂಡು ಇಂದಿನ ಜಾಗತೀಕರಣದ ಸಂದರ್ಭದವರೆಗೆ ಬೆಳೆದು ಬಂದ ರೀತಿಯನ್ನು ವಿವರಿಸಿದರು.

ನಮ್ಮ ಪರಂಪರೆಯ ಬಗ್ಗೆ ಸಾರಾಸಗಟಾದ ಅಪನಂಬಿಕೆ, ಅಪಮೌಲ್ಯ ಸೃಷ್ಟಿಸಿ ಆತ್ಮಕ್ಕೆ ಅಸ್ತಿತ್ವವೇ ಇಲ್ಲದ ದೇಹವೇ ಪ್ರಧಾನವಾದ ಜೀವನ ದೃಷ್ಟಿ ಮತ್ತು ಜೀವನಕ್ರಮಗಳ ಮೂಲಕ ನಮ್ಮನ್ನು ನಾವು ಕಳೆದುಕೊಳ್ಳುವಂತಹ ಮೈ-ಮರೆಯುವಿಕೆಯ ಮನೋಭೂಮಿಕೆಯನ್ನು ಆಧುನಿಕತೆ ನಿರ್ಮಾಣ ಮಾಡಿದೆ. ಈ ಕಾರಣಕ್ಕೆ ಗಾಂಧಿ ಜಯಂತಿ ದಿನ ಬೀದಿಯ ಕಸ ಗುಡಿಸಿದಾಕ್ಷಣ ಅದು ಗಾಂಧಿಗೆ ನೀಡುವ ಸಂಪೂರ್ಣ ಗೌರವ ಎಂದು ಭಾವಿಸಿ ಗಾಂಧಿಯ ಉಳಿದ ವಿಚಾರಗಳನ್ನು ಮೂಲೆಗೆ ತಳ್ಳುವಂತಾಗಿದೆ. ಬೀದಿಯಲ್ಲಿ ಕಸ ಸೃಷ್ಟಿಯಾಗಿರುವುದು ಆಧುನಿಕ ನಾಗರೀಕತೆ ನಮ್ಮ ಮನದಲ್ಲಿ ಸೃಷ್ಟಿಸಿರುವ ಕಸದಿಂದಾಗಿಯೇ ಎಂಬ ಸತ್ಯದ ಬಗ್ಗೆ ನಮ್ಮಲ್ಲಿ ವಿಸ್ಮೃತಿ ಮೂಡಿದೆ ಎಂದು ಹೇಳಿದರು.

'ಆಧುನಿಕತೆ ಮತ್ತು ಸಮಾಜವಾದ' ಕುರಿತು ಮಂಗಳೂರು ವಿ.ವಿ. ರಾಜ್ಯಶಾಸ್ತ್ರ ಪ್ರಾಧ್ಯಾಪಕ ಡಾ.ರಾಜಾರಾಮ್ ತೋಳ್ಪಾಡಿ ಮಾತನಾಡಿ ಆಧುನಿಕತೆಯನ್ನು ಅದರ ಚಾರಿತ್ರಿಕ ಮತ್ತು ವೈಚಾರಿಕತೆಯ ನೆಲೆಗಳ ಮೂಲಕ ವಿಶ್ಲೇಷಿಸಿದರು. ಸಮಾಜವಾದ ಕೂಡ ಆಧುನಿಕತೆಯ ಒಂದು ಉತ್ಪನ್ನ. ಆಧುನಿಕತೆಗೆ ಸಮಾಜವಾದ ಒಂದು ಪ್ರತಿಕ್ರಿಯೆ ಕೂಡ. ಹಾಗೆಂದು ಜಗತ್ತಿನಾದ್ಯಂತ ಒಂದೇ ಬಗೆಯ ಆಧುನಿಕತೆ ಇದೆ ಎಂದು ಹೇಳುವುದು ಕಷ್ಟ. ಕೆಲವೊಮ್ಮೆ ಗೊತ್ತಿದ್ದು, ಕೆಲವೊಮ್ಮೆ ಗೊತ್ತಿಲ್ಲದಂತೆ ಆಧುನಿಕತೆ ಬೇರೆ ಬೇರೆ ನೆಲೆಗಳಲ್ಲಿ ತನ್ನ ವಿಮರ್ಶೆಯನ್ನು ತಾನೆ ಮಾಡಿಕೊಂಡಿರುವ ವಿದ್ಯಮಾನವೂ ನಡೆದಿದೆ ಎಂಬುದನ್ನು ವಿವರಿಸಿದರು.

ಆಧುನಿಕತೆಗೆ ಆಕ್ಷೇಪ, ವಿರೋಧ ಸೂಚಿಸಿದ ಗಾಂಧಿಯನ್ನು ಕೂಡ ಚಾರಿತ್ರಿಕವಾಗಿ ಆಧುನಿಕ ಚಿಂತಕ ಎಂದೇ ಹೇಳಬಹುದು. ಇವತ್ತಿನ ಜಾಗತೀಕರಣದ ಕಾಲಘಟ್ಟದಲ್ಲಿ ನೋಡಿದರೆ ಹಿಂದ್ ಸ್ವರಾಜ್ ಕೃತಿಯನ್ನು ಆಧುನಿಕ ಬಂಡವಾಳಶಾಹಿಯ ವಿಮರ್ಶೆ ಎನ್ನಬಹುದೆ ಎಂದು ಪ್ರಶ್ನಿಸಿದ ಅವರು ಸ್ವಾತಂತ್ರ್ಯ, ಸಮಾನತೆ, ಸಹೋದರತೆಯ ಮೌಲ್ಯಗಳನ್ನು ಪ್ರದಾನ ಮಾಡಿದ್ದು ಆಧುನಿಕತೆ ಎಂದು ಅಭಿಪ್ರಾಯಪಟ್ಟರು.

ಇದಕ್ಕೆ ಪ್ರತಿಕ್ರಿಯಿಸಿದ ಡಿ.ಎಸ್.ನಾಗಭೂಷಣ್ ಸ್ವಾತಂತ್ರ್ಯ, ಸಮಾನತೆ, ಸಹೋದರತೆ ಎಂಬುವು ಆಧುನಿಕತೆ ಕೊಟ್ಟ ಮೌಲ್ಯಗಳು ಎಂಬುದು ಸಂಪೂರ್ಣ ನಿಜವಾಗಿದ್ದರೆ ಆಧುನಿಕವೆನ್ನಲಾಗುವ ಇಂದಿನ ಸಮಾಜದಲ್ಲಿ ಇಷ್ಟೊಂದು ಅಗಾಧವಾದ ಅಸಮಾನತೆ ಮತ್ತು ಹಿಂಸೆ ನಿರ್ಮಾಣವಾಗಲು ಹೇಗೆ ಸಾಧ್ಯ ಎಂಬ ಪ್ರಶ್ನೆಯನ್ನು ಮುಂದಿಟ್ಟರು. ಆಧುನಿಕತೆಯು ಜಗತ್ತನ್ನು ಎರಡಾಗಿ ಒಡೆದಿದೆ ಎಂಬ ಮೂಲ ಸತ್ಯದ ನೆಲೆಯಲ್ಲಿ ಈ ಮೌಲ್ಯಗಳ ಚರ್ಚೆ ನಡೆಯಬೇಕಾಗಿದೆ ಎಂದರು. ಈ ಸಂಬಂಧ ವಿಸ್ತೃತವಾದ ವಾಗ್ವಾದ ನಡೆಯಿತು.

'ಆಧುನಿಕತೆ ಮತ್ತು ಸಾಮಾಜಿಕ ರಾಜಕಾರಣ' ಎಂಬ ವಿಷಯದ ಕುರಿತು ಲೇಖಕ ಪ್ರೊ.ಎಚ್.ಗೋವಿಂದಯ್ಯ ಮಾತನಾಡಿ ಕೈಗಾರಿಕಾ ಕ್ರಾಂತಿಯ ನಂತರ ಆಧುನಿಕತೆ ಒಂದು ವ್ಯಸನವಾಗಿ ಮಾರ್ಪಟ್ಟು ಈಗ ಅದು ವಾಸಿಯಾಗದ ಕಾಯಿಲೆಯಾಗಿದೆ. ಅಲ್ಲದೆ ಸದ್ಯದ ಸ್ಥಿತಿಯಲ್ಲಿ ಅದು 'ಆಧುನಿಕಶಾಹಿ' ರೂಪ ಪಡೆದು 'ಗೂಂಡಾಗಿರಿ'ಯ ಸ್ವರೂಪದಲ್ಲೂ ವ್ಯಕ್ತವಾಗುತ್ತಿದೆ. ಬಂಡವಾಳ ಎಂಬುದು ಜನರ ಹಸಿವನ್ನು ನೀಗಿಸುವ ಸಾಧನವಾಗದೆ ಸುಖ ಲೋಲುಪತೆಗಳ ಸಾಧನವಾಗಿ ಬಳಕೆಯಾಗುತ್ತಿರುವುದನ್ನು ನೋಡಿದರೆ ಅದರ ಗೂಂಡಾಗಿರಿಯ ರೂಪ ಸ್ಪಷ್ಟವಾಗುತ್ತಿದೆ ಎಂದರು.

ಆಧುನಿಕತೆ ನಾಗರಿಕತೆಯ ಷಡ್ಯಂತ್ರವನ್ನು ಸಮರ್ಥವಾಗಿ ಪ್ರತಿರೋಧಿಸಿದ್ದು ಗಾಂಧಿ ಒಬ್ಬರೆ. ಈ ವಿಷಯದಲ್ಲಿ ಅವರ ಜೊತೆ ಬೆಂಬಲಕ್ಕೆ ನಿಂತವರು ಯಾರು ಎಂದು ನೋಡಿದರೆ ನಿರಾಶೆಯಾಗುತ್ತದೆ. ಲೋಹಿಯಾ, ಅಂಬೇಡ್ಕರ್ ಕೂಡ ಗಾಂಧಿಗೆ ಈ ಸಂಬಂಧ ವಿರುದ್ಧವಾಗಿ ಮುಖಾಮುಖಿಯಾದದ್ದು ಅತ್ಯಂತ ವಿಷಾದದ ಸಂಗತಿ ಎಂದು ಹೇಳಿದರು. ಆಧುನಿಕತೆಯ ಲಾಭ ಶೇ.೧೦ರಷ್ಟು ಮಾತ್ರ ದಲಿತರಿಗೆ ದೊರಕುತ್ತಿದೆ. ಆಧುನಿಕತೆಯ ಮೊದಲ ಬಲಿಪಶು ದಲಿತರೆ ಆಗಿದ್ದಾರೆ. ಆದರೆ ಆಧುನಿಕತೆಯ ನಾಗರಿಕತೆಯನ್ನು ವಿರೋಧಿಸಿದ ಕಾರಣಕ್ಕೆ ಗಾಂಧಿ 'ಅಸ್ಪೃಶ್ಯ'ರಾದದ್ದು ವಿಪರ್ಯಾಸದ ಸಂಗತಿ. ಈ ಅರ್ಥದಲ್ಲಿ ಆಧುನಿಕತೆಯ ಮುಖಾಮುಖಿ ದೃಷ್ಟಿಯಲ್ಲಿ ದಲಿತರ ನಿಜವಾದ ಪ್ರತಿನಿಧಿ ಗಾಂಧಿಯೇ ಹೊರತು ಅಂಬೇಡ್ಕರ್ ಅಲ್ಲ ಎಂದು ಅಭಿಪ್ರಾಯಪಟ್ಟರು.

ದಲಿತ ಚಳವಳಿ ಸಾಮಾಜಿಕ ಪರಿವರ್ತನೆಯ ಬದಲು ಕೇವಲ ಜಾತಿ ಸಂಘಟನೆಯಾಗಿ ಯಥಾಸ್ಥಿತಿವಾದಕ್ಕೆ ಮರಳಿರುವುದು ಅಂಬೇಡ್ಕರ್‌ರ ಆಧುನಿಕ ಚಿಂತನೆಯ ಫಲ ಎನ್ನುವಂತೆ ಕಾಣುತ್ತಿದೆ. ದಲಿತರಲ್ಲಿ ಜಾತಿವಾದ ಬೆಳೆಯಲು ಗಾಂಧಿಯನ್ನು ಕಡೆಗಣಿಸಿದ್ದೆ ಕಾರಣವಾಗಿದೆ. ಎಂದರು.

೧೯ರಂದು ನಡೆದ ಮೊದಲ ಗೋಷ್ಠಿಯಲ್ಲಿ 'ಆಧುನಿಕತೆ ಮತ್ತು ಮಹಿಳಾ ವಿಮೋಚನೆ' ಕುರಿತು ಭದ್ರಾವತಿಯ ಸರ್.ಎಂ.ವಿ. ಕಾಲೇಜಿನ ಪ್ರಾಧ್ಯಾಪಕಿ



# ನಮ್ಮ ಸಮಾಜವಾದಿಗಳು

# ಹುಟ್ಟು ಹೋರಾಟಗಾರ ಎಂ. ನಾಗಪ್ಪ



ಅರವತ್ತು–ಎಪ್ಪತ್ತರ ದಶಕ, ಕರ್ನಾಟಕವು ಸಮಾಜವಾದಿ ಚಟುವಟಿಕೆಗಳಿಂದ ತುಂಬಿಹೋಗಿದ್ದ ಕಾಲ. ಸಮಾಜವಾದಿ ನಾಯಕರು ಕರ್ನಾಟಕದ ರಾಜಕಾರಣದಲ್ಲಿ ಸಕ್ರಿಯರಾಗಿದ್ದ ಕಾಲವದು. ತೀರ್ಥಹಳ್ಳಿಯಿಂದ ಶಾಂತವೇರಿ ಗೋಪಾಲಗೌಡರು, ಸೊರಬದಿಂದ ಬಂಗಾರಪ್ಪ, ಮೈಸೂರಿನಿಂದ ಅಜೀಜ್ ಸೇಠ್, ಹೊನ್ನಾಳಿಯಿಂದ ಹಾಲಪ್ಪ, ಶಿಕಾರಿಪುರದಿಂದ ಬಸವಣ್ಣೆಪ್ಪ ಮತ್ತು ರಾಯಚೂರಿನಿಂದ ಎಂ. ನಾಗಪ್ಪನವರು ಇವರೆಲ್ಲ ಕಾಂಗ್ರೆಸ್ ಅಲೆಯ ನಡುವೆ ವಿಧಾನ ಸಭೆಗೆ ಶಾಸಕರಾಗಿ ಆರಿಸಿಬಂದರು. ಇವರಲ್ಲಿ ಎಂ. ನಾಗಪ್ಪನವರು ರಾಯಚೂರು ಮಾತ್ರವೇ ಅಲ್ಲ, ಹೈದ್ರಾಬಾದ್ ಕರ್ನಾಟಕವನ್ನು ಪ್ರತಿನಿಧಿಸಿದ ಖ್ಯಾತ ಸಮಾಜವಾದಿ ನಾಯಕರು.

೧೯೨೮ರಲ್ಲಿ ರಾಯಚೂರು ತಾಲೂಕಿನ ಮಟಮಾರಿ ಗ್ರಾಮದ ರೈತ ಕುಟುಂಬವೊಂದರಲ್ಲಿ ಹುಟ್ಟಿ ಬೆಳೆದ ನಾಗಪ್ಪನವರಿಗೆ ಬಾಲ್ಯದಲ್ಲಿ ಓದಿನ ತೀವ್ರತೆ ಎಷ್ಟಿತ್ತೆಂದರೆ, ಅದಕ್ಕಾಗಿ ಅವರು ಮನೆಯವರ ಮಾತನ್ನು ಮೀರಿ ಚಿಕ್ಕ ವಯಸ್ಸಿನಲ್ಲಿ ಪಾಟಿ ಚೀಲ ಹೆಗಲಿಗೇರಿಸಿ ಸ್ವಗ್ರಾಮ ತೊರೆದು ರಾಯಚೂರು ಸೇರಿದರು. ಶಾಲೆಯಲ್ಲಿ ಓದುತ್ತಾ ವ್ಯಾಸಂಗದ ಹಸಿವನ್ನು ಹಿಂಗಿಸಿಕೊಳ್ಳುತ್ತಿರುವಾಗಲೇ 'ಆರ್ಯ ಸಮಾಜ'ದ ಭಾಷಣಗಳಿಂದ ಆಕರ್ಷಿತರಾದರು. ಅದೇ ವೇಳೆಗೆ ಹೈದ್ರಾಬಾದ್ ನಿಜಾಮನ ಕಪಿಮುಷ್ಟಿಯಿಂದ ಬಿಡುಗಡೆಗೆ ಹಂಬಲಿಸುತ್ತಿದ್ದ ಹೈದ್ರಾಬಾದ್ ಪ್ರಾಂತ ವಿಮೋಚನಾ ಚಳುವಳಿಗೆ ಧುಮುಕಿದರು. ತಮ್ಮ ಕಾಲೇಜು ವಿದ್ಯಾರ್ಥಿ ಜೀವನವನ್ನು ಕಡೆಗಣಿಸಿ ನಿಂತರು. ನಿಜಾಮ ಸರಕಾರವನ್ನು ದುಃಸ್ವಪ್ನವಾಗಿ ಕಾಡಿದರು. ಭೂಗತರಾಗಿ ಉಳಿದು ವಿಧ್ವಂಸಕ ಕೃತ್ಯಗಳ ಮೂಲಕ ನಿಜಾಮ ಸತ್ತೆಗೆ ತಲೆನೋವಾದರು. ೧೯೪೭ ಆಗಸ್ಟ್ ೧೫ರ ಮಧ್ಯರಾತ್ರಿ ರಾಯಚೂರಿನ ಸಾಥ್ ಕಛೇರಿಯ ಮೇಲೆ ಹಾರಾಡುತ್ತಿದ್ದ ನಿಜಾಮನ ಧ್ವಜವನ್ನು ಕಿತ್ತುಹಾಕಿ ಸ್ವತಂತ್ರ ಭಾರತದ ತ್ರಿವರ್ಣ ಧ್ವಜವನ್ನು ಹಾರಿಸಿದರು. ಈ ಸಾಹಸದಲ್ಲಿ ಸ್ವಲ್ಪವೇ ಎಡವಟ್ಟಾಗಿದ್ದರೂ ನಾಗಪ್ಪನವರು ಜೀವ ಸಹಿತ ಉಳಿಯುವುದು ಕಷ್ಟವಿತ್ತು.

ಮುಂದೆ ನಿಜಾಮ ಸೋಲೊಪ್ಪಿ ಹೈದ್ರಾಬಾದ್ ಪ್ರಾಂತವು ಸ್ವತಂತ್ರ ಭಾರತದಲ್ಲಿ ಸೇರಿಹೋದ ಮೇಲೆ ಉಸ್ಮಾನಿಯ ವಿಶ್ವವಿದ್ಯಾಲಯದಿಂದ ಬಿ.ಎ. ಮತ್ತು ಕಾನೂನು ಪದವಿ ಪೂರ್ಣಗೊಳಿಸಿ ರಾಯಚೂರಿನಲ್ಲಿ ವಕೀಲರಾಗಿ ನಿಂತ ನಾಗಪ್ಪನವರು, ಸ್ವಾತಂತ್ರ್ಯ ಹೋರಾಟದಿಂದ ಸಮಾಜವಾದಿ ಹೋರಾಟಕ್ಕೆ ತಮ್ಮ ಹೋರಾಟದ ಬದುಕನ್ನು ಬದಲಿಸಿಕೊಂಡರು. ಡಾ. ರಾಮಮನೋಹರ ಲೋಹಿಯಾ ಅವರ 'ಮ್ಯಾನ್‌ಕೈಂಡ್' ಪತ್ರಿಕೆಯನ್ನು ಓದುತ್ತ ಬೆಳೆದ ನಾಗಪ್ಪನವರು ತಮ್ಮೊಳಗೆ ಸಮಾಜವಾದದ ಬೇರುಗಳನ್ನು ಗಟ್ಟಿಗೊಳಿಸುತ್ತಲೇ ಬಂದರು.

ಶ್ರಮಜೀವಿಗಳ ನ್ಯಾಯಕ್ಕಾಗಿ ಅಹೋರಾತ್ರಿ ಹೋರಾಡುತ್ತಾ ಬಂದುದು ನಾಗಪ್ಪನವರ ಜೀವನದ ವಿಶೇಷತೆ. ೧೯೪೮ ರಿಂದ ೧೯೬೮ರ ವರೆಗೆ ರಾಯಚೂರು ಪುರಸಭೆ ನೌಕರರ ಸಂಘದ ಅಧ್ಯಕ್ಷರಾಗಿ ದುಡಿದ ಅವರು, ರೈಲ್ವೇ ಮತ್ತು ರಸ್ತೆ ಸಾರಿಗೆ ನೌಕರರ ಸಂಘದ ಅಧ್ಯಕ್ಷರಾಗಿಯೂ ಶ್ರಮಿಕ ಬಂಧುಗಳ ಹಿತಕ್ಕೆ ಹೋರಾಡಿದರು. ರಾಯಚೂರು ಜಿಲ್ಲಾ ಗುಮಾಸ್ತರ ಸಂಘದ ಸ್ಥಾಪಕ ಅಧ್ಯಕ್ಷರಾದ ಅವರು ಗಂಜ್ ಹಮಾಲರ ಸಂಘದ ನೇತಾರರಾಗಿಯೂ ದುಡಿಯುವ ವರ್ಗದ ನ್ಯಾಯಕ್ಕಾಗಿ ಹೋರಾಟವನ್ನು ಮಾಡಿದರು.

೧೯೫೧ರಲ್ಲಿ ಕಾನೂನು ವ್ಯಾಸಂಗವನ್ನು ಮಾಡುತ್ತಲೇ ರಾಯಚೂರು ಪುರಸಭೆಗೆ ಸ್ಪರ್ಧಿಸಿ ಆರಿಸಿಬರುವ ಮೂಲಕ ತಮ್ಮ ರಾಜಕೀಯ ಜೀವನವನ್ನು ತುಳಿತಕ್ಕೆ ಒಳಗಾದವರ ಪರವಾಗಿ ಆರಂಭಿಸಿದ ನಾಗಪ್ಪನವರು, ಡಾ. ಲೋಹಿಯಾ ಅವರ 'ಸಂಯುಕ್ತ ಸಮಾಜವಾದಿ ಪಕ್ಷ'ದಿಂದ ಚುನಾವಣೆಗೆ ನಿಂತು ರಾಯಚೂರಿನಿಂದ ವಿಧಾನ ಸಭೆಗೆ ಆರಿಸಿಬಂದರು. ಅವರು ಶಾಸಕರಾಗಿದ್ದ ಅವಧಿ(೧೯೬೭–೭೧) ಕರ್ನಾಟಕದ ರಾಜಕೀಯ ಇತಿಹಾಸದಲ್ಲಿಯೇ ಮಹತ್ವದ್ದು. ಇಂದು ನಿಧಾನಸಭೆಯೆಂದು ಛೇಡಿಸಿಕೊಳ್ಳುತ್ತಿರುವ ವಿಧಾನ ಸಭೆಯ ಕಲಾಪಗಳಿಗೆ ಮಿಂಚಿನ ಸಂಚಾರವನ್ನು ತಂದವರು ನಾಗಪ್ಪನವರು. ಶಾಂತವೇರಿ ಗೋಪಾಲಗೌಡರ ಶಿಷ್ಯರಾಗಿ ಅವರ ಅನುಪಸ್ಥಿತಿಯಲ್ಲಿ ಅವರ ಸ್ಥಾನವನ್ನು ಸಮರ್ಥವಾಗಿ ತುಂಬಿಕೊಟ್ಟ ಹೆಗ್ಗಳಿಕೆ ಅವರದು. ತಮ್ಮ ಅದ್ವಿತೀಯ ಕಾನೂನು ಪಾಂಡಿತ್ಯದಿಂದ, ಸಂವಿಧಾನ ಕಲಮುಗಳ ಹಾಗೂ ವಿಧಾನಮಂಡಲದ ಶಿಸ್ತು–ಸಂಹಿತೆಗಳ ತಲಸ್ಪರ್ಶಿ ಅಧ್ಯಯನದಿಂದ, ನಿರರ್ಗಳ ವಾಗ್ಝರಿಯಿಂದ ವಿಧಾನ ಸಭೆಯ ಘಟಾನುಘಟಿಗಳನ್ನು ನಡುಗಿಸಿಬಿಟ್ಟಿದ್ದರು. ವಿಧಾನ ಸಭೆಯಲ್ಲಿ ನಾಗಪ್ಪನವರು ಎದ್ದುನಿಂತರೆ ಸಭಾಧ್ಯಕ್ಷರ ಕಣ್ಣು–ಕಿವಿಯೆಲ್ಲಾ ಇವರ ಕಡೆಗೇ ಇರುತ್ತಿತ್ತು. ಕೇಳಿದವರನ್ನು ಪರವಶಗೊಳಿಸುವ ಭಾಷಾಶಕ್ತಿ, ತಿದ್ದುವ–ತಿವಿಯುವ ವೈಖರಿ ಇವರ ಮಾತಿಗಿತ್ತು. ಪಟ್ಟುಹಿಡಿದು ಮಾತನಾಡುವುದು, ಆಡಿದ್ದನ್ನು ಸಮರ್ಥಿಸಿಕೊಳ್ಳುವುದು ನಾಗಪ್ಪನವರ ಶೈಲಿ. ೧೯೬೭ರಿಂದ ೧೯೭೧ರ ಅವಧಿಯ ರಾಜ್ಯದ ಪ್ರಮುಖ ದಿನಪತ್ರಿಕೆಗಳನ್ನು ತಿರುವಿ ಹಾಕಿದರೆ ಸಾಕು, ಅವುಗಳ ತುಂಬೆಲ್ಲಾ ನಾಗಪ್ಪ ಅವರ ಗುಣಗಾನವೇ ತುಂಬಿಕೊಂಡಿದೆ.

ಕೃಷ್ಣಾ ಮೇಲ್ದಂಡೆಗೆ ಸರಕಾರವು ಸಕರಾತ್ಮಕವಾಗಿ ಸ್ಪಂದಿಸದೇ ಇದ್ದಾಗ, ಆಂಧ್ರದ ಗುಂಡಾಲ ಯೋಜನೆಯನ್ನು ಪ್ರತಿಭಟಿಸುವಾಗ, ಸರಕಾರದ ನೇಮಕಾತಿಯಲ್ಲಿ ಹೈದ್ರಾಬಾದ್ ಕರ್ನಾಟಕದಿಂದ ಸರಿಯಾದ ಪ್ರಾತಿನಿಧ್ಯ ಇಲ್ಲದಿದ್ದಾಗ, ಸರಕಾರ ಶಾಲೆ ಕಟ್ಟಿಸದೇ ಐ.ಬಿ. ಕಟ್ಟಿಸಲು ಮುಂದಾದಾಗ, ರೈತರಿಗೆ ಆಪತ್ಕಾಲದಲ್ಲಿ ಸರಕಾರ ನೆರವಾಗದೇ ಹೋದಾಗ, ರಾಷ್ಟ್ರದ ಸಮಗ್ರತೆಗೆ ಧಕ್ಕೆ ಬಂದಾಗ–ಹೀಗೆ ಹಲವು ಹತ್ತು ಕಾರಣಗಳಿಗೆ ಶ್ರೀ ನಾಗಪ್ಪನವರು ಸಕಾಲಿಕವಾಗಿ, ಸಮರ್ಥವಾಗಿ ದನಿ ಎತ್ತಿದ್ದಾರೆ, ಲೋಪಗಳಿಗೆ ಗುಡುಗಿದ್ದಾರೆ, ಆಳುವ ಸರಕಾರವನ್ನು ಪೇಚಿಗೆ ಸಿಲುಕಿಸಿದ್ದಾರೆ.

೧೯೬೯ರಲ್ಲಿ ಕಾಂಗ್ರೆಸ್ ಪಕ್ಷ ಇಬ್ಭಾಗವಾಗಿ ವೀರೇಂದ್ರ ಪಾಟೀಲರ ಸರ್ಕಾರ ಅಲ್ಪಮತಕ್ಕೆ ಇಳಿದಾಗ ಗೋಪಾಲಗೌಡರ ನೇತೃತ್ವದ ಸಮ್ಮಿಶ್ರ ಸರ್ಕಾರವೊಂದರ ಪ್ರಯತ್ನವೊಂದನ್ನು ಅವರ ಅಭಿಮಾನಿಗಳು ನಡೆಸಿದರು. ಇದನ್ನು ಸ್ವತಃ ಗೋಪಾಲಗೌಡರೇ ತಮ್ಮ ತೀವ್ರ ಅನಾರೋಗ್ಯದ ಕಾರಣದಿಂದಾಗಿ ಒಪ್ಪದಿದ್ದಾಗ ಸೋಷಲಿಸ್ಟರೊಬ್ಬರನ್ನು ಉಪಮುಖ್ಯಮಂತ್ರಿಯಾಗಿ ಮಾಡುವ ಪ್ರಸ್ತಾಪ ಬಂದು ಆ ಸ್ಥಾನಕ್ಕೆ ಎಂ. ನಾಗಪ್ಪನವರ ಹೆಸರು ಪ್ರಸ್ತಾಪಕ್ಕೆ ಬಂತು. ಆಗ ಸರ್ಕಾರ ರಚನೆಯ ಮಾತುಕತೆ ನಡೆಸುತ್ತಿದ್ದ ಹಿರಿಯ ಕಾಂಗ್ರೆಸ್ ರಾಜಕಾರಣಿಯೊಬ್ಬರು ನಾಗಪ್ಪನವರು ಲಿಂಗಾಯ್ತರಾಗಿರುವುದರಿಂದ ರಾಜಕೀಯ ಸಮೀಕರಣ ಸರಿಯಾಗಲಾರದು ಎಂದಾಗ ಗೋಪಾಲಗೌಡರು ನಾಗಪ್ಪನವರನ್ನು ಲಿಂಗಾಯ್ತರೆಂದು ಗುರುತಿಸುವುದನ್ನು ತೀವ್ರವಾಗಿ ಪ್ರತಿಭಟಿಸಿದರು. ನಾಗಪ್ಪನವರ ಹಣೆಯ ಮೇಲಿನ ವಿಭೂತಿ ಲಾಂಛನ ಎಂದೂ ಜಾತೀಯ ಲಾಂಛನವಾಗಲಿಲ್ಲ ಎಂಬುದು ಅವರೊಂದಿಗೆ ಒಡನಾಡಿದ ಸರ್ವಧರ್ಮ ಮತ್ತು ಜಾತಿಗಳಿಗೆ ಸೇರಿದ ವಿಶಾಲ ಬಳಗಕ್ಕೆಲ್ಲ ಚೆನ್ನಾಗಿ ಗೊತ್ತು.

ವೃತ್ತಿಯಿಂದ ವಕೀಲರಾಗಿದ್ದ ನಾಗಪ್ಪನವರು ರಾಯಚೂರಿನ ತಾರಾನಾಥ ಶಿಕ್ಷಣ ಸಂಸ್ಥೆಗೆ ನಾಲ್ಕು ದಶಕಗಳ ಕಾಲ ಕಾರ್ಯದರ್ಶಿಗಳಾಗಿ ಸ್ಮರಣೀಯ ಸೇವೆ ಸಲ್ಲಿಸಿದರು. ಇವರ ಸೇವಾ ಬದುಕಿನ ಅನನ್ಯತೆಗೆ ಗುಲಬರ್ಗಾ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ನೀಡಿತು. 'ಪ್ರತಿಭಾವಂತ ಸಂಸದೀಯ ಪಟು' ಎಂದು ಕರ್ನಾಟಕ ಸರಕಾರವು ಗೌರವಿಸಿತು. ೧೯೭೭ರಲ್ಲಿ ತುರ್ತುಪರಿಸ್ಥಿತಿಯಿಂದಾಗಿ ಜನತಾ ಪಕ್ಷ ಅಧಿಕಾರಕ್ಕೆ ಬಂದಿತು. ಈ ಹೊಸ ಪಕ್ಷದಲ್ಲಿ ಸಮಾಜವಾದಿ ನಾಯಕರು ತಮ್ಮ ನೆಲೆಯನ್ನು ಕಂಡುಕೊಂಡರು. ಕೆಲವರು ಪಕ್ಷಾಂತರಕ್ಕೂ ಮನಸ್ಸು ಮಾಡಿದರು. ಆದರೆ ಅಧಿಕಾರದ ಬೆನ್ನುಹತ್ತದ ನಾಗಪ್ಪನವರು ಜೀವನಪೂರ್ತಿ ಸಮಾಜವಾದಿ ಸಿದ್ಧಾಂತಕ್ಕೆ ಅಂಟಿಕೊಂಡು ಬಾಳಿ ೨೦೧೧ ರಲ್ಲಿ ತಮ್ಮ ಇಹಯಾತ್ರೆಯನ್ನು ಮುಗಿಸಿದರು.

**–ಡಾ. ಬಸವಲಿಂಗ ಸೊಪ್ಪಿನ ಮಠ**

## ಪ್ರೊ. ಬಿ. ಕೃಷ್ಣಪ್ಪ ನೆನಪಿನ ಮಾಲೆ-೨೫

–ಇಂದಿರಾ ಬಿ. ಕೃಷ್ಣಪ್ಪ

# ಸೋದರ ವಿಜಯ ಪಾಟೀಲನನ್ನು ಹುಡುಕುತ್ತಾ...

**ಸು**ಮಾರು ಇದೇ ದಿನಗಳಲ್ಲಿ ಬಂದ ಪತ್ರವೊಂದು ನನ್ನ ಗಮನ ಸೆಳೆದಿತ್ತು. ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಸೊನೆಗಾರ ವೆಂಕಟರಮಣಪ್ಪನವರು ಕೃಷ್ಣಪ್ಪನವರಿಗೆ ಅಕ್ಕಸಾಲಿಗರ ಕಷ್ಟಗಳ ಬಗ್ಗೆ ಪತ್ರ ಬರೆದು "ಇಲ್ಲಿ ಯಾರೂ ನಮ್ಮ ದುಸ್ಥಿತಿಯನ್ನು ಕೇಳುವವರಿಲ್ಲ. ಎಲ್ಲರೂ ಸಾಹುಕಾರರ ಪರವಾಗಿಯೇ ಕೆಲಸ ಮಾಡುತ್ತಾರೆ. ಬಡವರಿಗೆ ಮಾತಿನಲ್ಲೇ ಸಹಾನುಭೂತಿ ತೋರಿಸುತ್ತಾರೆ. ಆದರೆ ನೀವು ಅದೃಷ್ಟವಶಾತ್ ನನ್ನ ಕಷ್ಟವನ್ನು ಸಾವಧಾನವಾಗಿ ಕೇಳಿ, ಡಿಸಿಯವರಲ್ಲಿ ಸ್ಪಷ್ಟವಾಗಿ ಮಾತನಾಡಿ, ನನಗೊಂದು ಮಾರ್ಗ ತೋರಿಸಿರುವಿರಿ. ನೀವು ಡಿಸಿಯವರಲ್ಲಿ ಅಕ್ಕಸಾಲಿಗರ ದುಃಸ್ಥಿತಿಯನ್ನು ಹೇಳಿ, ಅವರಿಂದ ಎಸಿಯವರಿಗೆ ಜಮೀನನ್ನು ಸ್ವಾಧೀನ ತೆಗೆದುಕೊಳ್ಳುವ ಕ್ರಮ ಜರುಗಿಸಲು ತಿಳಿಸಿದ್ದೀರಿ. ಆದರೆ ೧೫ದಿನ ಕಳೆದರೂ ಏನೂ ತಿಳಿಯಲಿಲ್ಲ. ಆದ್ದರಿಂದ ಶಿಕಾರಿಪುರದ ಈ ಅಕ್ಕಸಾಲಿಗರ ಪರವಾಗಿ ಮತ್ತೊಮ್ಮೆ ಡಿಸಿಯವರಿಗೆ ಮನವಿ ಮಾಡಿಕೊಳ್ಳಬೇಕೆಂದು, ನಿಮ್ಮ ಧೃಡ ಸಂಕಲ್ಪದಿಂದ ಈ ಕೆಲಸ ಆಗುವುದು" ಎಂದು ಬರೆದುಕೊಂಡಿದ್ದರು. ಸಮುದಾಯಗಳಲ್ಲಿ ನಡೆಯುವ ಅನ್ಯಾಯ–ಶೋಷಣೆಗಳು, ಅದು ದೊಡ್ಡದಿರಲಿ ಅಥವಾ ಚಿಕ್ಕದಿರಲಿ, ಸಕಾರಾತ್ಮಕವಾಗಿ ಸ್ಪಂದಿಸುವ ಗುಣ ಕೃಷ್ಣಪ್ಪನವರದ್ದಾಗಿತ್ತು ಎಂಬುದನ್ನು ನಾನು ಕಂಡುಕೊಂಡೆ. ಶಿಕಾರಿಪುರದ ವೆಂಕಟರಮಣಪ್ಪನವರಿಂದ ಪತ್ರ ಮತ್ತೆ ಬಾರದ್ದರಿಂದ ಅವರ ಕೆಲಸ ಆಗಿರಬೇಕೆಂದು ತಿಳಿದುಕೊಂಡೆ. ಎಲ್ಲಾ ಸಮುದಾಯದ ನೋವಿಗೆ ಕಣ್ಣೀರಿಗೆ ಸ್ಪಂದಿಸುವ ಹೃದಯವಂತಿಕೆ ಇದ್ದಾಗಲೇ ಚಳುವಳಿಯೊಂದು ಜನರ ನೋವಿಗೆ ಮಿಡಿವ ಪ್ರಾಣಮಿತ್ರನಾಗಬಲ್ಲದು ಎಂಬುದನ್ನು ಮೇಲಿನ ಎರಡು ಸತ್ಯ ಘಟನೆಗಳು ನನಗೆ ತೋರಿಸಿಕೊಟ್ಟಿವೆ.

ಈ ಹಿಂದೆ ನಾನು 'ವಿಜಯ ಪಾಟೀಲ' ನನ್ನ ಅಕ್ಕರೆಯ ಸಹೋದರನನ್ನು ಹುಡುಕುವ ಪ್ರಯತ್ನದಲ್ಲಿದ್ದೇನೆಂದು ಬರೆದಿದ್ದೆ. ಆ ಪ್ರಯತ್ನವನ್ನು ಮುಂದುವರೆಸಿ ಪ್ರೊ. ಚಂಪಾರವರಿಂದ ಹಲವು ಮಾಹಿತಿಯನ್ನು ಪಡೆದೆ. ವಿಜಯಪಾಟೀಲನ ಪತ್ನಿ ಶ್ರೀಮತಿ ದೇವಿಕಾರವರನ್ನು ದೂರವಾಣಿಯ ಮೂಲಕ ಸಂಪರ್ಕಿಸಿ, ಆತನ ಯೋಗಕ್ಷೇಮ ವಿಚಾರಿಸಿಕೊಂಡೆ. ನಂತರ ನಮ್ಮ ಟ್ರಸ್ಟಿಗಳಾದ ರುದ್ರಪ್ಪ ಹನಗವಾಡಿ, ತಿಪ್ಪಣ್ಣ ಹಾಗೂ ನಿಂಗಪ್ಪನವರನ್ನು ಕರೆದುಕೊಂಡು ಹಾವೇರಿ ಜಿಲ್ಲೆ ಕರ್ಜಗಿ ಮಾರ್ಗವಾಗಿ ಹತ್ತಿಮತ್ತೂರು ದಾಟಿ, ದೊಂಬರ ಮತ್ತೂರಿಗೆ ಪ್ರಯಾಣಿಸಿದ್ದೆ. ದೇವಿಕಾಳ ಸಲಹೆ ಅನುಸಾರ, ಸಹೋದರ ಸಂಬಂಧಿ ಅಣ್ಣಯ್ಯ ಮಾಸ್ತರರ ಮನೆಗೆ ಹೋದೆವು. ಅಣ್ಣಯ್ಯ ಮಾಸ್ತರು ಜಗುಲಿಯ ಮೇಲೆ ಕುಳಿತಿದ್ದರು. ಸುಮಾರು ಎಂಭತ್ತೈದು ವರ್ಷದ ಹಿರಿಜೀವ, ನಮ್ಮನ್ನು ಆದರದಿಂದ ಬರಮಾಡಿಕೊಂಡರು. ನಮ್ಮೆಲ್ಲರ ಪರಿಚಯದ ನಂತರ ಅವರ ಮಾಸ್ತರಿಕೆ, ಜಮೀನು, ಕೌಟುಂಬಿಕ ವಿಚಾರಗಳಲ್ಲಿ ಮಾತು ಹೊರಳಾಡುತ್ತಿದ್ದರೂ, ಮನಸ್ಸು ಮಾತ್ರ ಯಾವಾಗ ತಮ್ಮನನ್ನು ನೋಡುತ್ತೇವೆಯೋ ಎಂಬ ತವಕದಲ್ಲಿತ್ತು.

ನಮ್ಮೆಲ್ಲರ ಬಾಯಾರಿಕೆ, ಉಪಹಾರದ ವ್ಯವಸ್ಥೆಯನ್ನು ಅವರ ಸೊಸೆ ಬಹು ಪ್ರೀತಿಯಿಂದ ಮಾಡಿದ್ದಳು. ಬಳಿಯಲ್ಲೇ ಇದ್ದ ಯಜಮಾನಪ್ಪನನ್ನು ಕರೆದು, ವಿಜಯಪಾಟೀಲನನ್ನು ಮನೆಗೆ ಕರೆತರಲು ಆಕೆ ತಿಳಿಸಿದ್ದರು. ಅವನಿದ್ದಲ್ಲಿಗೆ ಹೋಗುತ್ತೇವೆಂದು ನಾವೆಷ್ಟು ಹೇಳಿದರೂ ಕೇಳಲಿಲ್ಲ. ರುದ್ರಪ್ಪನವರು ನನ್ನನ್ನು ಅಲ್ಲಿಯೇ ಕುಳಿತಿರಲು ಹೇಳಿ, ಆತನನ್ನು ಕರೆತರಲು ಹೊರಟರು. ಹತ್ತು ನಿಮಿಷಗಳಲ್ಲಿ ವಾಪಾಸಾದ ಅವರೊಂದಿಗೆ ಸಹೋದರ ವಿಜಯಪಾಟೀಲನಿದ್ದ. ಆತನನ್ನು ನೋಡಿದಾಕ್ಷಣ ನನಗೆ ಮಾತೇ ಹೊರಡಲಿಲ್ಲ. ತೆಳ್ಳಗಿನ ನೀಳಕಾಯದ ಶರೀರವೀಗ ತುಸು ಬಾಗಿತ್ತು. ಕಣ್ಣುಗಳು ಏನನ್ನೋ ನಿರೀಕ್ಷಿಸುವಂತಿತ್ತು. ತಲೆ ತುಂಬ ಉದ್ದುದ್ದ ಬೆಳೆದ ಬಿಳಿಗೂದಲು, ಉದ್ದ ಗಡ್ಡ, ಕೊಳೆ ಅಂಗಿ, ದೊಗಲೆ ಪ್ಯಾಂಟು ತೊಟ್ಟ ತಮ್ಮನನ್ನು ನೋಡಿ ಕಣ್ಣೀರು ತುಂಬಿಕೊಂಡಿತು. ಮಾತಿಲ್ಲ ಕತೆಯಿಲ್ಲ, ಮುಖದಲ್ಲಿ ಮಂದಹಾಸವೂ ಇಲ್ಲ. ನಿರ್ಲಿಪ್ತವಾಗಿ ಜಗುಲಿಯ ಮೇಲೆ ಕುಳಿತ ಪಾಟೀಲನನ್ನು ಮಾತನಾಡಿಸಿದರೆ "ಹುಂ – ಉಹುಂ– ಆಯ್ತು, ಗೊತ್ತು" ಎಂಬ ಶಬ್ದಗಳಲ್ಲೆ ಉತ್ತರ. ಸೊಸೆ ಎಲ್ಲರಿಗೂ ಒಗ್ಗರಣೆ ಅವಲಕ್ಕಿ ಚಾ ತಂದುಕೊಟ್ಟಳು. ಬಹಳ ಹಸಿದವನಂತೆ ಗಬಗಬನೆ ಅವಲಕ್ಕಿ ತಿಂದು ಮುಗಿಸಿದ ಪಾಟೀಲ.

ಕೃಷ್ಣಪ್ಪ, ಗಿರಿಯಪ್ಪ, ರಾಕೆ, ಇಂದೂಧರ, ದೇವನೂರು, ಹರವೆ, ಸಿದ್ದಲಿಂಗಯ್ಯ ಮತ್ತೆಲ್ಲರ ಮಾತುಗಳು, ಹಾಡುಗಳು, ಹೋರಾಟದ ಘಟನೆಗಳನ್ನು ಜ್ಞಾಪಿಸಿದಾಗ, ಅವೆಲ್ಲವೂ ನೆನಪಿನಲ್ಲಿದೆ ಎಂಬ ಒಂದೆರಡು ಮಾತುಗಳನ್ನಷ್ಟೆ ಆಡಿದ. ರುದ್ರಪ್ಪನವರ ಕೈಹಿಡಿದು ಮಾತನಾಡಿದ. ಅವನೊಟ್ಟಿಗೆ ಪೋಟೋಗಳನ್ನು ತೆಗೆಯಿಸಿಕೊಂಡೆವು. ಟ್ರಸ್ಟ್‌ನಿಂದ ಪ್ರಕಟಿಸಿದ ಕೃಷ್ಣಪ್ಪನವರ ಪುಸ್ತಕಗಳನ್ನು ಕೊಟ್ಟೆ. ಕೃಷ್ಣಪ್ಪನವರ ಬಗ್ಗೆ ಲೇಖನ ಬರೆದುಕೊಡಲು ಕೇಳಿಕೊಂಡೆ, "ಆಗಲ್ಲ" ಎಂದ. ಪುಸ್ತಕಗಳನ್ನು ಓದಿ ಜ್ಞಾಪಿಸಿಕೊಂಡು, ಮೆಲುಕು ಹಾಕಿಕೊಂಡು ಬರೆಯಲೇಬೇಕೆಂದು ಒತ್ತಾಯ ಮಾಡಿದೆ. ನಂತರ ಎಲ್ಲರಿಂದ ಬೀಳ್ಕೊಂಡು ಅಲ್ಲಿಂದ ಹೊರಟೆವು. ನಮ್ಮ ಹಾದಿಯಲ್ಲೇ ಇರುವ ಹಳೆ ಫ್ಯಾಕ್ಟರಿಯ ಹಳೆ ಕೊಠಡಿಯೊಂದರ ಬಳಿ ಅವನನ್ನು ಇಳಿಸುವುದಿತ್ತು.



ಅಣ್ಣಯ್ಯ ಮಾಸ್ತರರೊಂದಿಗೆ ಈಗ ವಿಜಯ ಪಾಟೀಲ

ಅಣ್ಣಯ್ಯ ಮಾಸ್ತರರಿಂದ ಬೀಳ್ಕೊಳ್ಳುವ ಮುನ್ನ, ಅವರಲ್ಲಿ 'ಪಾಟೀಲ ಹೀಗೇಕೆ ಮೌನಕ್ಕೆ ಇಳಿದಿದ್ದಾನೆ?' ಎಂದು ಕೇಳಿದೆ. ೧೯೮೩–೮೪ರ ಸುಮಾರಿಗೆ ಅವನಿಗೆ ಕೃಷಿ ಇಲಾಖೆಯಲ್ಲಿ ಕೃಷಿ ಅಧಿಕಾರಿಯಾಗಿ ಕೆಲಸ ಸಿಕ್ಕಿತೆಂದೂ, ಅಲ್ಲಿ ಹೋಗಿ ಒಂದು ವಾರ ಇದ್ದು ವಾಪಾಸಾದವನು, ಮತ್ತೆಂದೂ ಆ ಕೆಲಸಕ್ಕೆ ಹೋಗಲೇ ಇಲ್ಲವೆಂದೂ, ಸರ್ಕಾರಿ ನೌಕರಿ ತನಗೆ ಸರಿಬರುವುದಿಲ್ಲವೆಂದೂ, ತಾನು ಮನೆ ಜಮೀನು ನೋಡಿಕೊಳ್ಳುತ್ತೇನೆಂದು ಹಳ್ಳಿಗೆ ವಾಪಾಸಾದನೆಂದೂ, ಜಮೀನಿಗಾಗಿ ನಾಲ್ಕಾರು ಲಕ್ಷ ಸಾಲ ಮಾಡಿದ್ದೂ ಅದನ್ನು ತೀರಿಸಲಾಗದೆ, ಸಂಘಟನೆಗೂ ಬರಲಾರದೆ, ಒಂಟಿಯಾಗಿಬಿಟ್ಟ, ಮೌನಿಯಾಗಿಬಿಟ್ಟ" ಎಂದರು. ಸುತ್ತಮುತ್ತಲಿನವರಿಗೆ ಯಾವ ತೊಂದರೆ ಕೊಡದೆ, ತನ್ನಷ್ಟಕ್ಕೆ ತಾನೇ ಇರುವ ಕೊಟ್ಟರಷ್ಟೇ ಹೊಟ್ಟೆಗೆ ಹಾಕಿಕೊಳ್ಳುವ ಅವನನ್ನು ನೋಡಿ ಹೋಗಲು ಮಡದಿ ದೇವಿಕಾ ಆಗಾಗ್ಗೆ ಬರುವಳು.

ಮಾಸ್ತರಿಕೆ ಕೆಲಸ ಮಾಡುತ್ತಾ, ಮೂರು ಮಕ್ಕಳನ್ನು ಸಾಕಿ ಸಲಹಿ, ಹೆಣ್ಣುಮಗಳಿಗೆ ಮದುವೆ ಮಾಡಿ, ಗಂಡು ಮಕ್ಕಳಿಬ್ಬರಿಗೆ ಶಿಕ್ಷಣ ಕೊಡಿಸಿ, ಗಂಡನ ಜವಾಬ್ದಾರಿಯನ್ನು ತಾನೇ ನಿರ್ವಹಿಸುತ್ತಿರುವ ದೇವಿಕಾಳ ಬಗ್ಗೆ ಚಂಪಾರವರಿಗೆ ಅಪಾರ ಅಭಿಮಾನವಿದೆ. ಪಾಟೀಲನನ್ನು ಅವನ ಪಾಳುಕೊಂಪೆಯ ಕೋಣೆ ಬಳಿ ಇಳಿಸುವಾಗ ಪರಪ್ಪನ ಅಗ್ರಹಾರದ ಸೆಲ್‌ನೊಳಗೆ ಬಿಟ್ಟು ಬಂದಂತೆ ನಮ್ಮನ್ನು ಕಾಡುತ್ತಿದೆ. ನಾವು ಅರ್ಧ ಕಿ.ಮೀ. ದೊಂಬರ ಮತ್ತೂರನ್ನು ದಾಟಿ ಮುಂದೆ ಬಂದಾಗ, ದೇವಿಕಾ ಫೋನಾಯಿಸಿದಳು. "ತೊಂದರೆಯಾಯಿತೇ? ಅವರು ಹುಚ್ಚುಚ್ಚಾಗಿ ಏನೇನೊ ಮಾತನಾಡಿದ್ರಾ? ಬೇಸರವಾಯಿತೇ? ನಾನು ಧಾರವಾಡದಲ್ಲಿದ್ದೇನೆ. ನೀವು ಮೊದಲೇ ಹೇಳಿದ್ರೆ, ನಾನು ಬರುತ್ತಿದ್ದೇ" ಎಂದು ಹೇಳಿದಳು. ಮನೆಯವರ ಆದರೋಪಚಾರಗಳನ್ನು ಹೇಳುತ್ತಾ, ಪಾಟೀಲನ ಈ ದುಸ್ಥಿತಿಯ ಬಗ್ಗೆ ಮೆಲುಮಾತಿನಲ್ಲಿ ಹೇಳಿದೆವು. ಆಕೆಗೂ ಬೇಸರ. ಮುಖಾಮುಖಿ ಮಾತನಾಡುವುದನ್ನು ಕಾಯ್ದಿರಿಸಿಕೊಂಡು ಅವಳಿಗೆ "ಬೈ" ಹೇಳಿದ್ದೆ. ಮಾನಸಿಕ ಚಿಕಿತ್ಸೆ ಕೊಡಿಸಿದರೆ ಆತ ಮೊದಲಿನ ವಿಜಯಪಾಟೀಲನಾಗಬಹುದೇನೋ ಎಂಬ ಹಂಬಲ ನನ್ನಲ್ಲಿದೆ. ಬೆಂಗಳೂರಿನಲ್ಲಿರುವ ಮಗ ಸಂಕಲ್ಪ ಪಾಟೀಲನೊಡನೆ ಸಂಪರ್ಕದಲ್ಲಿದ್ದಾನೆ.

(ಮುಂದುವರೆಯುವುದು

# ಮೌದೂದಿಯ ಧರ್ಮವ್ಯಾಖ್ಯಾನವೂ ಗೋಲ್ವಾಲ್ಕರ್‌ಗೆ ಭಾರತರತ್ನವೂ...

–ಆಕಾರ್ ಪಟೇಲ್



೧೯೦೦ರಲ್ಲಿ ಮಹಾರಾಷ್ಟ್ರದಿಂದ ಬಂದ ಇಬ್ಬರು ಮಹಾನ್ ವ್ಯಕ್ತಿಗಳು, ಅವರಿಗೆ ೪೦ ವರ್ಷ ಆಗುವ ಮುಂಚೆಯೇ, ತಮ್ಮ ವಿಚಾರಗಳಿಂದ ಇಡೀ ಪ್ರಪಂಚವನ್ನೇ ಅಲ್ಲೋಲಕಲ್ಲೋಲಗೊಳಿಸತೊಡಗಿದ್ದರು. ಅವರಲ್ಲೊಬ್ಬರು ಆರ್.ಎಸ್.ಎಸ್.ನ ಎಂ.ಎಸ್.ಗೊಲ್ವಾಲ್ಕರ್ ಮತ್ತು ಇನ್ನೊಬ್ಬರು ಔರಂಗಾಬಾದಿನಲ್ಲಿ ಹುಟ್ಟಿದ ಜಮಾತೆ ಇಸ್ಲಾಮಿನ ಅಬ್ದುಲ್ ಆಲಾ ಮೌದೂದಿ. ಇದು ಬಹಳ ಜನಕ್ಕೆ ಗೊತ್ತಿಲ್ಲ. ಇಂದು ಪ್ರಪಂಚದಾದ್ಯಂತ ಹರಡುತ್ತಿರುವ ಇಸ್ಲಾಮಿಸಂಗೆ ತಾತ್ವಿಕ ತಳಹದಿಯನ್ನು ಹಾಕಿಕೊಟ್ಟವರೇ ಮೌದೂದಿಯವರು. ಸಂಕ್ಷಿಪ್ತವಾಗಿ ಹೇಳುವುದಾದರೆ ಇದನ್ನೆಲ್ಲ ಅವರು, ತೌಹೀದ್(ಅಲ್ಲಾಹನ ಅಖಂಡ ತತ್ವ)ನ್ನು ಕುರಿತ ತಮ್ಮ ಅದ್ಭುತವಾದ ವ್ಯಾಖ್ಯಾನಗಳಿಂದ ಸಾಧಿಸಿದರು. ಸಾಂಪ್ರದಾಯಿಕವಾಗಿ ಮುಸ್ಲಿಮರು ಕ್ರಿಶ್ಚಿಯನ್ನರ ಟ್ರಿನಿಟಿ(ತ್ರಿಮೂರ್ತಿ ತತ್ವ)ಯನ್ನು ನಂಬುವುದಿಲ್ಲ. ಯಾಕೆಂದರೆ ಅವರಿಗೆ ದೇವತ್ವವೆಂಬುದು ಅಖಂಡವಾಗಿರಬೇಕೇ ಹೊರತು ಅದನ್ನು ವಿಭಜಿಸಲು ಬರುವುದಿಲ್ಲ. ಮೌದೂದಿಯವರು ತೌಹೀದ್‌ನ ಅಖಂಡತೆಯ ತತ್ವವನ್ನು ಹಿಗ್ಗಿಸಿ ಅದರ ಮೂಲಕ, 'ವ್ಯಕ್ತಿಗಳ ಅಥವಾ ಸಮುದಾಯಗಳ ಕಾನೂನುಬದ್ಧ ಅಥವಾ ರಾಜಕೀಯ ಸ್ವಾತಂತ್ರ್ಯದ ಅಪೇಕ್ಷೆಗಳೇ ಇಲ್ಲವಾಗುತ್ತವೆ' ಎಂದು ವಾದಿಸಿದರು.

ಇಲ್ಲಿಂದ ಮುಂದೆ ಮೌದೂದಿಯ ತೌಹೀದ್‌ನ ವ್ಯಾಖ್ಯಾನ, ಸಾರ್ವಭೌಮತ್ವವೆನ್ನುವುದು ದೇವರಿಗೆ ಮಾತ್ರ ಸಂಬಂಧಿಸಿರುವುದರಿಂದ ಮನುಷ್ಯರು ಗುಲಾಮರಾಗಿರುವುದನ್ನು ಬಿಟ್ಟರೆ ಬೇರೆ ದಾರಿಯಿಲ್ಲ ಎನ್ನುವವರೆಗೆ ವಿಸ್ತರಣೆಯಾಯಿತು. ಆದ್ದರಿಂದ ಮೌದೂದಿಗೆ ಪಾಶ್ಚಿಮಾತ್ಯ ಪ್ರಜಾಪ್ರಭುತ್ವವು ಇಸ್ಲಾಮಿನ ತತ್ವಗಳಿಗೆ ವಿರುದ್ಧವಾಗಿ ಕಂಡು ಅದನ್ನು ತಿರಸ್ಕರಿಸಬೇಕು ಎಂಬ ವಾದವೂ ಹುಟ್ಟಿಕೊಂಡಿತು. ಆದ್ದರಿಂದ ಮೌದೂದಿಯ ಅಲ್ ಜಿಹಾದ್ ಫಿಲ್ ಇಸ್ಲಾಮ್ ಎಂಬ ಪುಸ್ತಕದಲ್ಲಿ ಮುಸ್ಲಿಮರಿಗೆ ಧಾರ್ಮಿಕ ರಾಷ್ಟ್ರವೊಂದನ್ನು ಕಟ್ಟಲು ಕರೆ ನೀಡಲಾಗಿದೆ.

ಈಜಿಪ್ಟ್‌ನ ಮುಸ್ಲಿಮ್ ಬ್ರದರ್‌ಹುಡ್‌ನ ಸೈಯದ್ ಖುತ್ಬ್‌ನಿಂದ ಹಿಡಿದು ಸೌದಿ ಅರೇಬಿಯಾದ ಒಸಾಮಾ ಬಿನ್‌ಲಾಡೆನ್‌ನವರೆಗೆ, ಇರಾಕಿನ ಐಎಸ್‌ನವರೆಗೆ ಪ್ರತಿಯೊಬ್ಬ ಇಸ್ಲಾಮ್‌ವಾದಿಯೂ ಸಹ ತಮ್ಮ ಧಾರ್ಮಿಕ ಬಂಡಾಯವನ್ನು ಮೌದೂದಿ ನೀಡಿದ ತಾತ್ವಿಕ ಚೌಕಟ್ಟಿನೊಳಗೇ ಕಟ್ಟಿಕೊಂಡಿರುವುದನ್ನು ನೋಡಬಹುದು. ಮೌದೂದಿಯ ಪ್ರಣಾಲಿಯನ್ನು ತಿರಸ್ಕರಿಸುವ ಒಂದೇ ಒಂದು ಸೂತ್ರವನ್ನೂ ಸಹ ಅರಬ್ ಜಿಹಾದಿಗಳು ಇದುವರೆಗೆ ನೀಡಲು ಸಾಧ್ಯವಾಗಿಲ್ಲ. ಯಾಕೆಂದರೆ ನಮ್ಮ ಹುಚ್ಚರಿಗೆ ಬೇರೆ ಹುಚ್ಚರಿಗಿಂತ ಹೆಚ್ಚು ತಲೆಕೆಟ್ಟಿರುತ್ತದೆ ಎಂಬ ನಂಬಿಕೆಯಿಂದಲೋ ಏನೋ ಮೌದೂದಿಯನ್ನು ಮೀರಲು ಯಾರಿಗೂ ಸಾಧ್ಯವಾಗಿಲ್ಲ!

ಮೌದೂದಿ ಸಹ ಮಾರ್ಕ್ಸ್‌ವಾದಿಗಳಂತೆ, ಮುಂಚೂಣಿ ಗುಂಪೊಂದರ ಕಲ್ಪನೆಯಲ್ಲಿ, ಮುಸ್ಲಿಮರ ಒಂದು ಚಿಕ್ಕ ಮುಂಚೂಣಿ ಗುಂಪು ಪ್ರಭುತ್ವದ ಚುಕ್ಕಾಣಿ ಹಿಡಿದು ಮೇಲಿನಿಂದ ಕೆಳಗೆ ಸಮಾಜದಲ್ಲಿ ಧಾರ್ಮಿಕತೆಯನ್ನು ಪ್ರತಿಷ್ಠಾಪಿಸಬೇಕು ಎಂದು ಪ್ರತಿಪಾದಿಸುತ್ತಿದ್ದರು. ಇಂದು ಜಮಾತೆ ಇಸ್ಲಾಮಿಯು ಮೌದೂದಿಯ ವಿಚಾರಗಳನ್ನು ಚುನಾವಣಾ ರಾಜಕಾರಣದ ಮೂಲಕ ಪಾಕಿಸ್ತಾನದಲ್ಲಿ ಬಿತ್ತುವ ಸನ್ನಾಹದಲ್ಲಿದೆ. ಅದನ್ನು ಕುರಿತು ಮುಂದೆ ಬರೆಯುವೆ.

ಮೂಲತಃ ಹೆಗ್ಡೆವಾರ್ ಅವರು ಆರ್.ಎಸ್.ಎಸ್. ಸಂಸ್ಥಾಪಕರಾದರೂ, ೩೦ರ ದಶಕದಲ್ಲಿ ಗೋಲ್ವಾಲ್ಕರ್ ಅದರ ನಾಯಕರಾದ ಮೇಲೆಯೇ ಅದು ತನ್ನ ನಿಜವಾದ ಅಸ್ತಿತ್ವ ಕಂಡುಕೊಂಡದ್ದು. ವೃತ್ತಿಯಿಂದ ಡಾಕ್ಟರ್ ಆಗಿದ್ದ ಹೆಗ್ಡೆವಾರರಿಗೆ ಗೋಲ್ವಾಲ್ಕರ್‌ನ ಚಾಣಾಕ್ಷತೆ ಇರಲಿಲ್ಲ. ಗೋಲ್ವಾಲ್ಕರ್ ಆರ್.ಎಸ್.ಎಸ್.ನ್ನು ಶಾಖೆಗಳ ಮೂಲಕ, ಅದರಲ್ಲೂ ಅಲ್ಲಿ ಮಾಡುವ ಬೆಳಗಿನ ಜಾವದ ಕಸರತ್ತುಗಳ ಮೂಲಕ, ದೊಡ್ಡದಾಗಿ ವಿಸ್ತರಿಸಿದರು. ಬೆಳಗಿನ ಜಾವ ಒಂದು ಕಡೆ ಸೇರಿ ದೈಹಿಕ ಕಸರತ್ತು ಮಾಡುವ ಮೂಲಕ, ಜೊತೆ ಸೇರಿ ರಾಷ್ಟ್ರಭಕ್ತಿಗೀತೆಗಳನ್ನು ಹಾಡುವ–ಆಟಗಳನ್ನು ಆಡುವ ಮೂಲಕ, ಹಲವು ಜಾತಿಗಳ ಹೆಸರಲ್ಲಿ ಒಡೆದು ಹೋಗಿರುವ ಹಿಂದೂ ಸಮಾಜವನ್ನು ಒಗ್ಗೂಡಿಸಬಹುದೆಂಬ ನಂಬಿಕೆ ಗೋಲ್ವಾಲ್ಕರ್‌ಗೆ ಇತ್ತು.



ಹೀಗೆ ಒಗ್ಗೂಡಿಸಿದ ಹಿಂದೂ ಬಂಧುಗಳನ್ನು ಪ್ರವಾಹ, ಭೂಕಂಪ, ಕೋಮು ಗಲಭೆಗಳಂಥ ರಾಷ್ಟ್ರೀಯ ವಿಪತ್ತುಗಳ ಸಂದರ್ಭದಲ್ಲಿ ಸೇವೆಗೆ ಬಳಸಿಕೊಳ್ಳುವ ಮೂಲಕ ಹಿಂದೂ ರಾಷ್ಟ್ರೀಯತೆಯ ಸಂದೇಶವನ್ನು ಬಿತ್ತಬೇಕೆಂಬುದು ಗೋಲ್ವಾಲ್ಕರ್‌ರ ನಂಬಿಕೆಯಾಗಿತ್ತು. ಮೌದೂದಿಯವರಂತೆ ಗೋಲ್ವಾಲ್ಕರ್ ಸಹ ಅಖಂಡತೆಯ ಪ್ರತಿಪಾದಕರೇ. ಆದರೆ ಅವರಿಗೆ ದೇವತ್ವದ ಬಹುತ್ವಕ್ಕಿಂತ ರಾಷ್ಟ್ರದ ಬಹುತ್ವವೇ ಹೆಚ್ಚು ಅಪಾಯಕಾರಿಯಾಗಿ ಕಂಡಿತು.

ಅವರಿಗೆ ಹಿಂದೂ ಸಂಸ್ಕೃತಿ ಮತ್ತು ಭಾರತೀಯತೆಯಿಂದ ದೂರಹೋಗುವುದು ಯಾವ ಕಾರಣಕ್ಕೂ ಒಪ್ಪಿಗೆಯಾಗುವ ಸಂಗತಿಯಲ್ಲ. ಅವರ ಪ್ರಕಾರ ಪ್ರತಿಯೊಬ್ಬರಿಗೂ ಅದನ್ನು ಸಾಂಸ್ಕೃತಿಕವಾಗಿ ಒಪ್ಪಿಕೊಳ್ಳದೆ ಬೇರೆ ಮಾರ್ಗವಿಲ್ಲ. ಈ ದೃಷ್ಟಿಯಿಂದ ಗೋಲ್ವಾಲ್ಕರ್ ಭಾರತದಲ್ಲಿ ಹಿಂದುತ್ವದ ಮೂಲ ಪ್ರತಿಪಾದಕರಾಗಿ, ಹಿಂದೂ ರಾಷ್ಟ್ರೀಯತೆಯ ಆದರ್ಶಗಳನ್ನು ಹೇಗೆ ಆಚರಣೆಗೆ ತರಬೇಕು ಎಂಬುದನ್ನು ಆಳವಾಗಿ ಚಿಂತಿಸಿದವರಲ್ಲೊಬ್ಬರಾಗಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರಿಗೆ ಗೋಲ್ವಾಲ್ಕರ್ ಚಿಂತನೆಗಳ ಮಹತ್ವ ಗೊತ್ತಿದೆ. ಅದಕ್ಕಾಗಿಯೇ ೧೬ ಜನ ಮಹಾನ್ ವ್ಯಕ್ತಿಗಳ ಜೀವನಚರಿತ್ರೆ ಇರುವ ತಮ್ಮ ಪುಸ್ತಕದಲ್ಲಿ ಮೋದಿ ಗೋಲ್ವಾಲ್ಕರ್ ಕುರಿತು ದೀರ್ಘವಾದ ಟಿಪ್ಪಣಿಯನ್ನು ಮಾಡಿದ್ದಾರೆ. ಮೋದಿಯವರು ತಮ್ಮ ವೈಚಾರಿಕ ಗುರುವನ್ನು ಕುರಿತು ವಿಮರ್ಶಾತ್ಮಕವಾಗಿ ಮಾತನಾಡದಿದ್ದರೂ ಅವರ ಬಗ್ಗೆ ಹಲವು ದೃಷ್ಟಾಂತಗಳನ್ನು ಹೇಳುತ್ತ ಅವರ ಪ್ರಸ್ತುತತೆಯನ್ನು ಎತ್ತಿಹಿಡಿದಿದ್ದಾರೆ.

ಮೋದಿ ಗೋಲ್ವಾಲ್ಕರ್ ಜೈಲಿನಿಂದ ಬಿಡುಗಡೆಯಾಗಿದ್ದನ್ನು ವಿವರಿಸುವುದು ಹೀಗೆ: 'ಮಹಾತ್ಮಾ ಗಾಂಧಿಯವರ ಕೊಲೆಯ ನಂತರ ಸಂಘವನ್ನು ನಿಷೇಧಿಸಲಾಯಿತು. ನಂತರ ಅದು ನಿರ್ದೋಷಿಯೆಂದು ಸಾಬೀತಾಯಿತು. ಗುರೂಜಿಯವರನ್ನು ಜೈಲಿನಿಂದ ಬಿಡುಗಡೆ ಮಾಡಲಾಯಿತು. ಎಲ್ಲರನ್ನೂ ಪ್ರೀತಿಸುವ ಆ ವ್ಯಕ್ತಿಗೆ ದೆಹಲಿಯಲ್ಲಿ ಸನ್ಮಾನ ಕಾರ್ಯಕ್ರಮ ಏರ್ಪಾಡಾಗಿತ್ತು. ಆಗ ಅವರಿಗೆ ಕೇವಲ ನಲವತ್ತು ವರ್ಷ. ಲಕ್ಷಗಟ್ಟಲೆ ಸ್ವಯಂಸೇವಕರು ಅವರಿಗಾಗಿ ಸರ್ವಸ್ವವನ್ನೂ ತ್ಯಾಗ ಮಾಡಲು ಸಿದ್ಧರಿದ್ದರು. ಲಕ್ಷಗಟ್ಟಲೆ ಕಿವಿಗಳು ಅವರ ಮಾತನ್ನು ಕೇಳಲು ದೆಹಲಿಯಲ್ಲಿ ಕಾದು ಕುಳಿತಿದ್ದವು. ಪ್ರಪಂಚದ ಎಲ್ಲ ಪತ್ರಕರ್ತರೂ ಅವರು ಹೇಳಿದಂತೆ ಕೇಳಲು ತಯಾರಾಗಿದ್ದರು. ಪ್ರತಿಯೊಬ್ಬರೂ ಗುರೂಜಿ ಏನು ಸಂದೇಶ ನೀಡುವರೆಂಬ ಬಗ್ಗೆ ಕಾತರರಾಗಿದ್ದರು. ಅವರು ನೆಹರೂರವರ ಸರ್ಕಾರವನ್ನು ಹಿಂಸೆಯ ಮೂಲಕ ಕಿತ್ತೊಗೆಯಿರಿ ಎಂಬ ಕರೆ ನೀಡುತ್ತಾರೆಯೇ? ಭಾರತದ ತುಂಬೆಲ್ಲ ಅರಾಜಕತೆಯನ್ನು ಸೃಷ್ಟಿಸುತ್ತಾರೆಯೆ? ಎಂಬ ಪ್ರಶ್ನೆಗಳಿದ್ದವು. ಆದರೆ, ೧೯ ತಿಂಗಳ ಕಾಲ ದೀರ್ಘ ಜೈಲುವಾಸವನ್ನು ಅನುಭವಿಸಿದ ನಂತರವೂ ಆ ಮಹಾನ್ ವ್ಯಕ್ತಿ ಹೇಳಿದ್ದು ಇಷ್ಟೇ: "ಆಗಿಹೋದದ್ದನ್ನು ಮರೆತು ಬಿಡಿ. ಇದನ್ನೆಲ್ಲ ಮಾಡಿದವರು ನಮ್ಮವರೇ. ನಮ್ಮ ನಾಲಿಗೆ ಹಲ್ಲುಗಳ ನಡುವೆ ಸಿಲುಕಿಕೊಂಡಿರುವುದರಿಂದ ನಾಲಿಗೆಗೆ ಶಿಕ್ಷೆ ನೀಡಲು ನಮ್ಮ ಹಲ್ಲುಗಳನ್ನು ನಾಶ ಮಾಡಬೇಕಿಲ್ಲ.ಅದನ್ನೆಲ್ಲ ಮರೆತು ಬಿಡಿ".

ಅಂತಿಮವಾಗಿ, ಮೌದೂದಿ–ಗೋಲ್ವಾಲ್ಕರ್‌ರಿಬ್ಬರ ವಿಚಾರಗಳೂ ಸಹ ತಮ್ಮ ಸಮುದಾಯಕ್ಕೆ ಮತ್ತು ಇತರರಿಗೆ ಅಪಾಯಕಾರಿಯಾಗಿ–ಹಿಂಸಾತ್ಮಕವಾಗಿ ಪರಿಣಮಿಸಿದವು. ಮೌದೂದಿಯವರ ವಿಚಾರಗಳಿಗೆ ಅಂತಾರಾಷ್ಟ್ರೀಯ ಮನ್ನಣೆ ಸಿಕ್ಕಿದರೆ ಗೋಲ್ವಾಲ್ಕರ್ ಅವರ ಅನುಯಾಯಿಗಳು ಅವರ ವಾದವನ್ನು ಎಲ್ಲ ಕಡೆ ಹಬ್ಬಿಸುವ ಕಾರ್ಯವನ್ನು ಇದೀಗ ಕೈಗೊಂಡಿದ್ದಾರೆ.

ಮೋದಿಯವರು ಸುಭಾಷ್‌ಚಂದ್ರ ಬೋಸ್ ಹಾಗೂ ಅಟಲ್ ಬಿಹಾರಿ ವಾಜಪೇಯಿಯವರಿಗೆ 'ಭಾರತ ರತ್ನ' ನೀಡಬೇಕೆಂದು ಯೋಚಿಸುತ್ತಿದ್ದಾರೆ

ಎಂದು ಪತ್ರಿಕೆಗಳು ವರದಿ ಮಾಡಿವೆ. ಈ ಕುರಿತು ಆಗಸ್ಟ್ ೧೫ಕ್ಕಿಂತ ಮುಂಚೆ ಮೇಲಿಂದ ಮೇಲೆ ಸುದ್ದಿಗಳು ಬರುತ್ತಿದ್ದರೂ ಈ ಬಗ್ಗೆ ಮೋದಿಯವರು ಯಾವ ನಿರ್ಧಾರ ತೆಗೆದುಕೊಳ್ಳುತ್ತಾರೆಂಬುದು ಗೊತ್ತಿಲ್ಲ. ನನ್ನ ಪ್ರಕಾರ ಅವರಿಗೆ ಸುಭಾಷರಾಗಲೀ ವಾಜಪೇಯಿಯವರಾಗಲಿ ಮುಖ್ಯವಲ್ಲ. ಮೋದಿಯವರು 'ಭಾರತ ರತ್ನ' ಕೊಡುವುದೇ ಆದರೆ ಅದು ಗೋಲ್ವಾಲ್ಕರ್‌ರಿಗೆ ಮಾತ್ರ.

ಕಾಂಗ್ರೆಸ್ ಇದುವರೆಗೆ 'ಭಾರತ ರತ್ನ' ಪ್ರಶಸ್ತಿಯನ್ನು ಗುಲ್ಜಾರಿಲಾಲ್ ನಂದಾರಿಂದ ಹಿಡಿದು ಕಾಮರಾಜರಿಗೆ, ರಾಜೀವ್ ಗಾಂಧಿಯವರಿಗೆ ನೀಡಿ ಅದರ ಮೌಲ್ಯವನ್ನು ನಾಶ ಮಾಡಿಬಿಟ್ಟಿದೆ.

ಇಂಥ ಉದಾಹರಣೆಗಳನ್ನು ನೀಡುತ್ತ ಆರ್‌ಎಸ್‌ಎಸ್ ತನ್ನ ಆಕ್ರೋಶವನ್ನು ಸರಿಯಾಗಿಯೇ ವ್ಯಕ್ತಪಡಿಸುತ್ತಿದೆ. ಆರ್‌ಎಸ್‌ಎಸ್‌ನ ದತ್ತೋಪಂತ್ ತೆಂಗಡಿಯವರಿಗೆ ವಾಜಪೇಯಿಯವರು ಪದ್ಮಭೂಷಣ ಪ್ರಶಸ್ತಿಯನ್ನು ನೀಡಬೇಕೆಂದಾಗ, ಅದನ್ನು ಅವರು ಗುರು ಗೋಲ್ವಾಲ್ಕರ್ ಅವರಿಗೆ ಭಾರತ ರತ್ನ ನೀಡುವವರೆಗೆ ತಾನು ತೆಗೆದುಕೊಳ್ಳುವುದಿಲ್ಲ ಎಂದು ತಿರಸ್ಕರಿಸಿದ್ದರೆಂದು ೨೦೦೩ರಲ್ಲಿ ಬಂದ ಟೈಮ್ಸ್ ಆಫ್ ಇಂಡಿಯಾದ ಅಕ್ಷಯ ಮುಕುಲ್‌ರ ವರದಿ ಉಲ್ಲೇಖ ಮಾಡಿತ್ತು.

ಈ ಬಗ್ಗೆ ೧೯೯೮ರಲ್ಲಿ ಒಂದು ಪ್ರಯತ್ನ ನಡೆದಿತ್ತು. ಆಗ ಅವರು ತಮ್ಮ ಸೆಕ್ಯುಲರ್ ಮಿತ್ರ ಪಕ್ಷಗಳನ್ನು ಓಲೈಸುವ ಕಾರಣಕ್ಕಾಗಿ ಈ ಬಗ್ಗೆ ನಿರ್ಧಾರ ಕೈಗೊಳ್ಳದೇ ದಿನ ತಳ್ಳಿದರು. ಅಲ್ಲದೆ ಮೋದಿಯವರ ಗೋಧ್ರಾ ಕಾರ್ಯಾಚರಣೆ ವಾಜಪೇಯಿಯವರ ಮಿತ್ರಕೂಟವನ್ನು ನಾಶಮಾಡಿತು. ಅದರ ನಂತರ ಅವರ ಹಿಂದುತ್ವ ಕಾರ್ಯಸೂಚಿಗೆ ಹಿನ್ನಡೆಯಾಗಿ ಅವರು ಚುನಾವಣೆಯಲ್ಲಿ ಸೋತುಹೋದರು.

ಮೋದಿಯವರ ಶೈಲಿಯನ್ನು ನೋಡಿದರೆ, ಅವರು ಇದುವರೆಗೂ ಎಂದಿಗೂ ತಮ್ಮ ಕಾರ್ಯಸೂಚಿಯಿಂದ ಗುರು ಗೋಲ್ವಾಲ್ಕರ್ ಅವರನ್ನು ಹೊರಗಿಟ್ಟಿದ್ದಾರೆ ಎಂದು ಅನಿಸುವುದಿಲ್ಲ. ಆದ್ದರಿಂದ ಅವರು ಗೋಲ್ವಾಲ್ಕರ್‌ರಿಗೆ ಗುರು ಕಾಣಿಕೆಯಾಗಿ 'ಭಾರತ ರತ್ನ'ವನ್ನು ನೀಡಿಯೇ ತೀರುತ್ತಾರೆ ಎಂದು ಅನಿಸುತ್ತದೆ. ಮೌದೂದಿಯವರು ಪಾಕಿಸ್ತಾನದ ಸಂವಿಧಾನ ಮತ್ತು ಅಲ್ಲಿನ ನಾಗರಿಕ ಸಮಾಜದ ಮೂಲಕ ತಮ್ಮ ವಿಚಾರಗಳನ್ನು ಬಿತ್ತಿದ ಹಾಗೆಯೇ, ಮೋದಿಯವರು ಗೋಲ್ವಾಲ್ಕರ್ ವಿಚಾರಗಳನ್ನು ತಮ್ಮ ಕಾರ್ಯಶೈಲಿಯ ಮೂಲಕ ಗೋಲ್ವಾಲ್ಕರ್‌ರ ವಿಚಾರಗಳನ್ನು ಎಲ್ಲ ಕಡೆ ಹಬ್ಬಿಸುತ್ತಿದ್ದಾರೆ.

(ಕನ್ನಡಕ್ಕೆ: **ಡಾ. ಎಸ್. ಸಿರಾಜ್ ಅಹಮದ್**)

(ಕೃಪೆ: **ಜನತಾ, ಆಗಸ್ಟ್ ೩೧, ೨೦೧೪**)

# ಭಾರತ-ಪಾಕಿಸ್ತಾನ ಹಗೆ ಅಳಿಸಲು ಹೀಗೊಂದು ಪ್ರಯೋಗ

**–ಜೆ.ಎಸ್. ಜಯದೇವ**



**ಭೂ**ಮಂಡಲದ ನಾವೆಲ್ಲರೂ ಒಂದೆ, ಇದು ಕೇವಲ ಮಾತಾಗಬಾರದು; ಮಕ್ಕಳ ಮನಸ್ಸಿನಲ್ಲಿ ನೆಲೆನಿಲ್ಲುವಂತಾಗಬೇಕು ಎಂಬ ಉದ್ದೇಶದಿಂದ ಸ್ವೀಡನ್ ದೇಶದ ನನ್ನ ಸ್ನೇಹಿತ ಅಂತರರಾಷ್ಟ್ರೀಯ ಕಿರುಚಿತ್ರ ಯೋಜನೆಯನ್ನು ಆಯೋಜಿಸಿ ಅದಕ್ಕೆ ಅಗತ್ಯವಾದ ಹಣವನ್ನು ಕ್ಯಾಮರಗಳನ್ನು ಒದಗಿಸಿದರು. ಚಾಮರಾಜನಗರದ ನಮ್ಮ 'ದೀನಬಂಧು' ಅನಾಥಾಶ್ರಮ ಶಾಲೆಯ ಮಕ್ಕಳು ನಮ್ಮದೇ ಆಹಾರ ಪದ್ಧತಿಯ ಬಗ್ಗೆ, ಜನಪದ ಕಲೆಗಳ ಬಗ್ಗೆ, ಪರಿಸರ ಸಮಸ್ಯೆಗಳ ಬಗ್ಗೆ ಐದಾರು ನಿಮಿಷಗಳ ಕಿರುಚಿತ್ರಗಳನ್ನು ತಯಾರಿಸಿ ಸ್ವೀಡನ್ ದೇಶದ ಉಪ್‌ಸಾಲಾ ಎಂಬ ಊರಿನ ಶಾಲಾ ಮಕ್ಕಳಿಗೆ, ವ್ಹೇಲ್ಸ್‌ನ ಶಾಲಾ ಮಕ್ಕಳಿಗೆ ಕಳುಹಿಸಿದರು. ಆ ವಿದೇಶಿ ಶಾಲಾಮಕ್ಕಳು ಸಹ ತಾವು ತಯಾರಿಸಿದ ಇದೇ ಬಗೆಯ ಕಿರುಚಿತ್ರಗಳನ್ನು ನಮ್ಮ ಮಕ್ಕಳಿಗೆ ಕಳುಹಿಸಿದರು. ಹೀಗೆ ಮಕ್ಕಳ ಗ್ರಹಿಕೆಗೆ ಸಾಧ್ಯವಾಗುವ ಅಸಮಾನತೆ, ಬಾಲ ಕಾರ್ಮಿಕ ಸಮಸ್ಯೆ, ಶೋಷಣೆಗಳು, ಈ ಕಿರು ಚಿತ್ರಗಳ ವಸ್ತುವಾದವು. ಹೀಗೆ ಅನೇಕ ವರ್ಷಗಳಿಂದಲೂ ಮಕ್ಕಳು ತಯಾರಿಸಿದ ಸ್ವದೇಶಿ– ವಿದೇಶಿ ಕಿರುಚಿತ್ರಗಳನ್ನು ಚಿತ್ರೋತ್ಸವ ನಡೆಸಿ ಎಲ್ಲರಿಗೂ ತೋರಿಸುವುದು ವಾಡಿಕೆಯಾಗಿ ನಮ್ಮ ಶಾಲೆಯಲ್ಲಿ ನಡೆದು ಬರುತ್ತಿದೆ.

ವಿಭಿನ್ನ ದೇಶದ ಮಕ್ಕಳ ನಡುವೆ ಸ್ನೇಹ ಸಂಬಂಧವನ್ನು ಬೆಸೆಯುವುದು ಈ ಯೋಜನೆಯ ಉದ್ದೇಶ. ಹಾಗೆ ನೋಡಿದರೆ ಸ್ವೀಡನ್ ಅಥವಾ ವ್ಹೇಲ್ಸ್ ದೇಶದ ಜನಕ್ಕೂ ನಮಗೂ ಸ್ನೇಹ ಸಂಬಂಧ ಇದ್ದೇ ಇದೆ; ಆದರೆ ಭಾರತೀಯರಾದ ನಮಗೆ ಬಗೆಹರಿಯದ ಭಿನ್ನಾಭಿಪ್ರಾಯ ಇರುವುದೆಲ್ಲ ನೆರೆಯ ಪಾಕಿಸ್ತಾನದೊಡನೆ. ನಮ್ಮ ಬಹುತೇಕ ಶಾಲೆಗಳು ಪಾಕಿಸ್ತಾನದ ಮನುಷ್ಯರನ್ನು ಶಾಶ್ವತ ಶತ್ರುಗಳೊ ಎಂಬಂತೆ ಬಿಂಬಿಸುತ್ತವೆ. ಹಾಗೆಯೇ ಪಾಕಿಸ್ತಾನದ ಉಗ್ರವಾದಿ ಪರಿಸರ ಅಲ್ಲಿಯ ಶಾಲಾಮಕ್ಕಳ ತಲೆಗೆ ಭಾರತ ದ್ವೇಷವನ್ನು ಬಿತ್ತುವ ಕೆಲಸ ಮಾಡುತ್ತಲೇ ಇವೆ. ಈ ಹಿನ್ನಲೆಯಲ್ಲಿ ಅಂತರರಾಷ್ಟ್ರೀಯ ಸಂಬಂಧವನ್ನು ಕಟ್ಟುವ ಈ ಕಿರುಚಿತ್ರದ 'ಯೋಜನೆ' ನಡೆಯಬೇಕಾದದ್ದು ಭಾರತ ಪಾಕಿಸ್ತಾನದ ನಡುವೆ ಎಂದು ನನಗೆ ಅನ್ನಿಸಿತು.

ಈ ಸಾಧ್ಯತೆಯ ಸುತ್ತ ಹೊಸ 'ಯೋಜನೆ'ಯೊಂದನ್ನು ರೂಪಿಸಿದೆವು. ನಮ್ಮ ಚಾಮರಾಜನಗರದ ಮಕ್ಕಳು ಪಾಕಿಸ್ತಾನದ ಯಾವುದಾದರೂ ಒಂದು ಶಾಲೆಯ ಮಕ್ಕಳೊಡನೆ ಇ–ಮೇಲ್–ಸ್ಕೈಪ್ ಇತ್ಯಾದಿಗಳ ಮೂಲಕ ಸಂಪರ್ಕ ಸಾಧಿಸುವುದು, ತಮ್ಮ ಶಾಲೆಯ ಬಗ್ಗೆ, ತಾವು ಕಲಿಯುತ್ತಿರುವ ಪಾಠಗಳ ಬಗ್ಗೆ, ತಮಗೆ ಆಶ್ಚರ್ಯ ಹುಟ್ಟಿಸಿದ ಕೌತುಕಗಳ ಬಗ್ಗೆ ಪರಸ್ಪರ ಅನ್ಯೋನ್ಯವಾಗಿ ವಿಚಾರ ವಿನಿಮಯ ಮಾಡಿಕೊಳ್ಳುತ್ತ ಸ್ನೇಹ ಬೆಳೆಸುವುದು. ಬಹು ಮುಖ್ಯವಾಗಿ ಕೈಗೆಟುಕದ ಯಾವ ದೊಡ್ಡ ಆದರ್ಶಗಳ ಕುರಿತಾಗಿಯೂ ಮಾತನಾಡದೆ ಅಥವಾ ರಾಜಕೀಯ ಮತ್ತು ಧರ್ಮ ಕುರಿತಾಗಿ ಮಾತನಾಡದೆ ವಿಜ್ಞಾನ, ಗಣಿತ ಮುಂತಾದ ಶೈಕ್ಷಣಿಕ ವಿಷಯಗಳ ಕುರಿತಾಗಿ ಮಾತ್ರ ಮಕ್ಕಳು ಮಾತನಾಡುವಂತೆ ಏರ್ಪಾಡು ಮಾಡಬೇಕೆಂದು ಯೋಚಿಸಿದೆವು. ಇದರ ಜೊತೆ ಭಾರತ–ಪಾಕಿಸ್ತಾನಿ ಶಾಲಾಮಕ್ಕಳು ಕಿರುಚಿತ್ರಗಳನ್ನು ತಯಾರಿಸಿ ಪರಸ್ಪರ ವಿನಿಮಯ ಮಾಡಿಕೊಳ್ಳುವ ಮೂಲಕ ಒಬ್ಬರನ್ನೊಬ್ಬರು ಪರಿಚಯ ಮಾಡಿಕೊಳ್ಳಬಹುದೆಂದು ಯೋಜನೆ ಹಾಕಿದೆವು. ಈ ಬಗೆಯ ನಿರಂತರ ಸಂಪರ್ಕ–ಸಂವಹನದಿಂದ ಮಕ್ಕಳ ಮನಸ್ಸಿನಲ್ಲಿ ನಿಷ್ಕಾರಣ ದ್ವೇಷ ಹುಟ್ಟುವುದನ್ನು ತಡೆಗಟ್ಟಬಹುದು. ನೆರೆಯ ರಾಷ್ಟ್ರವನ್ನು ದ್ವೇಷಿಸುವುದು ಮತ್ತು ಆ ಮೂಲಕ ರಾಷ್ಟ್ರೀಯತೆಯನ್ನು ಕಟ್ಟುವುದು ನಮ್ಮ ಕೆಟ್ಟ ರಾಜಕೀಯದ ಅವಶ್ಯಕತೆಯಾಗಿಬಿಟ್ಟಿದೆ. ಇದು ಅತ್ಯಂತ ಅನಾಗರಿಕವೂ, ಅವಾಸ್ತವವೂ ಆದ ಸಂಗತಿಯಾದರೂ ಜನರ ಗಮನವನ್ನು ನಮ್ಮದೇ ನೆಲದ ಮುಖ್ಯ ಸಮಸ್ಯೆಗಳಿಂದ ಬೇರೆಡೆಗೆ ಸೆಳೆಯಲು ಇದೊಂದು ಸುಲಭ ಸಾಧನ. ಪಾಕಿಸ್ತಾನದ ಜನ ಮತ್ತು ನಮ್ಮ ದೇಶದ ಜನ ನೇರ ಸಂಪರ್ಕದಲ್ಲಿಲ್ಲದಿರುವುದೇ ನಮ್ಮ ನಡುವೆ ಬೆಳೆಯುತ್ತಲೇ ಇರುವ ದ್ವೇಷಕ್ಕೆ ಕಾರಣ. ನಾವು ಕಟ್ಟಿಕೊಂಡಿರುವ 'ಪಾಕಿಸ್ತಾನೀಯರ' ಚಿತ್ರ ಮತ್ತು ಪಾಕಿಸ್ತಾನೀಯರು ಕಟ್ಟಿಕೊಂಡಿರುವ 'ಭಾರತೀಯರ' ಚಿತ್ರದ ನಡುವೆ ಸಂಘರ್ಷ ಅನಿವಾರ್ಯ. ಆದರೆ ಈ ಚಿತ್ರಗಳನ್ನು ಕಿತ್ತೆಸೆದು ನಿಜವಾದ ವ್ಯಕ್ತಿಗಳು ಸಂಧಿಸಿದರೆ ದ್ವೇಷ ಕರಗತೊಡಗಬಹುದು.

ಹೀಗೆ ಈ ಯೋಜನೆಯ ರೂಪುರೇಶೆಗಳನ್ನು ಖಚಿತಪಡಿಸಿಕೊಂಡು ಪ್ರಸ್ತಾವನೆಯನ್ನು ನನ್ನ ಸ್ವೀಡನ್ ದೇಶದ ಸ್ನೇಹಿತನಿಗೆ ಕಳುಹಿಸಿದೆ. ಅವನಿಗೆ ಈ ಯೋಜನೆ ಬಹಳ ಹಿಡಿಸಿತು. ನಮ್ಮ ದೇಶದ ಕೆಲವು ಶಾಲೆಗಳಾದರೂ ಈ ಯೋಜನೆ ನಡೆಸಲು ತಯಾರಿವೆ ಎಂಬುದನ್ನು ಖಚಿತಪಡಿಸಿಕೊಂಡು ಇದಕ್ಕೆ ಸಹಕರಿಸಬಹುದಾದ ಪಾಕಿಸ್ತಾನದ ಶಾಲೆಗಳ ಹುಡುಕಾಟಕ್ಕೆ ತೊಡಗಿದೆವು. ಗಿರೀಶ್ ಕಾರ್ನಾಡ್ ಅವರಿಗೆ ಪಾಕಿಸ್ತಾನದ ಕೆಲವು ವಿದ್ಯಾ ಸಂಸ್ಥೆಗಳ ನಿಕಟ ಸಂಪರ್ಕ ಇವೆ ಎಂದು ತಿಳಿಯಿತು. ಅವರನ್ನು ಸಂಪರ್ಕಿಸಿದಾಗ ತಮಗೆ ಅಂತಹ ಸಂಸ್ಥೆಗಳಾವುವು ತಿಳಿದಿಲ್ಲ ಎಂದುಬಿಟ್ಟರು. ಬಹಳ ಕಾಲದಿಂದಲೂ

ಪಾಕಿಸ್ತಾನದ ವ್ಯಕ್ತಿಯೊಬ್ಬ ಇ-ಮೇಲ್ ಮೂಲಕ ದೀಪಾವಳಿ ಶುಭಾಶಯ ಕಳುಹಿಸುತ್ತಿದ್ದ. ಬಹುಶಃ ನಮ್ಮ ಜಾಲತಾಣದ ಮೂಲಕ ನನ್ನ ಕೆಲಸದ ಬಗ್ಗೆ ತಿಳಿದಿದ್ದ ಎಂದು ಕಾಣುತ್ತದೆ. ಈತನಿಗೂ ನನ್ನ ಕಾರ್ಯ ಯೋಜನೆ ವಿವರಿಸಿ ಪಾಕಿಸ್ತಾನದ ಶಾಲೆಯೊಂದನ್ನು ಪರಿಚಯಿಸಬೇಕೆಂದು ಕೋರಿದೆ. ಈ ವ್ಯಕ್ತಿಯೂ ತನಗೆ ಅಂತಹ ಶಾಲೆಗಳಾವುವು ತಿಳಿದಿಲ್ಲ ಎಂದುಬಿಟ್ಟ. ಕಡೆಗೆ ಸ್ವೀಡನ್ ದೇಶದ ಮಿತ್ರ ತನ್ನ ದೇಶದಲ್ಲಿ ವಾಸವಾಗಿದ್ದ ಪಾಕಿಸ್ತಾನಿ ಮಿತ್ರನ ಮೂಲಕ ಲಾಹೋರ್‌ನ ಪ್ರೊ. ಬಟ್ ಎಂಬ ಉದಾರ ವ್ಯಕ್ತಿಯನ್ನು ಪರಿಚಯಿಸಿದ.

ಪ್ರೊ. ಬಟ್ ತತ್ವಶಾಸ್ತ್ರ ಬೋಧಿಸುವ ಉದಾರವಾದಿ ಚಿಂತಕ. ಇವರಿಗೆ ನಮ್ಮ ಪ್ರಾಜೆಕ್ಟ್ ಬಹಳ ಹಿಡಿಸಿತು. ಇಮೇಲ್ ಮೂಲಕ ಸಾಕಷ್ಟು ಪತ್ರ ವ್ಯವಹಾರ ನಡೆಯಿತು. ಕಡೆಗೆ ಸ್ಕೈಪ್ ಮೂಲಕ ಚರ್ಚೆ ನಡೆಸಲು ಸಮಯ ನಿಗದಿತವಾಯಿತು. ಬೆಳಿಗ್ಗೆ ೯ ಗಂಟೆಗೆ ನಾವು ನಮ್ಮ ಕಂಪ್ಯೂಟರ್-ಇಂಟರ್‌ನೆಟ್ ಸಜ್ಜು ಮಾಡಿ ನನ್ನ ಮನೆಯ ಹಜಾರದಲ್ಲಿ ಕುಳಿತೆವು. ಸಮಯಕ್ಕೆ ಸರಿಯಾಗಿ ಪ್ರೊ. ಬಟ್ ಕಂಪ್ಯೂಟರ್ ತೆರೆಯ ಮೇಲೆ ಕಾಣಿಸಿಕೊಂಡರು. ನಾವೂ ಅತನಿಗೆ ಕಾಣುತ್ತಿದ್ದೆವು. ನಾವು ನಮ್ಮ ಶಾಲೆಯ ಬಗ್ಗೆ ತಿಳಿಸಿ ಕನ್ನಡ ಮಾಧ್ಯಮದಲ್ಲಿ ಕಲಿಸುವ ವಿಷಯ ತಿಳಿಸಿದೆವು. ಪಾಕಿಸ್ತಾನದಲ್ಲೂ ಭಾಷಾ ಸಮಸ್ಯೆ ಇದೆ ಎಂದೂ, ಉರ್ದು ಎಲ್ಲರಿಗೂ ಬರುವುದಿಲ್ಲವೆಂದೂ ಮತ್ತು ಅಲ್ಲಿಯ ಜನ ಬೇರೆ ಬೇರೆ ಸ್ಥಳೀಯ ಭಾಷೆಗಳನ್ನು ಮಾತನಾಡುತ್ತಾರೆಂದೂ ತಿಳಿಸಿದ. ಅಲ್ಲದೆ ಅಲ್ಲಿಯ ಶಾಲೆಗಳಲ್ಲಿ ಹಾಡು ಸಂಗೀತಕ್ಕೆ ಅಂತಹ ಪ್ರೋತ್ಸಾಹ ದೊರೆಯದಿರುವ ಬಗ್ಗೆ ವಿಷಾದದಿಂದ ಹೇಳಿದ.

ಹೀಗೇ ಮಾತನಾಡುತ್ತಿರುವಾಗ ಬೀದಿನಾಯಿಯೊಂದು ನಮ್ಮ ಆವರಣಕ್ಕೆ ನುಗ್ಗಿ ನಮ್ಮ ನಾಯಿಗಳ ಜೊತೆ ಭಯಂಕರ ಜಗಳ ಪ್ರಾರಂಭಿಸಿತು. ಸ್ವಲ್ಪ ಕಾಲ ನಾವು ಏನೂ ಮಾತನಾಡಲು ಸಾಧ್ಯವಾಗಲಿಲ್ಲ. ಬಟ್ 'ಏನಾಯಿತು ಏನಾಯಿತು?' ಎಂದು ಕೇಳಿದರು. ನಾವು ನಾಯಿ ಜಗಳದ ಬಗ್ಗೆ ನಗುತ್ತ ವಿವರಿಸಿದೆವು. ಬಟ್ ಜೋರಾಗಿ ನಕ್ಕು 'ನೋಡಿ, ಇಂಡಿಯಾ-ಪಾಕಿಸ್ತಾನ ಮಾತನಾಡುವಾಗ ಇಂತಹದೊಂದು ಆಗಲೇಬೇಕು ಅಲ್ಲವೆ?' ಎಂದರು. ಸುಮಾರು ಒಂದು ಗಂಟೆ ಕಾಲ ನಾವು ಮುಂದಿನ ಕಾರ್ಯಯೋಜನೆ ಕುರಿತು ಚರ್ಚಿಸಿದೆವು. ಕೆಲವು ಇ-ಮೇಲ್‌ಗಳು ನಮ್ಮ ನಡುವೆ ಹರಿದಾಡುತ್ತಿರುವಂತೆಯೇ, ಸಂಪರ್ಕ ಏಕಾಏಕಿ ಸ್ತಬ್ದವಾಗಿಬಿಟ್ಟಿತು. ನಾವು ಎಷ್ಟೇ ಪ್ರಯತ್ನಿಸಿದರೂ ಪ್ರೊ. ಬಟ್ ಅವರನ್ನು ಸಂಪರ್ಕಿಸಲು ಸಾಧ್ಯವಾಗಲಿಲ್ಲ.

ಒಂದು ವರ್ಷದ ನಂತರ ನನ್ನ ಸ್ವೀಡನ್ ಮಿತ್ರನಿಂದ ತಿಳಿದು ಬಂದ ಸಂಗತಿ ಎಂದರೆ ನಮ್ಮೊಡನೆ ಸಹಕರಿಸಿದ್ದಕ್ಕೆ ಪ್ರೊ. ಬಟ್ ಅವರಿಗೆ ಅನೇಕ ತೊಂದರೆಗಳು ಎದುರಾದವು. ಅವರು ಸಂಪರ್ಕಿಸಿದ್ದ ಶಾಲೆ ಸ್ನೇಹಕ್ಕೆ ಸಿದ್ಧವಾಗಿರಲಿಲ್ಲ. ಆದರೂ ಪಾಕಿಸ್ತಾನದಲ್ಲಿ ನಮ್ಮ ಈ ಭಾವನೆಗಳಿಗೆ ಸ್ಪಂದಿಸುವ ಕೆಲವು ಶಾಲೆಗಳಾದರೂ ಇದ್ದೇ ಇವೆ ಎಂಬ ಆಶಾಭಾವನೆಯೊಡನೆ ನಾವು ಕಾಯುತ್ತಲೇ ಇದ್ದೇವೆ.

ಈಗ ಮಲಾಲಾ ಮತ್ತು ಕೈಲಾಶ್ ಸತ್ಯಾರ್ಥಿಯವರಿಗೆ ನೊಬೆಲ್ ಬಹುಮಾನ ಬಂದ ಹಿನ್ನೆಲೆಯಲ್ಲಿ ಪುನಃ ನಮಗೆ ಈ ಸಾಧ್ಯತೆಗಳು ಕಂಡುಬರುತ್ತಿವೆ. ಭಾರತ ಮತ್ತು ಪಾಕ್‌ನ ಶಿಕ್ಷಣ ಕ್ಷೇತ್ರ ಬಡವಾಗಿದೆ. ವಿಜ್ಞಾನ-ಗಣಿತ ಬೋಧನೆ ಬಹಳ ಹಿಂದುಳಿದಿದೆ. ಹಾಗಾಗಿ ಇದನ್ನು ಅಭಿವೃದ್ಧಿಪಡಿಸುವ ಸಹಕಾರ ಸಹಯೋಗದ ಒಪ್ಪಂದಗಳು ಉಭಯ ರಾಷ್ಟ್ರಗಳಿಗೂ ನಿರೀಕ್ಷೆಗಿಂತ ಹೆಚ್ಚು ಕ್ಷೇಮಗಳನ್ನು ತರಬಹುದೆಂದು ಆಶಿಸುತ್ತೇನೆ. ಮಲಾಲಾ ಮತ್ತು ಕೈಲಾಶ್ ಸತ್ಯಾರ್ಥಿಯವರು ಉಭಯ ರಾಷ್ಟ್ರಗಳ ಮಕ್ಕಳ ನಡುವೆ ಸ್ನೇಹ ಕಟ್ಟಿಕೊಟ್ಟರೆ ಅವರಿಗೆ ನೊಬೆಲ್ ಸಿಕ್ಕಿದ್ದು ಮತ್ತಷ್ಟು ಸಾರ್ಥಕವಾದೀತು.

---

ಮೂರನೇ ಪುಟದಿಂದ)



ಡಾ.ಸಬಿತಾ ಬನ್ನಾಡಿ ಮಾತನಾಡಿ ಮೇಲ್ನೋಟಕ್ಕೆ ಆಧುನಿಕತೆ ಮಹಿಳೆಯರ ಪಾಲಿಗೆ ಸಾಂಪ್ರದಾಯಿಕ ಚಿಂತನೆಗಳಿಂದ ಬಿಡುಗಡೆಯ ದಾರಿ ಎಂದೆನಿಸಿದರೂ ಅದೇ ಹೊತ್ತಿಗೆ ಆಧುನಿಕತೆ ಸಾಂಪ್ರದಾಯಿಕತೆಯಿಂದ ಮುಕ್ತವಾಗಿದೆಯೆ ಎಂಬ ಪ್ರಶ್ನೆಯೂ ಹುಟ್ಟುತ್ತದೆ. ಆಧುನಿಕತೆಯನ್ನು ಮಹಿಳೆ ಒಪ್ಪಿಕೊಂಡಿದ್ದಾಳೊ ಅಥವಾ ಹೇರಲಾಗಿದೆಯೊ ಎಂಬ ಪ್ರಶ್ನೆಯೂ ಪ್ರಸ್ತುತ ಎಂದು ಹೇಳಿದರು.

ಆರಂಭದಲ್ಲಿ ಆಧುನಿಕತೆ ಸ್ವಪ್ರಜ್ಞೆ, ಆಶಾವಾದ, ಹೆಣ್ಣಿನ ಹಕ್ಕಿನ ಮಂಡನೆ, ಕಣ್ಣಿಗೆ ಕಾಣುವ ಸಮಸ್ಯೆಗಳ ಪರಿಹಾರದ ಚಿಕ್ಕ ಕಿಂಡಿ ಎನ್ನುವ ಅರ್ಥದಲ್ಲಿ ಕಾಣಿಸಿತ್ತು. ಆದರೆ ಆಧುನಿಕತೆ ಮಹಿಳೆಯರ ಅವಶ್ಯಕತೆಗಳಿಗೆ ತಕ್ಕ ಬದಲಾವಣೆ ಆಗದೆ ಅದರ ಆವಿಷ್ಕಾರಗಳಿಗೆ ತಕ್ಕ ಬದಲಾವಣೆ ಎನ್ನುವ ಸತ್ಯ ಅರಿವಾಗಲು ಬಹಳ ಕಾಲ ಬೇಕಾಗಲಿಲ್ಲ ಎಂದರು. ಹೆಣ್ಣು ಗಂಡಿನಂತೆ ವರ್ತಿಸುತ್ತ ಆತನ ಹಾಗೆ ನಿಯಂತ್ರಕ ಸ್ವಭಾವ ಹೊಂದಿದರೆ ಮಾತ್ರ ವಿಮೋಚನೆ ಎಂಬ ತಪ್ಪು ಭಾವನೆಯನ್ನು ಆಧುನಿಕತೆ ಸೃಷ್ಟಿಸಿದೆ. ಹೆಣ್ಣು ಸೇರಿದಂತೆ ತನ್ನ ಅಸ್ತಿತ್ವಕ್ಕೆ ಧಕ್ಕೆ ತರುವ ವಸ್ತುಗಳನ್ನು ಹೊರಗಿಡುವ 'ಗಂಡು ನೋಟ'ದ ರಚನೆಯೊಳಗೆ ಹೆಣ್ಣನ್ನು ತೂರಿಸುವ ಪ್ರಕ್ರಿಯೆ ಆಧುನಿಕತೆಯಿಂದ ನಡೆಯುತ್ತಿದೆ. ಇದಲ್ಲದೆ ಹೆಣ್ಣನ್ನು ಭೂಮಿಯಿಂದಲೇ ವಿಮೋಚನೆಗೊಳಿಸುವ ಕ್ರೌರ್ಯವನ್ನು ಪೋಷಿಸುವ ಬೆಳವಣಿಗೆ ಅಕ್ಷರಸ್ಥರ ವಲಯದಲ್ಲೆ ನಡೆಯುತ್ತಿದೆ ಎಂದು ಹೇಳಿದರು.

'ಆಧುನಿಕತೆ ಮತ್ತು ಕನ್ನಡ ಬೌದ್ಧಿಕ ಲೋಕ' ಎಂಬ ವಿಷಯದ ಕುರಿತು ತುಮಕೂರು ವಿ.ವಿ. ಪ್ರಾಧ್ಯಾಪಕ ಡಾ.ಬಿ.ನಿತ್ಯಾನಂದ ಶೆಟ್ಟಿ ಮಾತನಾಡಿ ಕನ್ನಡದ ಬೌದ್ಧಿಕ ಲೋಕ ಆಧುನಿಕತೆಯನ್ನು ಏಕ ರೂಪವಾಗಿ ನಿವಾರಿಸಲೇಬೇಕಾದ ವಾಸ್ತವವಾದವಾಗಿ ನೋಡದೆ ಅದನ್ನು ಸಂಘರ್ಷದ, ಅನುಸಂಧಾನದ ರೂಪದಲ್ಲಿ ಮುಖಾಮುಖಿಗೊಂಡಿದೆ ಎನ್ನುವುದನ್ನು ವಿವರಿಸಿದರು. ತಮ್ಮ ಈ ಮಾತುಗಳನ್ನು ಅವರು ಮಾಸ್ತಿ, ಕುವೆಂಪು ಮತ್ತು ತೇಜಸ್ವಿಯವರ ಸಾಹಿತ್ಯದಿಂದ ಕೆಲ ಉದಾಹರಣೆಗಳನ್ನು ತೆಗೆದುಕೊಂಡು ವಿಷದೀಕರಿಸಿದರು

'ಆಧುನಿಕತೆ: ಜಾಗತೀಕರಣದ ಸಂದರ್ಭದ ಒಂದು ನೋಟ' ಕುರಿತು ಕುವೆಂಪು ವಿ.ವಿ. ಪ್ರಾಧ್ಯಾಪಕ ಡಾ.ರಾಜೇಂದ್ರ ಚೆನ್ನಿ ಮಾತನಾಡಿ ಆಧುನಿಕತೆ ಎಂಬುದು ಕೇವಲ ತಾತ್ವಿಕತೆಯಲ್ಲ. ಬಂಡವಾಳಕ್ಕೂ ಅದಕ್ಕೂ ನೇರವಾದ ಸಂಬಂಧವಿದೆ. ಬಲಿಷ್ಠ ನಾಗರಿಕತೆಗೆ ಇತರ ನಾಗರಿಕತೆ ಒಡ್ಡಿರುವ ಪ್ರತಿರೋಧ ಎನ್ನುವಂತೆ ಕೂಡ ಅದನ್ನು ನೋಡಬಹುದು. ಹಾಗೆ ನೋಡಿದರೆ ಭಾರತೀಯ ಆಧುನಿಕತೆಯ ಬಗ್ಗೆ ಸಮಗ್ರ ಅಧ್ಯಯನ ನಡೆದಿಲ್ಲ ಎಂದರು.



ಭಾರತದಲ್ಲಿ ಆಧುನಿಕತೆಯನ್ನು ತಿರಸ್ಕರಿಸುವ ನೆಲೆಗಳು ಕೂಡ ಪಶ್ಚಿಮದ ಮಾದರಿಯದ್ದೆ ಹೊರತು ಗಾಂಧಿ ಮಾರ್ಗದ್ದಲ್ಲ. ನಾವು ಒಪ್ಪಿಕೊಂಡಿರುವ ರಾಷ್ಟ್ರ ಪ್ರಭುತ್ವದ ಚೌಕಟ್ಟಿನಲ್ಲಿ ಆಧುನಿಕತೆ ಪರಿಕಲ್ಪನೆ ಅಡಗಿದೆ. ಜಾಗತೀಕರಣದ ಸಂದರ್ಭಕ್ಕೆ ಆಧುನಿಕತೆ ರಾಷ್ಟ್ರಗಳ ಪ್ರಭುತ್ವವನ್ನೆ ಅಮುಖ್ಯ ಎನ್ನುವಂತೆ ಮಾಡಿವೆ ಎಂದು ಹೇಳಿದರು. ಪ್ರಚೋದನೆ, ಸ್ವವಿಮರ್ಶೆ, ಅಧಿಕಾರ ಕೇಂದ್ರವನ್ನು ಪ್ರಶ್ನಿಸುವ ಸಣ್ಣ ಶಕ್ತಿ ಜಾಗತೀಕರಣ ಪೂರ್ವದ ಹಂತದ ಆಧುನಿಕತೆಗೆ ಇತ್ತು. ಈಗ ಪ್ರಜಾಪ್ರಭುತ್ವ ಎನ್ನುವ ತೆಳುವಾದ ಚೌಕಟ್ಟು ಮಾತ್ರ ಉಳಿದಿದ್ದು ಅದರೊಳಗೆ ನಿಜಕ್ಕೂ ಚಾಲಕನಂತೆ ಕೆಲಸ ಮಾಡುತ್ತಿರುವುದು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಎಂದರು.

ಆಧುನಿಕತೆಯ ಬಲ ಹೆಚ್ಚಿದಂತೆ ಅನಾಧುನಿಕವಾದ ಬಲಪಂಥಿಯ ಶಕ್ತಿಗಳು ಪ್ರಬಲಗೊಳ್ಳುತ್ತಿರುವ ವಿದ್ಯಮಾನವನ್ನು ನೋಡುತ್ತಿದ್ದೇವೆ. ಜಾತ್ಯಾತೀತತೆ ಎಂಬ ಪರಿಭಾಷೆಯೆ ನಿರ್ನಾಮವಾಗುವ ಹಂತದಲ್ಲಿದೆ. ಶ್ರೀಮಂತಿಕೆಯ, ಐಷಾರಾಮಿಕೆಯ ನುಡಿಗಟ್ಟಿನಲ್ಲಿ ಮಾತನಾಡುವ ಇಂದಿನ ಜಾಗತೀಕರಣ ಪ್ರಜೆಗಳ ಪಾಲಿಗೆ ರಾಷ್ಟ್ರವನ್ನೆ ಶತ್ರುವಾಗಿ ಮಾರ್ಪಡುವಂತೆ ಮಾಡುತ್ತಿದೆ ಎಂದು ಹೇಳಿದರು.

ಶಿಬಿರದ ಪ್ರತಿ ಉಪನ್ಯಾಸದ ನಂತರ ಶಿಬಿರಾರ್ಥಿಗಳಿಂದ ಅರ್ಧ ತಾಸಿನ ಕಾಲ ಪ್ರಶ್ನೆಗಳು ಮತ್ತು ಚರ್ಚೆಗೆ ಅವಕಾಶ ಮಾಡಿಕೊಡಲಾಗಿತ್ತು.

ಶಿಬಿರದಲ್ಲಿ ಪರಿಸರ ನಾಶ ಕುರಿತ ಅಲ್‌ಗೋರ್ ಅವರ ಸಾಕ್ಷ್ಯಚಿತ್ರದ ಕನ್ನಡ ಆವೃತ್ತಿ 'ನಿಷ್ಠುರ ಸತ್ಯ' ಮತ್ತು ಪಿ. ಶೇಷಾದ್ರಿ ನಿರ್ದೇಶನದ ಕಥಾಚಿತ್ರ 'ಭಾರತ್ ಸ್ಟೋರ್ಸ್' ಚಲನಚಿತ್ರವನ್ನು ಪ್ರದರ್ಶಿಸಲಾಯಿತು. ನಂತರ ಶಿಬಿರಾರ್ಥಿಗಳು ಚಲನಚಿತ್ರ ಕುರಿತು ಚರ್ಚೆ ನಡೆಸಿದರು

ಕರ್ನಾಟಕದ ವಿವಿಧ ಭಾಗಗಳಿಂದ ಬಂದ ಮತ್ತು ವಿದ್ಯಾರ್ಥಿ-ವಿದ್ಯಾರ್ಥಿನಿಯರೇ ಹೆಚ್ಚಿದ್ದ ೬೦ ಜನ ಶಿಬಿರಾರ್ಥಿಗಳು ಭಾಗವಹಿಸಿದ್ದರು.

**(ವರದಿ ಮತ್ತು ಚಿತ್ರಗಳು: ಎಂ. ರಾಘವೇಂದ್ರ)**

**ಯುವ ಸಮಾಜವಾದಿ ಚಿಂತನ ವೇದಿಕೆ**

–ಮಲ್ಲಿಕಾರ್ಜುನ ಹೊಸಪಾಳ್ಯ

# ಇನ್ ಕ್ಯಾಸ್ಟ್–ಔಟ್ ಕ್ಯಾಸ್ಟ್!

**ನೂ**ರಾರು ಜಾತಿ (ಕ್ಯಾಸ್ಟ್)ಗಳ ನಾಡು ನಮ್ಮದು, ಆದರೆ ಶೀರ್ಷಿಕೆಯಲ್ಲಿ ಪ್ರಸ್ತಾಪಿಸಿರುವ ಎರಡು ಜಾತಿಗಳ ಬಗ್ಗೆ ಹೆಚ್ಚು ಜನರಿಗೆ ತಿಳಿದಿರಲಿಕ್ಕಿಲ್ಲ. ಎಂಭತ್ತರ ದಶಕದಲ್ಲಿ ರಾಜ್ಯದ ಖ್ಯಾತ ಮಠವೊಂದರಲ್ಲಿ ಇದರ ಆಚರಣೆ ಇತ್ತು. ಅಲ್ಲಿ ಶಿಕ್ಷಣ ಪಡೆಯುತ್ತಿದ್ದ ಸಾವಿರಾರು ಮಕ್ಕಳನ್ನು 'ಇನ್ ಕ್ಯಾಸ್ಟ್–ಔಟ್ ಕ್ಯಾಸ್ಟ್' ಎಂಬ ಎರಡೇ ಹೆಸರಿನಲ್ಲಿ ವರ್ಗೀಕರಿಸಲಾಗಿತ್ತು. ಮಠದ ವಾತಾವರಣದಲ್ಲಿ ಈ ಎರಡು ಶಬ್ದಗಳು ಸಹಜವಾಗಿ ಬಳಸಲ್ಪಡುತ್ತಿದ್ದವು. ಹಾಗೆಂದು ಇದು ಜಾತಿಗಳನ್ನು ತೊಡೆದು ಹಾಕುವ ಪ್ರಯತ್ನವೆಂದುಕೊಳ್ಳಬೇಡಿ, ಲಿಂಗಾಯಿತ ಮಕ್ಕಳನ್ನೆಲ್ಲಾ 'ಇನ್ ಕ್ಯಾಸ್ಟ್' ಎಂದೂ ಉಳಿದೆಲ್ಲಾ ಜಾತಿಯ ಮಕ್ಕಳನ್ನು 'ಔಟ್ ಕ್ಯಾಸ್ಟ್' ಎಂದೂ ಸಾರಾಸಗಟಾಗಿ ವರ್ಗೀಕರಿಸಿ ಗುರುತಿಸುತ್ತಿದ್ದ ಕ್ರಮವದು.

ನಾನು ಎಂಟನೇ ತರಗತಿಗೆ ಅಲ್ಲಿ ಪ್ರವೇಶ ಪಡೆದಿದ್ದೆ. ಊರಿನ ಸಹಜ ವಾತಾವರಣದಿಂದ ಹೊರಬಿದ್ದಿದ್ದರಿಂದ ಮೊದಲ ವಾರವೇ ಖಿನ್ನತೆ ಆವರಿಸಿತ್ತು. ಹಾಗೊಂದು ದಿನ ಮಠದ ಜನರಲ್ ಹಾಸ್ಟೆಲ್ ಬಳಿಯ ಬಾವಿ ಕಟ್ಟೆ ಮೇಲೆ ಕುಳಿತು ನನಗರಿವಿಲ್ಲದೆಯೇ ಅಳುತ್ತಿದ್ದೆ. ಆಗ ಒಬ್ಬ ಬಂದ. 'ಯಾಕಲಾ ಅಳ್ತಾ ಇದ್ದಿಯಾ'. ನಾನು ಸುಮ್ಮನಿದ್ದೆ. 'ನೀನು ಇನ್ ಕ್ಯಾಸ್ಟೋ ಔಟ್ ಕ್ಯಾಸ್ಟೋ' ಎಂದು ಕೇಳಿದ. ಅದೇ ಮೊದಲು ನಾನು ಆ ಪದಗಳನ್ನು ಕೇಳಿದ್ದು, ಅರ್ಥವಾಗದವನಂತೆ ಅವನ ಮುಖ ನೋಡಿದೆ. 'ಯಾಕಲಾ ಅಂಗ್ ನೋಡ್ತಿ ನಿನ್ ಜಾತಿ ಯಾವ್ದಲಾ'. ಈಗ ಅರ್ಥವಾಯಿತು ಜಾತಿ ಕೇಳುತ್ತಿದ್ದಾನೆಂದು, ಹೇಳಿದೆ. 'ಇನ್ ಕ್ಯಾಸ್ಟ್ ಆಗಿ ಇಂಗ್ ಅಳ್ತಾ ಇದ್ದೀಯಲ್ಲಾ, ನಾವೆಲ್ಲಾ ಇಲ್ವಾ' ಅಂತ ಬೈದ, ಎಬ್ಬಿಸಿಕೊಂಡು ಹೋಗಿ ಅಂಗಡಿಯಲ್ಲಿ ಕಂಬಾರಗಟ್ಟು, ಕಡ್ಲೆಪುರಿ ಕೊಡಿಸಿದ.

ಈ ರೀತಿ ಆ 'ಇ.ಕ್ಯಾ. ಮತ್ತು ಔ.ಕ್ಯಾ.'ಗಳು ನನಗೆ ಪರಿಚಯವಾದವು.

ಅಲ್ಲಿನ ಪ್ರತಿಯೊಂದು ನಡೆ ನುಡಿ ಆಚರಣೆಯಲ್ಲೂ ಇದು ಎದ್ದು ಕಾಣುತ್ತಿತ್ತು. ಇ.ಕ್ಯಾ. ಹುಡುಗರಿಗೇ ಒಂದು ಊಟದ ಮನೆ, ಇತರೆಲ್ಲಾ ಜಾತಿಯವರಿಗೆ ಒಂದು ಊಟದ ಮನೆ. ಇ.ಕ್ಯಾ. ಹುಡುಗರು ಕಡ್ಡಾಯವಾಗಿ ಕೆಂಪು ಟವಲ್ ಹೊದ್ದು ಊಟಕ್ಕೆ ಹೋಗಬೇಕು, ಔ.ಕ್ಯಾ.ನವರಿಗೆ ಕಲರ್ ಟವಲ್.

ವಸತಿ ಎರಡೂ ಕ್ಯಾಸ್ಟ್‌ನವರಿಗೂ ಒಂದೇ ಹಾಸ್ಟೆಲ್‌ನಲ್ಲಿ. ಆದರೆ ರೂಮುಗಳ ಹಂಚಿಕೆ ಮಾತ್ರ ಬೇರೆ–ಬೇರೆ. ಒಂದು ರೂಮಿನಲ್ಲಿ ಇ.ಕ್ಯಾ. ಹುಡುಗರು ಪಕ್ಕದ ರೂಮಿನಲ್ಲಿ ಔ.ಕ್ಯಾ.ಹುಡುಗರು. ಹೀಗೇ ಹಂಚಿಕೆಯಾಗುತ್ತಿತ್ತು. ಪುಣ್ಯಕ್ಕೆ ಶಾಲೆಯಲ್ಲಿ ಹೀಗೆ ಬೆಂಚುಗಳ ವರ್ಗೀಕರಣ ಇದ್ದಿರಲಿಲ್ಲ. ಮಠದ ವಾತಾವರಣದಲ್ಲಿ ಪರಿಸರದಲ್ಲಿ ಜೊತೆಯಾಗಿ ಅಡ್ಡಾಡಬಹುದಿತ್ತು.

ಒಮ್ಮೆ ಹೀಗೆ ನಾನು ಮತ್ತು ನನ್ನ ಸ್ನೇಹಿತ ಮಠದ ಆವರಣದಲ್ಲಿ ಓಡಾಡುತ್ತಿದ್ದೆವು. ಒಬ್ಬರು ಮರಿಸ್ವಾಮಿ ಕರೆದರು. ನನಗಿಂತ ಬಲವಾಗಿದ್ದ ಸ್ನೇಹಿತನಿಗೆ

'ಲೈ ಬಿಲ್ಪತ್ರೆ ಹೂವ ಬೇಕು ಕಿತ್ಕಂಬತ್ತಿಯೇನೋ'?

'ಹೂಂನ್ ಸಾ'

ಇನ್ನೇನು ಹೊರಡಲಿದ್ದೆವು. ಅವರಿಗೇನೋ ಅನುಮಾನ ಬಂತು.

'ಲೈ ಬಾರ್ಲಾ ಇಲ್ಲಿ, ನೀನು ಇನ್ ಕ್ಯಾಸ್ಟೋ, ಔಟ್ ಕ್ಯಾಸ್ಟೋ'

'ಔಟ್ ಕ್ಯಾಸ್ಟು ಸಾ'

ಪಿತ್ತ ನೆತ್ತಿಗೇರಿತವರಿಗೆ 'ಓಗ್ ದನಕಾಯೋಗ್' ಎಂದು ಉಗಿದು ಪಕ್ಕದಲ್ಲಿದ್ದ ನನ್ನನ್ನು ಕರೆದು ನಾನು ಇ.ಕ್ಯಾ. ಅನ್ನುವುದನ್ನು ಕನ್‌ಫರ್ಮ್ ಮಾಡಿಕೊಂಡು ಪತ್ರೆ ತರಲು ಕಳಿಸಿದರು.

ಹಿರಿಸ್ವಾಮಿಗಳು, ಮರಿಸ್ವಾಮಿಗಳು, ಮಾಸ್ತರರು, ಕೆಲಸಗಾರರು, ಹಿರಿ ವಿದ್ಯಾರ್ಥಿಗಳು, ಕಿರಿ ವಿದ್ಯಾರ್ಥಿಗಳಾದಿಯಾಗಿ ಎಲ್ಲರೂ ಹೀಗೇ ಮಾತನಾಡುತ್ತಿದ್ದರು. ನಾನೊಮ್ಮೆ ಮಠದ ದನಗಳ ಕೊಟ್ಟಿಗೆಗೆ ಹೋಗಿದ್ದೆ, ಅಂದು ಭಾನುವಾರ ಅಥವಾ ಯಾವುದೋ ರಜ. ಅಲ್ಲಿದ್ದವರು ಕಾಯಿ–ಬೆಲ್ಲ ತಿನ್ನುತ್ತಿದ್ದರು. ನನಗೂ ಹಸಿವಾಗಿದ್ದರಿಂದ ಆಸೆಗಣ್ಣು ಬಿಟ್ಟೆ. ಕೊಡಲು ಮುಂದೆ ಬಂದವರು ನನ್ನ ಜಾತಿ ಕೇಳಿ 'ಔಟ್ ಕ್ಯಾಸ್ಟಿನವರಾದ ನಮ್ಮ ಕೈಯಿಂದ ನೀವು ತಿನ್ನಬಾರದೆಂದು' ಹೇಳಿ ಕಳಿಸಿಬಿಟ್ಟರು. ಸಿಟ್ಟಿನಿಂದ ಅಳು ಬಂದಿತ್ತು.

ಇತ್ತೀಚೆಗೆ ಲೇಖಕರು ಮತ್ತು ಪ್ರಾಧ್ಯಾಪಕರಾದ ಪ್ರೊ.ಸಿದ್ದಗಂಗಯ್ಯ ಹೊಲತಾಳರ ಆತ್ಮಚರಿತ್ರೆ 'ಹೊಲತಾಳ ಹಾದಿ' ಓದುತ್ತಿದ್ದೆ, ಅವರು ಮಠದ ವಿದ್ಯಾರ್ಥಿಯಾಗಿದ್ದಾಗ ಇ.ಕ್ಯಾ. ಮತ್ತು ಔ.ಕ್ಯಾ. ವಿದ್ಯಾರ್ಥಿ ಗುಂಪುಗಳ ನಡುವೆ ನಡೆಯುತ್ತಿದ್ದ ಜಗಳದ ಬಗ್ಗೆ ವಿವರವಾಗಿ ಬರೆದಿದ್ದಾರೆ. ಊಟದ ಹಾಲಿನಲ್ಲೊಮ್ಮೆ ಇದೇ ಕಾರಣಕ್ಕಾಗಿ ರಾಗಿ ಮುದ್ದೆಯಲ್ಲೇ ಹೊಡೆದಾಟವಾಯಿತಂತೆ. ಜಾತ್ಯಾತೀತ ಮನೋಭಾವದ ಮುಖವನ್ನು ಹೊರ ಪ್ರಪಂಚಕ್ಕೆ ತೋರಿಸಿಕೊಳ್ಳುತ್ತಿದ್ದ ಮಠದ ಈ ಒಳಗಿನ ಮುಖದ ಬಗ್ಗೆ ಹೊಲತಾಳರು ಬೇಸರ ಪಡುತ್ತಾರೆ.

ಈಗ ಮಠದಲ್ಲಿ ಈ ಪದಗಳ ಬಳಕೆ ಇಲ್ಲ. ನಾನು ಇತ್ತೀಚೆಗೆ ಅಲ್ಲಿಗೆ ಹೋದಾಗ ಕೆಲ ವಿದ್ಯಾರ್ಥಿಗಳನ್ನು ಈ ಬಗ್ಗೆ ಕೇಳಿದೆ, ಅವರಿಗೆ ಇ.ಕ್ಯಾ., ಔ.ಕ್ಯಾ. ಬಗ್ಗೆ ತಿಳಿದಿರಲಿಲ್ಲ. ಅಂತರಂಗದ ಅರಿವಿನಿಂದಲೋ ಬಹಿರಂಗದ ಒತ್ತಡದಿಂದಲೋ ಅಂತೂ ಬದಲಾವಣೆ ಆಗಿತ್ತು. ಆದರೆ ಊಟದ ಮನೆ ಮತ್ತು ವಸತಿಯಲ್ಲಿ ಏನಾಗಿದೆಯೋ ತಿಳಿಯುವ ಅವಕಾಶ ಸಿಕ್ಕಿಲ್ಲ.



**(ತುಮಕೂರು ಜಿಲ್ಲೆಯ ಮಲ್ಲಿಕಾರ್ಜುನ ಹೊಸಪಾಳ್ಯ ಸಮಾಜವಾದಿ ಯುವಜನ ಸಭಾದ ಮೂಲಕ ಬೆಳೆದು, ಈಗ ದೇಸಿ ಬೀಜ ಸಂರಕ್ಷಣೆ, ಪಾರಂಪರಿಕ ಜಲ ಸಂರಕ್ಷಣೆ ಇತ್ಯಾದಿ ಸುಸ್ಥಿರ ಕೃಷಿ ಪ್ರಸಾರದ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ.)**



## ನೊಬೆಲ್ ಶಾಂತಿ ಪುರಸ್ಕೃತರಿಗೆ ಅಭಿನಂದನೆಗಳು!

ಈ ಬಾರಿಯ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಪಾಕಿಸ್ತಾನದ ಮಲಾಲಾ ಯೂಸುಫ್ಜಾಯ್ ಮತ್ತು ಭಾರತದ ಕೈಲಾಶ್ ಸತ್ಯಾರ್ಥಿ ಎನ್ನುವವರಿಗೆ ಜಂಟಿಯಾಗಿ ಘೋಷಿಸಲಾಗಿದೆ. ಇಬ್ಬರೂ ಮಕ್ಕಳ ಹಕ್ಕುಗಳ ಹೋರಾಟಗಾರರೆಂದು ಗುರುತಿಸಿ ಈ ಪ್ರಶಸ್ತಿ ನೀಡಲಾಗಿದೆ. ಮಲಾಲಾ ಹೆಸರು ಎಲ್ಲರಿಗೂ ಗೊತ್ತು. ಬೆಟ್ಟ–ಗುಡ್ಡಗಳ ನಾಡಾದ ಫಕ್ತೂನಿಸ್ತಾನದ ೧೭ ವರ್ಷಗಳ ಈ ಎಳೆಯ ಬಾಲಕಿ ಎರಡು ವರ್ಷಗಳ ಹಿಂದೆಯೇ ತಾಲಿಬಾನಿಗಳು ಮಹಿಳಾ ಶಿಕ್ಷಣದ ಮೇಲೆ ಹೇರಿದ ನಿರ್ಬಂಧ ಮತ್ತು ನಡೆಸಿದ ಹಿಂಸಾಚಾರದ ವಿರುದ್ಧ ಪ್ರಚಾರ ಕೈಗೊಂಡು ಅವರಿಂದ ಪ್ರಾಣಾಂತಿಕವಾದ ಗುಂಡೇಟಿನಿಂದ ಗಾಯಗೊಂಡು ಬದುಕುಳಿದ ಮೇಲೂ ತನ್ನ ಆಂದೋಲನವನ್ನು ಮುಂದುವರಿಸಿದ ದಿಟ್ಟೆ. ಆದರೆ 'ಈ ಸತ್ಯಾರ್ಥಿ ಯಾರು?' ಇದು ಎಲ್ಲರೂ ಈಗ ಕೇಳುತ್ತಿರುವ ಪ್ರಶ್ನೆ. ಇದಕ್ಕೆ, ಸತ್ಯಾರ್ಥಿ ತಮ್ಮ ಬಚಪನ್ ಬಚಾವೋ ಆಂದೋಲನದ ಮೂಲಕ ಸಾವಿರಾರು ಮಕ್ಕಳನ್ನು ಬಾಲದುಡಿಮೆಯಿಂದ ರಕ್ಷಿಸಿದ್ದಾರೆ ಎಂದು ಉತ್ತರಿಸಲಾಗುತ್ತಿದೆ.

ಈ ಇಬ್ಬರನ್ನೂ ಅಭಿನಂದಿಸುತ್ತಲೇ ಒಂದು ಮಾತನ್ನು ಹೇಳಬೇಕಾಗಿದೆ. ಗಾಂಧಿಗೆ ನೋಬಲ್ ಶಾಂತಿ ಪುರಸ್ಕಾರ ನೀಡಲು ಹಲವು ತಕರಾರುಗಳನ್ನು ಎತ್ತಿದ ನೊಬೆಲ್ ಪ್ರಶಸ್ತಿ ಎಂಬುದು, ಪೂರ್ವ ದೇಶಗಳಲ್ಲಿ ಪಶ್ಚಿಮದ ರಾಜಕಾರಣದ ನೆಲೆಗಳನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪೋಷಿಸುವವರಿಗೆ ಮಾನ್ಯತೆ ಒದಗಿಸುವ ಒಂದು ಮಹಾ ಯೋಜನೆಯೇ ಆಗಿದೆ ಎಂಬ ಅಭಿಪ್ರಾಯ ಮೊದಲಿಂದಲೂ ಪ್ರಚಲಿತದಲ್ಲಿದೆ. ಏಕೆಂದರೆ, ಕೈಲಾಶ್ ಸತ್ಯಾರ್ಥಿಯವರನ್ನು ಇತ್ತೀಚಿನವರೆಗೂ ಸಾಕಿ ಬೆಳೆಸಿದ ಸ್ವಾಮಿ ಅಗ್ನಿವೇಶ್‌ರ ಹಲವು ದಶಕಗಳ ಸಾಧನೆಯ ಚರಿತ್ರೆ ಇರುವ ಜೀತವಿಮುಕ್ತಿ ಆಂದೋಲನ ನೊಬೆಲ್ ಸಮಿತಿಯ ಕಣ್ಣಿಗೆ ಬೀಳಲಿಲ್ಲ. ಆದರೆ, GATT ಒಪ್ಪಂದದ ಸಂದರ್ಭದಲ್ಲಿ ಭಾರತದಲ್ಲಿನ ಬಾಲಕಾರ್ಮಿಕರ ಸಮಸ್ಯೆಯನ್ನು ಪಶ್ಚಿಮದ ಅಭಿವೃದ್ಧಿಗೊಂಡ ದೇಶಗಳಿಗೆ ಅನುಕಲಕರಾವಾಗುವಂತೆ, ಅಂದರೆ ಭಾರತದ ಕೆಲ ಉತ್ಪನ್ನಗಳ ರಫ್ತುಗಳ ಮೇಲೆ ನಿರ್ಬಂಧ ಹೇರಲು ಸಾಧ್ಯವಾಗುವಂತೆ ಪ್ರತಿಬಿಂಬಿಸಿದ ಸತ್ಯಾರ್ಥಿಯವರ ಅಷ್ಟಾಗಿ ಯಾರ ಗಮನಕ್ಕೂ ಬಾರದ ಬಾಲಕಾರ್ಮಿಕ ವಿಮುಕ್ತಿ ಆಂದೋಲನ ಅದರ ಕಣ್ಣಿಗೆ ಬಿದ್ದುದರ ಮರ್ಮವೇನು ಎಂಬ ಪ್ರಶ್ನೆ ಇದ್ದೇ ಇದೆ, ಜೊತೆಗೆ ಸತ್ಯಾರ್ಥಿಯವರಿಗೆ World Vision ಎಂಬ ಒಂದು ದೊಡ್ಡ ಕ್ರೈಸ್ತವಾದಿ ಜಾಗತಿಕ ದಾನ ಸಂಸ್ಥೆಯ ಬೆಂಬಲವೂ ಇದೆಯೆಂದು ಹೇಳಲಾಗುತ್ತದೆ–ಸಂಪಾದಕ

ಸಮಕಾಲೀನ

# ಕಳೆದು ಹೋಗುತ್ತಿರುವ ಕನ್ನಡ



ಬೆಳಗಾವಿ ಬಳಿಯ, ಮರಾಠಿ ಭಾಷಿಕರೇ ಹೆಚ್ಚಿರುವ ಗಡಿಗ್ರಾಮದವರು ತಮ್ಮ ಊರಿನ ನಾಮಫಲಕವನ್ನು ಮರಾಠಿಯಲ್ಲಿ ಹಾಕಿಕೊಂಡಾಗ ನಮ್ಮ ವೀರ ಕನ್ನಡಿಗರ ಕ್ರೋಧ ಉಕ್ಕಿ ಅಲ್ಲಿ ರಕ್ತಪಾತವೇ ಆಗಿಹೋಯಿತು. ಆದರೆ ಕರ್ನಾಟಕದೊಳಗೆ ಕನ್ನಡಿಗರೇ ಇರುವ ಬಹುಪಾಲು ಹಳ್ಳಿಗಳಲ್ಲಿ ಕನ್ನಡ ಶಾಲೆಗಳು ಮುಚ್ಚಿಹೋಗುತ್ತಿವೆ ಅಥವಾ ಆ ಹಂತ ತಲುಪುತ್ತಿವೆ. ಆದರೆ ಈ ವೀರ ಕನ್ನಡಿಗರಿಂದ ಒಂದು ಹನಿ ಕಣ್ಣೀರಿರಲಿ, ಒಂದು ನಿಟ್ಟುಸಿರೂ ಇಲ್ಲ. ಬದಲಿಗೆ ಇದನ್ನು ಪ್ರಗತಿ, ಅಭಿವೃದ್ಧಿ, ವಿಮೋಚನೆ ಎಂದು ಈ ಕನ್ನಡಿಗರು ಬಗೆದು ಸಂತೋಷಪಡುತ್ತಿದ್ದಾರೆ. ಮತ್ತೊಂದು ರಾಜ್ಯೋತ್ಸವದ ಸಂಭ್ರಮಕ್ಕೆ ಸಜ್ಜಾಗುತ್ತಿದ್ದಾರೆ.

ಇದು ಕರ್ನಾಟಕದ ದುರಂತ ಕಥೆ; ಕನ್ನಡಿಗರ ದುರಂತ ಕಥೆ. ತಮ್ಮ ನಿಜವಾದ ಹಿತ, ನಿಜವಾದ ಅಸ್ಮಿತ, ನಿಜವಾದ ಶಕ್ತಿ ಎಲ್ಲಿದೆ, ಅದು ಎಲ್ಲಿಂದ ಚಿಮ್ಮುತ್ತದೆ ಎಂದು ಆಲೋಚಿಸಲಾಗದ ಬದುಕಿನ ಧಾವಂತಕ್ಕೆ ಸಿಕ್ಕಿರುವ ಜನಸಮುದಾಯ ಕನ್ನಡಿಗರದ್ದಾಗಿ ಹೋಗಿದೆ. ಹಾಗೆ ನೋಡಿದರೆ, ಇದು ರಾಷ್ಟ್ರದ ಇಂದಿನ ಎಲ್ಲ ಜನಸಮುದಾಯಗಳ ಕಥೆಯೇ ಅಲ್ಲವೇ ಎಂಬ ಪ್ರಶ್ನೆ ಕೇಳಬಹುದು. ಹೌದು, ಸರಿ ಸುಮಾರಾಗಿ ಇದು ಎಲ್ಲ ಸಮುದಾಯಗಳ ಕಥೆಯೇ. ಆದರೆ, ಹಾಗೆಂದು ನಾವು ಅದನ್ನು ನಿರ್ಲಕ್ಷಿಸಬಹುದೇ? ಇದರ ಮಧ್ಯೆಯೇ ಒಂದು ಸಂಗತಿಯನ್ನು ನಾವು ಮರೆಯುವಂತಿಲ್ಲ. ಕನ್ನಡಿಗರು ಒಂದು ಭಾಷಾ ಸಮುದಾಯವಾಗಿ ಅವರ ಆಧುನಿಕ ಇತಿಹಾಸ ಸ್ವಲ್ಪ ದುರ್ಬಲವಾದದ್ದೇ; ಅದು ಹಲವು ಸಡಿಲ ಕೊಂಡಿಗಳ ಇತಿಹಾಸವೇ ಆಗಿದೆ. ಈ ಬಗ್ಗೆ ಹಿಂದೊಮ್ಮೆ–ಬಹುಶಃ ಕಳೆದ ನವೆಂಬರ್ ಸಂಚಿಕೆಯಲ್ಲಿ–ಇದೇ ಪತ್ರಿಕೆಯಲ್ಲಿ ನಾನು ಬರೆದಿರುವೆ. ಹಾಗಾಗಿಯೇ ಹಿಂದಿ, ಬಂಗಾಳಿ, ಮರಾಠಿ, ತಮಿಳು, ತೆಲುಗು ಇತ್ಯಾದಿ ಭಾಷಿಕರಿಗೆ ಹೋಲಿಸಿದರೆ ಕನ್ನಡಿಗರು ಕನ್ನಡವನ್ನು ಕಳೆದುಕೊಳ್ಳುವ ಆತಂಕ ಹೆಚ್ಚು ತೀವ್ರವೇ ಆಗಿದೆ. ಅನ್ಯ ಭಾಷೆಗಳಲ್ಲಿ ಮಾತಾನಾಡಲು ಕನ್ನಡಿಗರು ಹಾತೊರೆಯುವಷ್ಟು ಇನ್ನಾರಾದರೂ ಹಾತೊರೆಯುವುದನ್ನು ನೀವು ಕಂಡಿದ್ದೀರಾ? ಏಕೆ ಹೀಗೆ? ಅಷ್ಟೇ ಅಲ್ಲ, ಈ ಹಾತೊರಿಕೆ ಒಂದು ಗುಣವೆಂದೂ ನಮ್ಮನ್ನು ನಾವು ನಂಬಿಸಿಕೊಂಡುಬಿಟ್ಟಿದ್ದೇವೆ ಕೂಡ!

ನಾವು ಕನ್ನಡ ಶಾಲೆಗಳನ್ನು ಕಳೆದುಕೊಳ್ಳುವುದು ಎಂದರೆ ಏನು? ಪ್ರಾಥಮಿಕ ಕಲಿಕೆಯ ಮಾಧ್ಯಮವಾಗಿ ನಮ್ಮ ಭಾಷೆಯನ್ನು ಕಳೆದುಕೊಳ್ಳುವುದು ಎಂದರೆ ಏನು? ಅದು ಮೂಲತಃ ಕಲಿಕೆಯ ಮೂಲ ಭಾವಕೋಶವನ್ನೇ, ಮೂಲ ಘಟಕಗಳನ್ನೇ ಕಳೆದುಕೊಂಡಂತೆ. ಹಾಗಾದಾಗ ಕಲಿಕೆ ಎಂಬುದಾದರೂ ಏನು? ಯಾರಿಗಾಗಿ ಆ ಕಲಿಕೆ? ತನಗಾಗಿ ಅಲ್ಲದ ಕಲಿಕೆ ಯಾವಾಗಲೂ ಅಪಾಯಕಾರಿಯೇ! ನಾವಿಂದು ಹೆಚ್ಚೆಚ್ಚು ಕಾಣುತ್ತಿರುವುದು ಅದನ್ನೇ–ತಂದೆ ತಾಯಿಯರಿಂದ ಮಕ್ಕಳನ್ನು ಅಗಲಿಸುವ, ಮಕ್ಕಳನ್ನು ತಮ್ಮೂರುಗಳಿಂದ ಅಗಲಿಸುವ, ಒಟ್ಟಾರೆಯಾಗಿ ನಮ್ಮನ್ನು ನಮ್ಮಿಂದಲೇ ಅಗಲಿಸುವ–ಹಿಂಸೆಯ ಕಲಿಕೆಯೇ ಅಲ್ಲವೇ? ಹಾಗಾಗಿ ಪ್ರಾಥಮಿಕ ಕಲಿಕೆಯ ಭಾಷೆಯಾಗಿ ಒಂದು ಭಾಷೆಯನ್ನು ಕಳೆದುಕೊಳ್ಳುವುದು ಎಂದರೆ ಸಾರತಃ ಒಂದು ಭಾಷೆಯನ್ನೇ ಕಳೆದುಕೊಂಡಂತೆ. ಆದರೆ ಹಾಗೆ ಕಳೆದುಕೊಳ್ಳುವುದು ಒಂದು ಭಾಷೆಯನ್ನು ಮಾತ್ರವಲ್ಲ; ನಮ್ಮ ವ್ಯಕ್ತಿತ್ವದ ನಿಜ ಸೆಲೆಗಳನ್ನು; ಅವುಗಳನ್ನು ಉಕ್ಕಿಸುತ್ತಿರುವ ಆಳಾತಿ ಆಳದ ನೆನಪುಗಳನ್ನು; ಅವುಗಳ ಪರಿಮಳಗಳನ್ನು. ಆ ಪರಿಮಳಗಳನ್ನು ಆಘ್ರಾಣಿಸಬಲ್ಲ ಶಕ್ತಿ ಬಿಂದುಗಳನ್ನು.. ಅಂದರೆ ನಮ್ಮ ಆಳದ ಸುಖ–ಸಂತೋಷ–ಸಂಭ್ರಮಗಳನ್ನು ಆನಂದಿಸಲು ಅನುವು ಮಾಡಿಕೊಡುವ ಒಂದು ಶ್ರೀಮಂತ ಭಾವಕೋಶವನ್ನು. ಅದನ್ನು ಕಳೆದುಕೊಂಡು ನಿಮ್ಮ ಹೊರ(ಇಂಗ್ಲಿಷ್ ಮಾಧ್ಯಮ) ಕಲಿಕೆಯ ವಿಜ್ಞಾನ–ತಂತ್ರಜ್ಞಾನಗಳು ಕಲ್ಪಿಸುವ ಸುಖ–ಸಂತೋಷಗಳನ್ನು ನಿಜವಾಗಿ ಅನುಭವಿಸುವುದಾದರೂ ಹೇಗೆ? ನಮ್ಮ ಶಾಲಾ ಮಕ್ಕಳ ಕುತ್ತಿಗೆಗೆ ಬಿಗಿಯಲಾಗಿರುವ ಟೈ ಬರಿ ಟೈ ಅಲ್ಲ ಅಲ್ಲವೇ?.

ಒಂದು ಜನ ಸಮುದಾಯ ಹೀಗೆ ಒಂದು ಭಾಷೆಯನ್ನು ಕಳೆದುಕೊಳ್ಳತೊಡಗುವುದು ಎಂದರೆ ಮೂಲತಃ ಆ ಜನಸಮುದಾಯ ತನ್ನ ಕಾವ್ಯವನ್ನು ಕಳೆದುಕೊಂಡ ಹಾಗೆ. ತನ್ನ ಕಾವ್ಯವನ್ನು ಕಳೆದುಕೊಂಡ ಜನಸಮುದಾಯವನ್ನು ಒಂದು ಸಮುದಾಯವೆಂದು ಕರೆಯಬಹುದೇ? ಅದೊಂದು ಸಂಸ್ಕೃತಿಯಾಗಿ ಉಳಿಯಬಲ್ಲುದೇ? ಇದನ್ನು ಯಾರಿಗೆ ಹೇಳುವುದು? ಹೇಳಿಕೊಂಡರೂ ಆ ಭಾಷೆಯೇ ಅರ್ಥ ಆಗದಂತಹ ಒಂದು ಆಧುನಿಕ ರಾಷ್ಟ್ರಪ್ರಭುತ್ವವನ್ನು ನಾವೇ ಕಟ್ಟಿಕೊಂಡು ಅದರೊಳಗೆ ಬಂಧಿತರಾಗಿಬಿಟ್ಟಿದ್ದೇವೆ. ಅದೀಗ ನಿಧಾನವಾಗಿ ಕೆಲವರಿಗಾದರೂ ಅರ್ಥವಾಗತೊಡಗಿದೆ. ಏಕೆಂದರೆ ಅಂತಿಮ ನ್ಯಾಯ ಹೇಳುವ ನಮ್ಮ ಈ ರಾಷ್ಟ್ರದ ಸರ್ವೋನ್ನತ ನ್ಯಾಯಾಲಯವೇ ಈಗ ಅಂತಿಮವಾಗಿ ಮತ್ತು ಸ್ಪಷ್ಟವಾಗಿ, 'ನೀವೀಗ ನಾಗರೀಕತೆಯ ಪಥದಲ್ಲಿ ಸಾಗುತ್ತಿದ್ದೀರಿ; ಹಾಗಾಗಿ ನಿಮ್ಮ ನಾಗರೀಕ ಹಕ್ಕುಗಳನ್ನು ಜೋಪಾನವಾಗಿ ಕಾಪಾಡಿಕೊಳ್ಳಬೇಕು–ಈ ಕಾಪಾಡಿಕೊಳ್ಳುವ ಪವಿತ್ರ ಪ್ರಕ್ರಿಯೆಯಲ್ಲಿ ನಿಮ್ಮ ಮಾತೃಭಾಷೆಗಳು ಕಳೆದುಹೋದರೂ ಪರವಾಗಿಲ್ಲ' ಎನ್ನುತ್ತಿದೆ! ಅಂದರೆ ಶಿಕ್ಷಣದ ಹೊಣೆ ನಿಮ್ಮನ್ನು ನಾಗರೀಕರನ್ನಾಗಿ ಮಾಡುವುದೇ ಆದುದರಿಂದ ಮತ್ತು ಮಾತೃ ಭಾಷೆಗೂ ನಾಗರೀಕತೆಗೂ ಯಾವುದೇ ಸಂಬಂಧವಿಲ್ಲದಿರುವುದರಿಂದ, ಶಿಕ್ಷಣಕ್ಕೂ ಮಾತೃಭಾಷೆಗೂ ಯಾವುದೇ ಸಂಬಂಧವಿರಲಾರದೆಂದು ಅದು ತರ್ಕಿಸಿ ಹೇಳಿದೆ!

ಇದೀಗ ಮುಖ್ಯ ಪ್ರಶ್ನೆ: ಮಾತೃಭಾಷೆಗೇ ಸ್ಥಾನವಿಲ್ಲದ ನಾಗರೀಕತೆ ಅದೆಂತಹ ನಾಗರೀಕತೆ? ಇದು ದೊಡ್ಡ ಪ್ರಶ್ನೆ. ದೊಡ್ಡ ಜಾಗೃತಿ ಮತ್ತು ದೊಡ್ಡ ಹೋರಾಟವನ್ನು ಬೇಡುವಂತಹ ಪ್ರಶ್ನೆ. ಆದರೆ ಈ ಹೋರಾಟವನ್ನು–ನಮ್ಮ ಮಟ್ಟಿಗೆ ಕನ್ನಡದ ಹೋರಾಟವನ್ನು– ನಡೆಸುವವರು ಯಾರು? ಈಗ ಹೋರಾಟವೆಂಬುದೂ ಈ ದರಿದ್ರ ನಾಗರೀಕತೆಯ ಪ್ರಭಾವಕ್ಕೆ ಸಿಕ್ಕಿ, ಅಧಿಕಾರದ ಹೋರಾಟವಾಗಿ ಪರಿವರ್ತಿತವಾಗಿದೆ. ಹಾಗಾಗಿಯೇ ಕನ್ನಡದ ಹೋರಾಟವೆಂದರೆ ಈಗ ಕನ್ನಡಕ್ಕೆ ಸಂಬಂಧಪಟ್ಟ ವಿವಿಧ ಅಕಾಡೆಮಿಗಳ, ಪ್ರಾಧಿಕಾರಗಳ ಮತ್ತು ಪರಿಷತ್ತುಗಳ ಅಧ್ಯಕ್ಷಗಿರಿಗಳಿಗೆ ನಡೆಸುವ ವಶೀಲಿಬಾಜಿ ಮತ್ತು ಚುನಾವಣಾ ಹೋರಾಟಗಳಾಗಿ ಪರಿವರ್ತಿತವಾಗಿಬಿಟ್ಟಿವೆ. ಹಾಗಾಗಿಯೇ, ಅಂದಿನ ಆಲೂರು ವೆಂಕಟರಾಯರ ಹೋರಾಟ ಇಂದಿನ ಟಿ. ನಾರಾಯಣಗೌಡರ ಹೋರಾಟದ ರೂಪ ತಳೆದುಬಿಟ್ಟಿದೆ. ಕನ್ನಡದ ಹೆಸರಿನ ಕುರ್ಚಿಗಳಿಗಾಗಿ ನಡೆದಿರುವ ಹೋರಾಟದ ಉದ್ವೇಗದಲ್ಲಿ ಈ ರೂಪಾಂತರದ ಅಪಾಯಗಳು ಯಾರಿಗೂ ಕಾಣದಾಗಿವೆಯೋ ಅಥವಾ ಯಾರಿಗೂ ಬೇಕಿಲ್ಲದಾಗಿದೆಯೋ ತಿಳಿಯದಾಗಿದೆ. ಹಾಗಾಗಿಯೇ ಇಂದು ಕನ್ನಡದ ಹೋರಾಟ ಕೇವಲ ನಾಮಫಲಕಗಳಿಗಾಗಿ–ಅದರೆಲ್ಲ ಅರ್ಥಗಳಲ್ಲಿ–ನಡೆಯುವ ಹೋರಾಟವಾಗಿ ಪರಿವರ್ತಿತವಾಗಿದೆ.

ಮುಖ್ಯವಾಗಿ ನವೆಂಬರ್ ೧ನ್ನು ನಾವು ಏಕೆ ನೆನೆಯಬೇಕು, ಆಚರಿಸಬೇಕು ಎಂಬುದೇ ಮಸುಕಾಗಿ ರಾಜ್ಯೋತ್ಸವವೆಂಬುದು ಕನ್ನಡಿಗರ ಹುಸಿ ಅಹಂಕಾರದ ಮೆರೆದಾಟಕ್ಕೆ ನೆಪಮಾತ್ರವಾಗಿಬಿಟ್ಟಂತಿದೆ. ಇಲ್ಲ, ಹಾಗೇನೂ ಇಲ್ಲ ಎನ್ನುವಂತಾಗಲು, ಸರ್ಕಾರ ನವೆಂಬರ್ ಒಂದರಂದಾದರೂ, ಕನ್ನಡಿಗರ ಪ್ರಾಣಸಮವಾದ ಕನ್ನಡ ಭಾಷೆಯನ್ನು ಪ್ರಾಥಮಿಕ ಶಿಕ್ಷಣದ ಭಾಷೆಯಾಗಿ ಉಳಿಸಲು ತಾನೆಂತಹ ಪಣ ತೊಟ್ಟಿದ್ದೇನೆಂಬುದನ್ನು ಸ್ಪಷ್ಟವಾಗಿ ಸಾರಿ ಹೇಳಬೇಕಿದೆ.

ಈ ಎಲ್ಲ ಸಂಗತಿಗಳನ್ನು ವಿಷದೀಕರಿಸುವ, ಅವುಗಳ ಮೇಲೆ ಹೊಸ ಬೆಳಕು ಚೆಲ್ಲುವ ಬರಹಗಳನ್ನು ಇಲ್ಲಿ ನೀಡುತ್ತಿದ್ದೇವೆ. ಚಂಪಾ ಕನ್ನಡ ಚಳುವಳಿಯ ಇತಿಹಾಸವನ್ನು ತಮ್ಮದೇ ಹೊಸ ಸಂಯಮ ಮತ್ತು ವ್ಯವಧಾನಗಳಲ್ಲಿ ಚಿತ್ರಿಸಿದ್ದರೆ, ಎಚ್ಚೆಸ್ಸಾರ್, ಜನ–ಭಾಷೆ–ಸರ್ಕಾರ–ಸಂಸ್ಕೃತಿಗಳ ಸಂಬಂಧಗಳ ಒಳ ಹೆಣಿಗೆಯನ್ನು ಬಿಡಿಸಿ ಹೇಳುವ ಪ್ರಯತ್ನ ಮಾಡಿದ್ದಾರೆ. ಟಿ. ಅವಿನಾಶ್ ಮತ್ತು ಎಸ್. ಮಂಜುನಾಥ್ ತಮ್ಮ ಕನ್ನಡ ಶಾಲೆಗಳ ಆಪ್ತ ನೆನಪುಗಳಲ್ಲಿ ನಾವು 'ಅಭಿವೃದ್ಧಿ'ಯ ಹೆಸರಿನಲ್ಲಿ ಏನೆಲ್ಲ ಅಮೂಲ್ಯವಾದುದದನ್ನು ಕಳೆದುಕೊಳ್ಳುತ್ತಿದ್ದೇವೆ ಎಂಬುದನ್ನು ಮತ್ತೆ ನಮಗೆ ನೆನಪು ಮಾಡಿಕೊಟ್ಟಿದ್ದಾರೆ. ನಿಮಗೇನನ್ನಿಸಿತು, ಬರೆಯಿರಿ.ಸಂಪಾದಕ

# ಕನ್ನಡ ಚಳುವಳಿ: ಸಾಧನೆ ಮತ್ತು ಸಾಧ್ಯತೆಗಳು

–ಚಂದ್ರಶೇಖರ ಪಾಟೀಲ

ಒಂದು ಚಳುವಳಿ ಉದ್ಭವಿಸಲು ಅನುಕೂಲ ಪರಿಸ್ಥಿತಿ ಯಾವುದು? ಅಂತ ಯಾರಾದರೂ ಕೇಳಿದರೆ ನಾನು ಸಟಕ್ಕನೇ ಕೊಡುವ ಉತ್ತರ: "ತೀವ್ರ ಪ್ರತಿಕೂಲ ಪರಿಸ್ಥಿತಿ"–ಎಂದೇ. ಹೌದು ಮತ್ತೆ. ಚಳುವಳಿ ಎಂದರೆ ಚಲನವಲನ. ಚೈತನ್ಯ. ಇದು ಜಡತ್ವಕ್ಕೆ, ಸ್ಥಗಿತತೆಗೆ ಸಿಗುವ ಪ್ರತಿ–ಕ್ರಿಯೆ. ಗುಲಾಮಗಿರಿ ಇದ್ದಾಗ ಸ್ವಾತಂತ್ರ್ಯ ಚಳುವಳಿ ಸುರುವಾಯಿತು. ಕನ್ನಡ ಭಾಷಿಕ ಸಮುದಾಯ ಹರಿದು ಹಂಚಿ ಹೋದಾಗ ಅವರನ್ನೆಲ್ಲ ಒಗ್ಗೂಡಿಸಲು ಏಕೀಕರಣ ಚಳುವಳಿ ಬೇಕಾಯಿತು. ಸಮಸ್ಯೆ ಇದ್ದರೇನೇ ಪರಿಹಾರಕ್ಕೆ ಪ್ರಯತ್ನ, ಹೋರಾಟ. ಇದು ಒಂದು ಸಂಘಟಿತ ರೂಪು ಪಡೆದರೆ ಅದು ಆಂದೋಲನ, ಚಳುವಳಿ.

ಏಕೀಕರಣ ಚಳುವಳಿಯಿಂದಾಗಿ ೧೯೫೬ರಲ್ಲಿ ಭಾಷಾವಾರು ಪ್ರಾಂತ್ಯ ರಚನೆ ಆದಾಗ ನಮ್ಮ ರಾಜ್ಯದಲ್ಲಿ ಎಲ್ಲ ತಿಳಿಗೊಂಡು ಮತ್ತೆ ಯಾವುದೇ ಚಳುವಳಿಯ ಸುದ್ದಿಯೇ ಇರಬಾರದಿತ್ತು. ಆದರೆ ಈಗ ನೋಡಿರಿ. ಪ್ರತಿ ಸಲ 'ನವೆಂಬರ್ ಒಂದು' ಬಂದರೆ ಸಾಕು, ಸಂಭ್ರಮ–ಸಂತೋಷಗಳೊಂದಿಗೆ ಪ್ರತಿಭಟನೆ, ಹೋರಾಟಗಳ ಮಾತುಗಳೂ ಪುಂಖಾನುಪುಂಖ. ಅರ್ಥ ಇಷ್ಟೇ. ಒಂದು ಪರಿಹಾರದ ಹೊಟ್ಟೆಯಲ್ಲಿಯೇ ಅನೇಕ ಸಮಸ್ಯೆಗಳು ಹುಟ್ಟುತ್ತವೆ. ಭಾಷೆ ಮತ್ತು ಸಂಸ್ಕೃತಿಯ ಆಧಾರದ ಮೇಲೆ ಇಂಡಿಯಾದಲ್ಲಿ ಅನೇಕ ರಾಜ್ಯಗಳು ಉದಯಿಸಿದವು. ಅದು ರಾಜ್ಯಗಳ ಒಕ್ಕೂಟವಾಯಿತು. ಆದರೆ ಕರ್ನಾಟಕ–ಮಹಾರಾಷ್ಟ್ರಗಳ ನಡುವೆ ಬೆಳಗಾವಿ ವಿಷಯದಲ್ಲಿ ಗಡಿ–ಸಮಸ್ಯೆ ಹುಟ್ಟಿತು. ಅದಕ್ಕಾಗಿ ಮಹಾಜನ ಆಯೋಗ. ಅದರ ವರದಿಗೆ ನಾವೆಲ್ಲ ಬದ್ಧರು ಅಂತ ಇಬ್ಬರೂ ಒಪ್ಪಿದ್ದರು. ಆದರೆ ವರದಿ ಬಂದ ನಂತರ ಮತ್ತೆ ವಾದ–ವಿವಾದ. ಈಗ ಅದು ಸುಪ್ರೀಂ ಕೋರ್ಟ್‌ವರೆಗೂ ಹೋಗಿದೆ. ಈ ವರ್ಷದ ನವೆಂಬರ್ ತಿಂಗಳುದ್ದಕ್ಕೂ ಬಹುಶಃ ಬೆಳಗಾವಿಯದೇ ಗದ್ದಲ. 'ಕನ್ನಡ' ನಾಡಿನಲ್ಲಿ 'ಕನ್ನಡ' ಚಳುವಳಿ ನಿರಂತರ ಅಂತಲೇ ಕಾಣುತ್ತದೆ.

ಏಕೀಕರಣೋತ್ತರ ಅವಧಿಯಲ್ಲಿ 'ಕನ್ನಡ ಚಳುವಳಿ' ಅಂತ ಚಿಗುರಿದ್ದು ೧೯೬೦ರ ದಶಕದ ಕೊನೆಯ ಭಾಗದಲ್ಲಿ. ರಾಜಧಾನಿ ಬೆಂಗಳೂರಿನಲ್ಲಿ ಗಣನೀಯ ಸಂಖ್ಯೆಯಲ್ಲಿದ್ದ ತಮಿಳರ ಹಾವಳಿಯ ವಿರುದ್ಧ ಸಿಡಿದು ನಿಂತವರು ಅನಕೃ, ಮ.ರಾಮಮೂರ್ತಿ ಮುಂತಾದ ಅಕ್ಷರ ಲೋಕದ ಅಧ್ವರ್ಯುಗಳು. (ಈ ತೆರನಾದ ಸಾಹಿತ್ಯಿಕ–ಸಾಂಸ್ಕೃತಿಕ ನಾಯಕತ್ವ ಏಕೀಕರಣ ಚಳುವಳಿಯಿಂದಲೂ ನಮಗೆ ಬಂದ ಬಳುವಳಿ. ಈಗಲೂ ಅದೇ ಪರಿಸ್ಥಿತಿ!) ಆಗಲೇ ಎರಡು ಕವಲುಗಳಾದವು; ಒಂದು, ಲೇಖನ–ಉಪನ್ಯಾಸಗಳಿಗೆ ಸೀಮಿತಗೊಂಡ ಸಾಹಿತಿಗಳು; ಇನ್ನೊಂದು, ಕ್ರಿಯೆಗೆ ಮಹತ್ವ ಕೊಟ್ಟು ಬೀದಿಗಿಳಿದ ಚಳುವಳಿಗಾರರು. ಬರಬರುತ್ತ ಈ ಎರಡೂ ಧಾರೆಗಳು ಒಂದರೊಳಗೊಂದು ಬೆರೆತಂತಿವೆ. ಸದ್ಯದ ಕಾಲಮಾನದಲ್ಲಿ ಒಂದೆಡೆ ಡಾ. ಚಿದಾನಂದಮೂರ್ತಿ, ಇನ್ನೊಂದೆಡೆ ವಾಟಾಳ್ ನಾಗರಾಜ, ಈ ಎರಡೂ ಪ್ರವೃತ್ತಿಗಳ ಸಂಕೇತಗಳೆಂದು ಗ್ರಹಿಸಬಹುದು. ಸಂಶೋಧನಾ ವಲಯದಿಂದ ಕ್ರಿಯೆಗೆ ಬಂದ ಚಿಮೂ ಅವರಿಗೆ ಭೂತದ ವೈಭವೀಕರಣದ ಹಿನ್ನೆಲೆಯಲ್ಲಿ ವರ್ತಮಾನವನ್ನು ಕಟ್ಟುವ ತವಕ; ವಾಟಾಳರಿಗೆ ವರ್ತಮಾನವೇ ಮುಖ್ಯವಾಗಿ ನೇರ ಹೋರಾಟಗಳ ಮೂಲಕವೇ ಗುರಿ ತುಲುಪುವ ಧಾವಂತ.

ಐದು ರಾಜ್ಯಗಳಲ್ಲಿ ಹರಿದು ಹಂಚಿ ಹೋದವರು ಒಂದು ನೆಲೆಗೆ ಬಂದದ್ದರಿಂದ, ಇಡೀ ರಾಜ್ಯದ ಐತಿಹಾಸಿಕ, ಭೌಗೋಳಿಕ ಸನ್ನಿವೇಶಗಳು ವಿಭಿನ್ನವಾಗಿರುವುದರಿಂದ ಸಮಸ್ಯೆಗಳಲ್ಲಿ ಏಕರೂಪತೆ ಇಲ್ಲ. ಹೀಗಾಗಿ ಹೋರಾಟಗಳು ಭಿನ್ನ ಭಿನ್ನ. ಹಾಗೆ ನೋಡಿದರೆ ಕನ್ನಡ ಹೋರಾಟಕ್ಕೆ ಚಳುವಳಿಯ, ಆಂದೋಲನದ ಸ್ವರೂಪ ಬಂದದ್ದು ೧೯೮೦ರ ದಶಕದ ಪ್ರಾರಂಭದಲ್ಲಿ– ಅದೇ 'ಗೋಕಾಕ ಚಳುವಳಿ'. ಬಹುತೇಕ ಕನ್ನಡ ಬದುಕಿನ ಎಲ್ಲ ಸ್ತರದ ಜನ ಸ್ವಯಂಪ್ರೇರಣೆಯಿಂದ ಪಾಲುಗೊಂಡ ಜನಾಂದೋಲನವದು. ಒಂದು ಹಂತದಲ್ಲಿ ಡಾ. ರಾಜಕುಮಾರ ಅವರ ಪ್ರವೇಶದಿಂದಾಗಿ, ಒಂದು ಶೈಕ್ಷಣಿಕ ಸಮಸ್ಯೆಯ ನಿಮಿತ್ತ ಸುರುವಾದ ಚಳುವಳಿಗೆ ವಿಶಾಲ ಸಾಂಸ್ಕೃತಿಕ ಆಯಾಮ ಒದಗಿತು. ಮುಂದೆ ಯಾರೂ ಕಂಡರಿಯದ ರಾಜಕೀಯ ಪಲ್ಲಟಕ್ಕೂ ಮುಖ್ಯ ಕಾರಣವಾಯಿತು. ಸಂಘಟನಾತ್ಮಕವಾಗಿ ಖಚಿತ ಆಕಾರ ಪಡೆದಿದ್ದ ರೈತ ಚಳುವಳಿಯ ಪೂರಕ ಪಾತ್ರದಿಂದಾಗಿ 'ಕನ್ನಡ' ಎಂಬುದು ಬರಿ ಭಾಷೆ–ಸಾಹಿತ್ಯ–ಶಿಕ್ಷಣಕ್ಕೆ ಸೀಮಿತವಾಗದೆ ಕನ್ನಡ ಸಮುದಾಯದ ಸಮಷ್ಟಿ ಬದುಕಿಗೆ ಪರ್ಯಾಯ ಶಬ್ದವಾಯಿತು.



ಇನ್ನೊಂದು ಇಂಥ ಸಂದರ್ಭ ಒದಗಿದ್ದು ೨೦೦೫ರಲ್ಲಿ. ಸಮಾನ ಶಿಕ್ಷಣ ನೀತಿಗಾಗಿ ಆಗ್ರಹಿಸಿ ಮಾತೃಭಾಷಾ ಮಾಧ್ಯಮ ಆಂದೋಲನವನ್ನು ಕನ್ನಡ ಸಾಹಿತ್ಯ ಪರಿಷತ್ತೇ ಮುಂಚೂಣಿಯಲ್ಲಿದ್ದು ಮುನ್ನಡೆಸಿತು. ಇದರಿಂದಾಗಿ ಅನೇಕ ವರ್ಷಗಳಿಂದ ಕೋರ್ಟಿನಲ್ಲಿ ಕೊಳೆಯುತ್ತ ಬಿದ್ದಿದ್ದ, ಶಿಕ್ಷಣ ಮಾಧ್ಯಮಕ್ಕೆ ಸಂಬಂಧಿಸಿದ ಖಟ್ಲೆಯೊಂದು ಮುನ್ನೆಲೆಗೆ ಬಂತು. ಇತರ ರಾಜ್ಯಗಳ ಇಂಥವೇ ಸಮಸ್ಯೆಗಳು ದೇಶದ ಸುಪ್ರೀಂ ಕೋರ್ಟಿನೆದುರು ಬರುವಂತಾಯಿತು. ಇತ್ತೀಚೆಗೆ ಸುಪ್ರೀಂಕೋರ್ಟ್‌ನಿಂದ ಬಂದಿರುವ ತೀರ್ಪು ಎಲ್ಲ ರಾಜ್ಯಭಾಷೆಗಳಿಗೂ ಕುತ್ತು ತರುವಂತಿದ್ದು, ಇಡೀ ಇಂಡಿಯಾ ದೇಶವೇ ಮತ್ತೊಂದು ಸುತ್ತಿನ ಮಹಾಂದೋಲನಕ್ಕಾಗಿ ಅಣಿಯಾಗುತ್ತಿರುವಂತಿದೆ.

ಒಂದು ಚಳುವಳಿಯ ಯಶಸ್ಸು–ಅಪಯಶಸ್ಸು ಅನೇಕ ಅಂಶಗಳಿಂದ ನಿರ್ಧಾರವಾಗುತ್ತದೆ. ನಾನು ಮೊದಲೇ ಸೂಚಿಸಿದಂತೆ, 'ಪ್ರಭುತ್ವ' ಎಂಬುದು–(ಕೇಂದ್ರ ಅಥವಾ ರಾಜ್ಯ ಸರಕಾರ)–ತಳೆಯುವ ನಿಲುವು ಕಠಿಣವಾಗಿದ್ದರೆ, ಸಹಜವಾಗಿಯೇ ಚಳುವಳಿ ತೀವ್ರಗೊಳ್ಳುತ್ತದೆ. ಉದಾ: ಗುಂಡೂರಾವ ಸರಕಾರ ಸ್ಪಷ್ಟವಾಗಿ ಕನ್ನಡ–ವಿರೋಧಿಯಾಗಿದ್ದರಿಂದ–(ಕೊನೆಗೆ ಕನ್ನಡ–ಪರವಾದ ನಿರ್ಣಯ ಕೈಗೊಂಡರೂ)– ಜನಮಾನಸದ ಆಕ್ರೋಶದಿಂದಾಗಿ ಚುನಾವಣೆಯಲ್ಲಿ ತಕ್ಕ ಬೆಲೆ ತೆರಬೇಕಾಯಿತು. ಅದೇ ಕಾಂಗ್ರೆಸ್ ಪಕ್ಷದ ಈಗಿನ ಸಿದ್ದರಾಮಯ್ಯ ಸರಕಾರ, ಎಲ್ಲ ನೆಲೆಗಳಲ್ಲೂ ಕನ್ನಡ ಹಿತಾಸಕ್ತಿಗಳ 'ಪರ' ಇರುವಂತೆ ಕಾಣಿಸುತ್ತಿರುವುದರಿಂದ ಯಾವುದೇ ಕನ್ನಡ ಚಳುವಳಿಗೆ ತೀವ್ರತೆ ಬರುವ ಲಕ್ಷಣವಿಲ್ಲ. ಗೋಕಾಕ್ ಚಳುವಳಿ ಸಂದರ್ಭಕ್ಕೆ ಹೋಲಿಸಿದರೆ ಈಗ ಸಾಹಿತಿಗಳ, ಬುದ್ಧಿಜೀವಿಗಳ ವಲಯದಲ್ಲಿ ನಾಡು–ನುಡಿಗಳ ಬಗ್ಗೆ ಏಕಾಭಿಪ್ರಾಯವಿದೆ. (ಗೋಕಾಕ ಚಳುವಳಿಯನ್ನು ಅನಂತಮೂರ್ತಿ ನೇತೃತ್ವದ ಒಂದು ವಲಯ 'ಸಮೂಹ ಸನ್ನಿ' ಅಂತ ಹೀಯಾಳಿಸಿ, ಅದನ್ನು ಬಗ್ಗು ಬಡಿಯಲು ಹೆಣಗಿದ್ದನ್ನು ನಾವಾರೂ ಮರೆಯುವಂತಿಲ್ಲ.)

ಕನ್ನಡ ಎಂದೊಡನೆ ಹಳದಿ–ಕೆಂಪು ಬಾವುಟ ಹಿಡಿದುಕೊಂಡು ಬೀದಿಗಿಳಿಯುವ ಕನ್ನಡ ಚಳುವಳಿಗಾರರ ಪ್ರಾಮಾಣಿಕತೆ ಕುರಿತಂತೆ ಎರಡು ಮಾತಿಲ್ಲ. ಆದರೂ ಊರಕಟ್ಟೆಯ ಮೇಲೆ ಕುಂತು–ಬಂದವರನ್ನು ಹೋದವರನ್ನು ಆಡಿಕೊಳ್ಳುವ ಕೆಲಸವಿಲ್ಲದ ಹಿರಿಯರನ್ನು ಈಗಲೂ ಕಾಣುತ್ತೇವೆ. ಹೋರಾಟಗಾರರನ್ನು ಪುಂಡ–ಪೋಕರಿಗಳೆಂದು ಕರೆಯುವ ಬುದ್ಧಿಜೀವಿಗಳೂ ಇದ್ದಾರೆ. ಇವರು ಯಾವ ಹೋರಾಟಕ್ಕೂ ಬರುವವರಲ್ಲ. ಆದರೆ ರಾಜ್ಯೋತ್ಸವ ಕಾರ್ಯಕ್ರಮಗಳಲ್ಲಿ ಸನ್ಮಾನ–ಗಿನ್ಮಾನಗಳಿಗೆ ಮಾತ್ರ ಇವರು ಸದಾ ಹಾಜರು. ಹರಿಯುವ ನದಿಗಳಂತೆ ಚಳುವಳಿಗಳು ಇಂಥವರನ್ನು ಕೇರು ಮಾಡುವುದೂ ಇಲ್ಲ.



ಕನ್ನಡ ಚಳುವಳಿಗೊಂದು ಸಮರ್ಥ ನಾಯಕತ್ವ ಬೇಕು ಎಂಬ ಮಾತು ಆಗೀಗ ಕೇಳಿಬರುತ್ತಿದೆ. ಡಾ. ಚಿದಾನಂದಮೂರ್ತಿ ಅವರಿಗೊಂದು ಅವಕಾಶವಿತ್ತು. ಆದರೆ ಬರಬರುತ್ತಾ ಅವರು ಸಂಘ ಪರಿವಾರದ ಪ್ರತಿಗಾಮಿ ಸಿದ್ಧಾಂತದತ್ತ ಒಲಿದಿದ್ದರಿಂದ, ಅವರ ಸೈನ್ಯ ಕರಗಿಹೋಯಿತು. ಬರಿ ಕನ್ನಡ ಅಷ್ಟೇ ಅಲ್ಲ, ಪ್ರಜಾಸತ್ತೆಯ ಎಲ್ಲ ಮೌಲ್ಯಗಳ ಬಗ್ಗೆ ನಿರಂತರವಾಗಿ, ವೈವಿಧ್ಯಮಯ-ವರ್ಣಮಯ ಶೈಲಿಗಳಲ್ಲಿ ಹೋರಾಟನಿರತರಾದ ವಾಟಾಳ ನಾಗರಾಜ್ ಅವರಿಗೆ-(ಅವರದೇ ಹೆಸರಿನ ಒಂದು ಪ್ರಾದೇಶಿಕ-ಪಕ್ಷವಿದ್ದರೂ)- ಪ್ರಜಾಸತ್ತಾತ್ಮಕ ಮನಸ್ಸೇ ಇಲ್ಲವಾದ್ದರಿಂದ ಅವರೂ ವಿಫಲ-ನಾಯಕರೇ ಆದರು. ಉತ್ತರ ಕರ್ನಾಟಕದ ಪಾಟೀಲ ಪುಟ್ಟಪ್ಪನವರದೂ ಇದೇ ಕತೆ. ಆದರೆ, ಹೆಚ್ಚಿನ ಮಹತ್ವಾಕಾಂಕ್ಷೆ ಇಲ್ಲದಿದ್ದರೂ, ತಮ್ಮ ತಮ್ಮ ಕೂವತ್ತಿಗೆ ತಕ್ಕದಾಗೇ ರಾಜ್ಯಮಟ್ಟದ ಸಂಘಟನೆ ಕಟ್ಟಿಕೊಂಡಿರುವ ಟಿ.ಎ.ನಾರಾಯಣಗೌಡ, ಪ್ರವೀಣ ಶೆಟ್ಟಿ, ಕೆ. ಕುಮಾರ, ಭೀಮಾಶಂಕರ ಪಾಟೀಲ, ಶಿವರಾಮೇಗೌಡ ಮುಂತಾದ ಯುವಕರು ಕನ್ನಡದ ಎಲ್ಲ ಸಮಸ್ಯೆಗಳಿಗೂ ಕ್ರಿಯಾಶೀಲವಾಗಿ ಸ್ಪಂದಿಸುತ್ತಿರುವುದು ಸಂತೋಷದ ವಿಷಯ. ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳಾಗಿರುವ ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ವಿದ್ಯಾವರ್ಧಕ ಸಂಘಗಳು ತಮ್ಮ ಇತಿ-ಮಿತಿಗಳಲ್ಲಿ ಕನ್ನಡದ ಕೈಂಕರ್ಯ ಮಾಡುತ್ತಿವೆ.

ಕಳೆದ ಶತಮಾನದ ಕೊನೆಗಾಲದಿಂದ ಸ್ಪಷ್ಟ ರೂಪು ಪಡೆದು, ಎರಡು ದಶಕಗಳಲ್ಲಿ ಪ್ರಖರಗೊಂಡು ಜಗತ್ತಿನ ಎಲ್ಲ ದೇಶೀಯ ಭಾಷೆ-ಸಂಸ್ಕೃತಿ-ನಾಗರಿಕತೆಗಳನ್ನು ಸ್ವಾಹಾ ಮಾಡುತ್ತಿರುವುದು ಬಂಡವಾಳಶಾಹಿ ಅಮೇರಿಕಾ ನಾಯಕತ್ವದ ಜಾಗತೀಕರಣ ಪ್ರಕ್ರಿಯೆ. 'ಕನ್ನಡ ಚಳುವಳಿ'ಯನ್ನು ಒಳಗೊಂಡಂತೆ ನಮ್ಮ ಎಲ್ಲ ಜನಾಂದೋಲನಗಳು ಈ ನಿಟ್ಟಿನಲ್ಲಿ ಮುಂದುವರೆದು ಜಾಗತೀಕರಣ ವಿರುದ್ಧದ ಆಂದೋಲನದ ಭಾಗವಾಗುವುದು ಇಂದಿನ ಅಗತ್ಯವಾಗಿದೆ.

---

# ಕನ್ನಡ ಶಾಲೆಗಳು ಕಳೆದುಹೋಗುತ್ತಿರುವಾಗ...

-ಡಾ. ಎಚ್.ಎಸ್. ರಾಘವೇಂದ್ರ ರಾವ್




**ತಾ**ಯ ಮೊಲೆಹಾಲು ನಂಜಾಗಿ ಕೊಲ್ಲಬಹುದೇನೋ ಎಂದು ಹೆದರಿರುವ ತಾಯಿ-ತಂದೆಗಳ ನಡುವೆ, ಅವರ ಮನಸ್ಸಿನಲ್ಲಿ ವಿಷದ ಬೀಜಗಳನ್ನು ಬಿತ್ತುತ್ತಿರುವ ಶಿಕ್ಷಣ ವ್ಯಾಪಾರಿಗಳ ನಡುವೆ, ಅಂತಹ ವ್ಯಾಪಾರಿಗಳಿಗೆ ಕುಮ್ಮಕ್ಕು ಕೊಡುತ್ತಿರುವ ಸರ್ಕಾರ-ಕಾನೂನುಗಳ ನಡುವೆ ನಿಜದ ನೆಲೆಗಳು ಮರೆಗೆ ಸರಿದು ದಶಕಗಳೇ ಕಳೆದವು. ಉಳಿದೆಲ್ಲ ಸಂಪನ್ಮೂಲಗಳನ್ನು ಕಳೆದುಕೊಂಡು, ಶಿಕ್ಷಣ ಮತ್ತು ಸಂಬಳಗಳಿಗೆ ಅಂಟಿಕೊಂಡಿರುವ ಮಧ್ಯಮವರ್ಗವು, ತನ್ನ ತೆವಲುಗಳನ್ನು ಇಡೀ ದೇಶದ ಎಲ್ಲ ಸಮುದಾಯಗಳಿಗೆ ತಗುಲಿಸುವುದರಲ್ಲಿ ಯಶಸ್ವಿಯಾಗಿದೆ. ಇಂಗ್ಲಿಷ್ ಬೇಕೇ, ಯಾರಿಗೆ ಬೇಕು, ಎಷ್ಟು ಬೇಕು, ಅದನ್ನು ಪಡೆದುಕೊಳ್ಳುವುದು ಹೇಗೆ, ಯಾವಾಗ ಎನ್ನುವ ಅಕಡೆಮಿಕ್ ಪ್ರಶ್ನೆಗಳಾಚೆಗೂ ನಮ್ಮ ಆಲೋಚನೆ ಹರಿಯುವುದು ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಭಾಷಣ ರೂಪದ ಬರವಣಿಗೆಯನ್ನು ಕೊಡುವ ಬದಲು ಕೆಲವು ಮುಖ್ಯವಾದ ಸಂಗತಿಗಳನ್ನು ಪಟ್ಟಿಮಾಡಿದ್ದೇನೆ.

೧. ಬಹುಪಾಲು ಕನ್ನಡ ಮಾಧ್ಯಮ ಶಾಲೆಗಳ ನಿರ್ಗಮನವಾಗಿ ದಶಕಗಳೇ ಕಳೆದಿವೆ. ಇದು ಕನ್ನಡದಲ್ಲಿ ಓದುವ, ಬರೆಯುವ ಮತ್ತು ಆಲೋಚಿಸುವ ಕ್ರಿಯೆಗಳ ಮೇಲೆ ತೀವ್ರವಾದ ಮಿತಿಗಳನ್ನು ತಂದಿದೆ. ಕನ್ನಡವನ್ನು ಮಾತ್ರ ಬಲ್ಲವರು, ಶಿಕ್ಷಣವನ್ನೇ ಪಡೆಯದವರು ಯೋಚನೆ ಮಾಡುವುದಿಲ್ಲ ಎಂದು ಇದರ ಅರ್ಥವಲ್ಲ. ಆದರೆ, ಶಿಕ್ಷಣದ ಮೂಲಕ ಕಲಿತ ವಿಷಯ, ಭಾಷೆ ಮತ್ತು ಪರಿಭಾಷೆಗಳು ಇಲ್ಲದವರ ಆಲೋಚನೆಯು ಸಹಜವಾಗಿಯೇ ಆ ಸಂಗತಿಗಳನ್ನು ಹೊರಗೆ ಇಡುತ್ತದೆ. ಉದಾಹರಣೆಗೆ ಯಾವುದೇ ಭಾಷೆಯಲ್ಲಿ ರಸಾಯನಶಾಸ್ತ್ರವನ್ನು ಕಲಿಯದವನು ಅದರ ಬಗ್ಗೆ ಯೋಚನೆ ಮಾಡಲಾರ. ಇಂಥ ವಿಷಯಗಳನ್ನು ಕನ್ನಡದಲ್ಲಿ ಕಲಿತರೆ, ಅನಂತರವೂ ಆ ವಿಷಯಗಳ ಜೊತೆಗೆ ಸತತವಾದ ಸಂಪರ್ಕವನ್ನು ಕನ್ನಡದಲ್ಲಿಯೇ ಉಳಿಸಿಕೊಂಡರೆ, ಆಗ ಅದರಲ್ಲಿಯೇ ಯೋಚನೆ ಮಾಡುವುದು ಸಾಧ್ಯವಾಗುತ್ತದೆ. ತಿಳಿವಳಿಕೆಯ ಸೃಷ್ಟಿ, ಸಂವಹನ ಮತ್ತು ಹಂಚಿಕೆಗಳು ಕನ್ನಡದಲ್ಲಿಯೇ ನಡೆಯಬೇಕು. ಸಮುದಾಯಗಳು ಮಾತನಾಡುವ ಭಾಷೆಗೂ ಶಿಕ್ಷಣದಲ್ಲಿ ಬಳಸುವ ಭಾಷೆಗೂ ಇರುವ ಅಂತರವು ಉಂಟುಮಾಡುವ ಕಂದಕವು ಬಹಳ ಅಪಾಯಕರ.

೨. ಭಾಷೆಯು ಒಂದು ಸಂಸ್ಕೃತಿಯ ಅನುಭವಗಳನ್ನು, ನೆನಪುಗಳನ್ನು ಶೇಖರಿಸಿಡುವ ಮತ್ತು ಮುಂದಿನ ಪೀಳಿಗೆಗಳಿಗೆ ಸಾಗಿಸುವ ಉಪಕರಣಗಳಲ್ಲಿ ಮುಖ್ಯವಾದುದು. ಅದನ್ನು ಕಳೆದುಕೊಳ್ಳುವುದು ಎಂದರೆ ಅಂತಹ ತಿಳಿವಳಿಕೆಗೆ ವಿದಾಯ ಹೇಳಿದಂತೆ. ಇದು ಕೇವಲ ಸಾಹಿತ್ಯದ ವಿಷಯವಲ್ಲ. ಒಟ್ಟು ಸಂಸ್ಕೃತಿಗೆ, ಜೀವನಶೈಲಿಗೆ ಸಂಬಂಧಿಸಿದ ಮಾತು. ಭಾಷೆ ಬರುವ ಪ್ರತಿಯೊಬ್ಬರಲ್ಲಿಯೂ ಈ ತಿಳಿವಳಿಕೆ ತಾನೇತಾನಾಗಿ ಬರುವುದಿಲ್ಲ. ಆದರೆ ಭಾಷೆಯೇ ಬರದವರಿಗಂತೂ ಅಂತಹ ತಿಳಿವಳಿಕೆ ಸಾಧ್ಯವೇ ಇಲ್ಲ. ಒಂದು ಕಡೆ ಕನ್ನಡ ಮಾಧ್ಯಮದ ನಿರ್ಗಮನ ಮತ್ತು ಇನ್ನೊಂದು ಕಡೆ ಜೀವನಕ್ರಮದಲ್ಲಿ ಆಗುತ್ತಿರುವ ಬದಲಾವಣೆಗಳ ಫಲವಾಗಿ ಸಂಸ್ಕೃತಿನಾಶವು ಬಹಳ ವೇಗವಾಗಿ ನಡೆಯುತ್ತಿದೆ. ಆ ಸಂಸ್ಕೃತಿಯಲ್ಲಿ ಎಲ್ಲವೂ ಬಹಳ ಉಪಯುಕ್ತ ಮತ್ತು ಒಳ್ಳೆಯದು ಎಂದು ನಾನು ತಿಳಿದಿಲ್ಲ. ಆದರೆ ನೆನಪುಗಳೇ ನಾಶವಾಗಬಾರದು. ಜೀವನದಲ್ಲಿ ಅಳವಡಿಸಿಕೊಳ್ಳುವುದಕ್ಕೂ ನೆನಪುಗಳಲ್ಲಿ ಉಳಿಸಿಕೊಳ್ಳುವುದಕ್ಕೂ ವ್ಯತ್ಯಾಸವಿದೆ. ಕನ್ನಡ ಮಾಧ್ಯಮ ಶಾಲೆಗಳಲ್ಲಿ ಓದಿದ ನಮಗೂ ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಓದಿದ ನಮ್ಮ ಮಕ್ಕಳಿಗೂ ಇರುವ ಅಂತರ ನಮಗೆ ಕ್ಷಣಕ್ಷಣಕ್ಕೂ ಗೊತ್ತಾಗುತ್ತಿದೆ. ನಾವು ಒಳ್ಳೆಯವರು ಅವರು ಕೆಟ್ಟವರು ಎಂದು ಅಲ್ಲ. ಅವರ ಭಾವಕೋಶ ಮತ್ತು ಬುದ್ಧಿಕೋಶಗಳು ಅನೇಕ ಸಂಗತಿಗಳಿಗೆ ಎರವಾಗಿದೆ ಎಂದು. ಅದರ ಜಾಗದಲ್ಲಿ ಬೇರೆ ಸಂಗತಿಗಳು ಬಂದಿರಬಹುದು. ಆದರೆ ಅವು ನಮ್ಮ ಮಣ್ಣಿನಲ್ಲಿ ಮೂಡಿದ ಸಂಗತಿಗಳಲ್ಲ. ಬಸವಣ್ಣ, ಬೇಂದ್ರೆ ಮತ್ತು ದೇವನೂರು ಮಹದೇವರ ಜಾಗದಲ್ಲಿ ನೆರೂಡಾ, ಟಾಲ್ ಸ್ಟಾಯ್ ಬಂದರೂ ಅದು ನಷ್ಟವೆಂದೇ ನಾನು ತಿಳಿಯುತ್ತೇನೆ. ಅದಕ್ಕಿಂತ ಮುಖ್ಯವಾಗಿ ನಮ್ಮ ಶಿಕ್ಷಣದ ಆಶಯಗಳಲ್ಲಿಯೇ ಆಗಿರುವ ದುಷ್ಟ ಬದಲಾವಣೆಗಳಿಂದ ಅತ್ತ ಬಸವನೂ ಇಲ್ಲ ಇತ್ತ ಷೇಕ್ಸ್‌ಪಿಯರ್ ಕೂಡ ಇಲ್ಲ ಎನ್ನುವ ದುರಂತ ನಮಗೆ ಎದುರಾಗಿದೆ.



೩. ತಮ್ಮ ಮಕ್ಕಳಿಗೆ ಏನು ಬೇಕು ಎನ್ನುವುದು ತಾಯಿ-ತಂದೆಗಳಿಗೆ ಗೊತ್ತು, ಅದನ್ನು ಕೇಳುವುದು, ಪಡೆಯುವುದು ಅವರ ಮೂಲಭೂತ ಹಕ್ಕು ಎನ್ನುವುದು ಬಹಳ ದೊಡ್ಡ ಭ್ರಮೆ. ಕಳೆದ ಮೂರು-ನಾಲ್ಕು ಪೀಳಿಗೆಗಳವರು ತಮ್ಮ ಪೋಷಕರ ಆಣತಿಗಳನ್ನು ಶಿರಸಾವಹಿಸಿ ಪರಿಪಾಲಿಸಿ ಒಂದಿಷ್ಟೂ ಬದಲಾಗದೆ ಉಳಿದಿದ್ದರೆ, ಆಗ ನಾವು ಇರುತ್ತಿದ್ದ ಸಮಾಜವನ್ನು ಕಲ್ಪಿಸಿಕೊಳ್ಳಲೂ ಭಯವಾಗುತ್ತದೆ. ಸಮಾಜ ಮತ್ತು ಸಮುದಾಯಗಳು ಬದಲಾಗುವ ಬಗೆಗಳು ಹಾಗೆ ಇರುವುದಿಲ್ಲ. ಉತ್ಪಾದನಾ ವಿಧಾನಗಳು ಮತ್ತು ತಂತ್ರಜ್ಞಾನಗಳ ಜೊತೆಯಲ್ಲಿಯೇ ಕ್ರಾಂತಿಯನ್ನು ಕಾಣಬಲ್ಲ ನಾಯಕರ ಮಾರ್ಗದರ್ಶನವೂ ಅಷ್ಟೇ ಮುಖ್ಯ. ಬಸವಣ್ಣ, ಗಾಂಧಿ, ಅಂಬೇಡ್ಕರ್, ರವೀಂದ್ರ, ಕುವೆಂಪು ಮುಂತಾದವರು ನಮ್ಮ ನಡುವೆ ಬರದೆ ಇದ್ದರೆ ನಾವು ಹೀಗೆ ಇರುತ್ತಿರಲಿಲ್ಲ. ಇವರ ಆಲೋಚನೆಯ ಬೆಳಕನ್ನು ಮೂಟೆ ಕಟ್ಟಿ ಮುಳುಗಿಸುವ ರಾಜ್ಯಾಂಗ ಮತ್ತು ಕಾನೂನುಗಳು ಸಹಾಯ ಮಾಡುವುದಿಲ್ಲ, ಮೋಸ ಮಾಡುತ್ತವೆ. ಯಾವ ಭಾಷೆಯಲ್ಲಿ ಕಲಿಯಬೇಕು ಮತ್ತು ಯಾವ ಭಾಷೆಯನ್ನು ಕಲಿಯಬೇಕು ಎನ್ನುವುದರ ಬಗ್ಗೆಯೂ ಈ ಮಾತು ನಿಜ. ಇಂಥ ಕಾನೂನುಗಳನ್ನು ಬದಲಿಸುವ ಇಚ್ಛಾಶಕ್ತಿಯು ಸಮಾಜಕ್ಕೆ ಸರ್ಕಾರಕ್ಕೆ ಇರಬೇಕು. ಪ್ರಜಾಪ್ರಭುತ್ವವೇ ಹೌದಾದರೂ, ನಮ್ಮಲ್ಲಿ ಇರುವುದು/ಇದ್ದಿದ್ದು ಜನಸಾಮಾನ್ಯರ ಸರ್ಕಾರವಲ್ಲ. ನಮ್ಮನ್ನು ಆಳುತ್ತಿರುವವರು ರೂಪಿಸಿರುವ ನ್ಯಾಯಾಲಯಗಳೂ ಹಾಗೆಯೇ. ಅವರು ಕಾನೂನುಗಳನ್ನು ತಮಗೆ ಬೇಕಾದಂತೆ ತಿರುಚುತ್ತಾರೆ. ಅವರಿಗೆ ಜನರ ಒಳಿತು ಬೇಡ. ದುರದೃಷ್ಟವಿಂದ ನಮ್ಮ ಬುದ್ಧಿಜೀವಿಗಳು ಮತ್ತು ಕಲಾವಿದರಲ್ಲಿ ಅನೇಕರು ಇಂತಹುದೇ ಹುನ್ನಾರದಲ್ಲಿ ಭಾಗವಹಿಸಿದ್ದಾರೆ.

೪. ಕನ್ನಡ ಮಾಧ್ಯಮದಲ್ಲಿ ಕಲಿಸುವ ಶಾಲೆಗಳು ಮತ್ತು ಸರ್ಕಾರೀ ಶಾಲೆಗಳಲ್ಲಿ ಶಿಕ್ಷಣ ಸರಿಯಾಗಿರುವುದಿಲ್ಲ ಎನ್ನುವುದು ಇನ್ನೊಂದು ತಪ್ಪು

ತಿಳಿವಳಿಕೆ. ಬಗೆಬಗೆಯ ಕಾನ್ವೆಂಟುಗಳು(ಕ್ರಿಶ್ಚಿಯನ್ ಅಲ್ಲ) ನೀಡುತ್ತಿರುವ ಗಿಳಿಪಾಠದ ಸರಕುಗಳು, ಸಂಪಾದನೆ ಮಾಡುವ ಹಾದಿಗಳೇ ವಿನಾ ನಿಜವಾದ ಅರ್ಥದ ಶಿಕ್ಷಣವಲ್ಲ. ಜೀವನ, ಸಮಾಜ ಮತ್ತು ಮನಸ್ಸುಗಳ ಬಗ್ಗೆ ಮಾಹಿತಿಯಾಚೆಗಿನ ಯಾವುದೇ ತಿಳಿವಳಿಕೆ ಕೊಡದ, ಜನರಲ್ ನಾಲೆಜ್ ಕೂಡ ಒಂದು ಸಬ್ಜೆಕ್ಟ್ ಆಗಿರುವ ಆ ಶಾಲೆಗಳಿಗಿಂತ ನಾನು ಕಲಿತ ಕನ್ನಡ ಮಾಧ್ಯಮದ ಶಾಲೆಗಳು ನೂರು ಪಾಲು ಉತ್ತಮವಾಗಿದ್ದವು. ಸಮಸ್ಯೆಯಿರುವುದು ಇಂಗ್ಲಿಷ್ ಮತ್ತು ಕನ್ನಡ ಮಾಧ್ಯಮಗಳಲ್ಲಿ ಒಂದರ ಆಯ್ಕೆಗೆ ಕೊಟ್ಟಿರುವ ಆಯ್ಕೆಯ ಅವಕಾಶದಲ್ಲಿ. ಕರ್ನಾಟಕದಲ್ಲಿರುವ ಎಲ್ಲ ಮಕ್ಕಳೂ ಕನ್ನಡಶಾಲೆಗಳಲ್ಲಿಯೇ ಕಲಿಯುವಂತಾದರೆ, ಸರ್ಕಾರವು ಶಾಲಾಶಿಕ್ಷಣವನ್ನು ಉಚಿತವಾಗಿಸಿದರೆ, ಶಿಕ್ಷಕರ ಸೃಷ್ಟಿ ಮತ್ತು ತರಬೇತಿಗಳ ಕಡೆಗೆ ಗಮನ ಹರಿಸಿದರೆ, ಕನ್ನಡ ಮಾಧ್ಯಮ ಶಾಲೆಗಳು, ಇಂಗ್ಲಿಷ್ ಮೀಡಿಯಂ ಸ್ಕೂಲುಗಳಿಗಿಂತ ಹೆಚ್ಚು ಉಪಯುಕ್ತವಾಗುತ್ತವೆ. ಕೆಟ್ಟ ಶಾಲೆಗಳಿಗೆ ಕಾರಣ ಮಾಧ್ಯಮವಲ್ಲ, ಮೂರ್ಖತನ ಮತ್ತು ದುಷ್ಟತನ.

೫. ಸರ್ಕಾರದ್ದು ಸಾಮಾನ್ಯ, ಖಾಸಗಿ ಎಂದರೆ ಶ್ರೇಷ್ಠ ಎನ್ನುವುದು ಮತ್ತೊಂದು ಭ್ರಮೆ. ಶಿಕ್ಷಣ ಮತ್ತು ವೈದ್ಯಕೀಯಗಳನ್ನು ಖಾಸಗೀಕರಣಗೊಳಿಸುವ ಅಮೆರಿಕನ್ ಮಾದರಿ ನಿಜಕ್ಕೂ ಸಮಾಜವನ್ನು ಒಡೆಯುತ್ತದೆ, ಸಮುದಾಯಗಳ ನಡುವೆ ಗೋಡೆಗಳನ್ನು ಕಟ್ಟುತ್ತದೆ. ಇಂಗ್ಲಿಷ್ ಮಾಧ್ಯಮ ಕೂಡ ಈ ಗೋಡೆಗೆ ಬಳಸುವ ಇಟ್ಟಿಗೆಯೇ. ವ್ಯಾಪಾರ ಮತ್ತು ಕೈಗಾರಿಕೆಗಳನ್ನು ಆದ್ಯತೆಯಾಗಿಟ್ಟುಕೊಂಡು, ಶಿಕ್ಷಣಕ್ಕಾಗಿ ಖರ್ಚುಮಾಡುವ ಶಕ್ತಿ ತನಗಿಲ್ಲವೆಂದು ಹೇಳುವ ಸರ್ಕಾರ ಬೇಜವಾಬ್ದಾರಿಯದು. ಔಪಚಾರಿಕ ಶಿಕ್ಷಣವು ನೂರಕ್ಕೆ ನೂರರಷ್ಟು ಉಚಿತವಾಗಬೇಕು ಮತ್ತು ಸರ್ಕಾರದ ನಿಯಂತ್ರಣದಲ್ಲಿ ಇರಬೇಕು ಎಂದು ಹೇಳುವವರಲ್ಲಿ ನಾನು ಒಬ್ಬ. ಈಗ ಇರುವ ಸರ್ಕಾರಗಳು ಮತ್ತು ಪ್ರಜಾಪ್ರಭುತ್ವದ ಬಗ್ಗೆ ನನಗಿರುವ ಅಸಮ್ಮತಿಯನ್ನೂ ನಾನು ಇಲ್ಲಿಯೇ ದಾಖಲೆ ಮಾಡುತ್ತೇನೆ. ಅಷ್ಟೇ ಅಲ್ಲ, ಶಾಲೆ–ಕಾಲೇಜುಗಳಾಚೆಗೂ ಶಿಕ್ಷಣವು ಸತತವಾಗಿ ನಡೆಯುತ್ತಿರಬೇಕು ಮತ್ತು ಅದು ಕನ್ನಡದಲ್ಲಿಯೇ ಇರಬೇಕು ಎನ್ನುವುದು ನನ್ನ ನಂಬಿಕೆ.

೬. ಇಂಗ್ಲಿಷ್ ಅನ್ನು ಎಷ್ಟು ಬೇಗ, ಹೇಗೆ ಕಲಿಯಬೇಕು ಎಂಬ ಸಮಸ್ಯೆ ನಮ್ಮನ್ನು ಬಹಳವಾಗಿ ಕಾಡಿದೆ. ಹೌದು, ಚಿಕ್ಕ ಮಕ್ಕಳು ಭಾಷೆಯನ್ನು ಕಲಿಯುಷ್ಟು ಚೆನ್ನಾಗಿ ವಯಸ್ಸಾದವರು ಕಲಿಯಲಾರರು. ಮಕ್ಕಳು ಸರಿಯಾದ ವಾತಾವರಣದಲ್ಲಿ ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಲೀಲಾಜಾಲವಾಗಿ ಕಲಿಯುತ್ತಾರೆ. ಆದರೆ, ಸರಿಯಾದ ವಾತಾವರಣವೆಂದರೆ ಸಮುದಾಯದಲ್ಲಿಯೇ ಎರಡೂ ಭಾಷೆಗಳು ಬಳಕೆಯಲ್ಲಿರುವುದು. ಅದು ನಮ್ಮ ಮನೆಗಳಲ್ಲಿ–ಸ್ಕೂಲುಗಳಲ್ಲಿ ಮೂಡಿಬಂದಿರುವ ಮಮ್ಮಿ–ಡ್ಯಾಡಿ, ಜಾಕ್ ಅಂಡ್ ಜಿಲ್ಲುಗಳ ಕೃತಕ ಪರಿಸರವಲ್ಲ. ಆದರೆ, ಇಂದಿನ ಸನ್ನಿವೇಶದಲ್ಲಿ ವಿದ್ಯಾವಂತರೆಲ್ಲರೂ ಒಂದು ಲೈಬ್ರರಿ ಭಾಷೆಯಾಗಿ ಇಂಗ್ಲಿಷನ್ನು ಕಲಿಯಲೇ ಬೇಕು ಎನ್ನುವುದೂ ನಿಜವೇ. ಇಲ್ಲವಾದರೆ, ನಾವು ತಿಳಿವಳಿಕೆಯ ಹಲವು ಬಾಗಿಲುಗಳನ್ನು ಮುಚ್ಚುತ್ತಿರುತ್ತೇವೆ. ಆದರೆ ಕನ್ನಡ ಮಾಧ್ಯಮಶಾಲೆಗಳ ನಿರ್ಗಮನದಿಂದ ತಾನೇ ತಾನಾಗಿ ಅಂತಹ ಇಂಗ್ಲಿಷ್ ಬಂದುಬಿಡುವುದಿಲ್ಲ. ಕನ್ನಡವನ್ನು ಕಿತ್ತುಕೊಂಡು ಅದು ಬರುವುದೂ ಬೇಡ.

೭. ಇಲ್ಲಿಯೇ ಇನ್ನೊಂದು ಮಾತು ಹೇಳಬೇಕು. ಕಲಿಸುವುದು ಯಾರು ಬೇಕಾದರೂ ಮಾಡಬಹುದಾದ ಕೆಲಸವಲ್ಲ. ಕನ್ನಡದಲ್ಲಾದರೂ ಸರಿ, ಇಂಗ್ಲಿಷ್‌ನಲ್ಲಾದರೂ ಸರಿ ಪದವಿ ಪಡೆದವರೆಲ್ಲರೂ ಶಿಕ್ಷಕರಾಗಲಾರರು. ಪಠ್ಯವಿಷಯವನ್ನು ತಿಳಿದುಕೊಂಡವರೆಲ್ಲರೂ ಶಿಕ್ಷಕರಾಗಲಾರರು. ಬಿ.ಈಡಿ., ಎಂ.ಈಡಿ. ಪದವಿಗಳನ್ನು ಪಡೆದರೂ ಸಾಲದು. ಜನಪರವಾಗಿ ಯೋಚನೆ ಮಾಡಬಲ್ಲವರೆಲ್ಲರೂ ಶಿಕ್ಷಕರಾಗಲಾರರು. ಕಲಿಸುವುದು, ಪ್ರೀತಿಯಿಂದ ಕಲಿಸುವುದು ಒಂದು ವಿಶಿಷ್ಟವಾದ ಪ್ರತಿಭೆ. ನಮ್ಮ ಸಮಾಜವು ಈ ಸಂಗತಿಯನ್ನು ಮರೆತಿದೆ. ಲಕ್ಷಗಟ್ಟಲೆ ಶಿಕ್ಷಕರಲ್ಲದ ಶಿಕ್ಷಕರನ್ನು ನೇಮಿಸಿಕೊಂಡಿದೆ. ಈ ಬಿಕ್ಕಟ್ಟನ್ನು ಬಿಡಿಸಿಕೊಳ್ಳದೆಹೋದರೆ, ನಮ್ಮ ದುರಂತ ಇನ್ನಷ್ಟು ಗಾಢವಾಗುತ್ತದೆ. ಸ್ವತಃ ತಾವೇ ಇಂಗ್ಲಿಷ್ ಕಲಿಯದ ಶಿಕ್ಷಕ–ಶಿಕ್ಷಕಿಯರು ಆ ಭಾಷೆಯಲ್ಲಿಯೇ ಕಲಿಸಹೊರಟಾಗ ಗಿಳಿಪಾಠ ಮಾಡುತ್ತಾರೆ ಮತ್ತು ನೋಟ್ಸುಗಳನ್ನು ಬರೆಸುತ್ತಾರೆ. ಅಷ್ಟೆ. ಕಾಲೇಜುಗಳಲ್ಲಿ ಇಂಗ್ಲಿಷ್ ಸಾಹಿತ್ಯವನ್ನು ಬೋಧಿಸುವ ಉಪನ್ಯಾಸಕರೇ ಈ ಸಮಸ್ಯೆಯನ್ನು ಎದುರಿಸುತ್ತಾರೆ. ಪ್ರಾಥಮಿಕ ಶಾಲೆಗಳ ಮಿಸ್ಸುಗಳು ಮತ್ತು ಸರ್ರುಗಳ ಸ್ಥಿತಿ–ಗತಿಗಳು ಹೇಗಿರಬೇಡ.

೮. ನಾನು ಹಳ್ಳಿಗಳಲ್ಲಿ, ಕನ್ನಡ ಮಾಧ್ಯಮದಲ್ಲಿ ಓದಿದವನು. ವಿಜ್ಞಾನವನ್ನು ಕೂಡ ಹತ್ತನೆಯ ತರಗತಿಯವರೆಗೆ ಕನ್ನಡದಲ್ಲಿಯೇ ಕಲಿತು ಅದರ ಬಗ್ಗೆ ತೀವ್ರವಾದ ಆಸಕ್ತಿಯನ್ನು ಬೆಳೆಸಿಕೊಂಡವನು, ಉಳಿಸಿಕೊಂಡವನು. ಇಂಗ್ಲಿಷನ್ನು ಓದಿ ಅರ್ಥ ಮಾಡಿಕೊಳ್ಳುವುದಕ್ಕೆ ಮತ್ತು ಅದರಲ್ಲಿ ಬರೆಯುವುದಕ್ಕೆ ಕನ್ನಡ ಮಾಧ್ಯಮದಿಂದ ನನಗೆ ಯಾವ ತೊಂದರೆಯೂ ಆಗಿಲ್ಲ. ಇಂಗ್ಲಿಷಿನವರ ಹಾಗೆ ಇಂಗ್ಲಿಷ್ ಮಾತಾಡುವುದಕ್ಕೆ ನನಗೆ ಬರುವುದಿಲ್ಲ, ಬರಬೇಕಾಗಿಯೂ ಇಲ್ಲ. ಕೊನೆಗೂ ಮಾತನಾಡುವುದು ಸೈಕಾಲಜಿಯ, ಆತ್ಮವಿಶ್ವಾಸದ ಪ್ರಶ್ನೆಯೇ ಹೊರತು ಸಾಮರ್ಥ್ಯದ ಪ್ರಶ್ನೆಯಲ್ಲ. ತಪ್ಪಾಗುತ್ತದೆ ಎಂಬ ಆತಂಕ ಮತ್ತು ಕೀಳರಿಮೆ ಹೋದರೆ ಎಲ್ಲವೂ ಸರಿಯಾಗುತ್ತದೆ. ನಾವೆಲ್ಲರೂ ಬೇರೆ ಯಾವುದೋ ದೇಶಕ್ಕೆ ಹೋಗಿ ಬದುಕುವ, ಇಂಗ್ಲಿಷನ್ನೇ ಬಳಸುವ ಅನಿವಾರ್ಯತೆ ಬರುವ ತನಕ ಭಯ–ಆತಂಕಗಳಿಗೆ ಕಾರಣವಿಲ್ಲ. ನಗರ, ಭರಮಸಾಗರ, ಸಿರಿಗೆರೆ, ಮಲ್ಲಾಡಿಹಳ್ಳಿ ಮುಂತಾದ ಹಳ್ಳಿಗಳ ಕನ್ನಡ ಶಾಲೆಗಳಲ್ಲಿ ಇದ್ದ ವಾತಾವರಣ ಮತ್ತು ಕನ್ನಡತನಗಳು ಎಲ್ಲ ಕಡೆಯೂ ಬರಬೇಕು. ಆಗ ಇಂಗ್ಲಿಷನ್ನು ಕಲಿಯುವ, ಕನ್ನಡವನ್ನು ಕಾಪಾಡಿಕೊಳ್ಳುವ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ನಿಜವಾದ ಶಿಕ್ಷಣವನ್ನು ಪಡೆಯುವ ಕೆಲಸ ಸಾಧ್ಯವಾಗುತ್ತದೆ. ಈಗಲೂ ಅಷ್ಟೇ ಪ್ರೀತಿಯಿಂದ ಕೆಲಸ ಮಾಡುತ್ತಿರುವ ಹಲವು ಮೇಷ್ಟ್ರುಗಳು ಮೇಡಮ್ಮುಗಳು ನನಗೆ ಗೊತ್ತು. ಅಂತಹವರ ಸಂತತಿ ಸಾವಿರವಾಗಲಿ. ಅಂತಹವರಿಗೆ ಅಗತ್ಯವಾದ ಪರಿಸರವನ್ನು ರೂಪಿಸಿಕೊಡುವುದು ಸಮುದಾಯಗಳ ಹಾಗೂ ಸರ್ಕಾರದ ಕೆಲಸ.

---

# ನಾನು ಕಲಿತ ಆ ಕನ್ನಡ ಶಾಲೆ...

–ಟಿ. ಅವಿನಾಶ್

**ನನಗೆ ಥಟ್ಟನೆ ನೆನಪಿಗೆ ಬರುವುದು ಶೇಷಗಿರಿ ಮೇಷ್ಟ್ರೆಂಬ ಸರಳ, ಸೌಮ್ಯ ಸ್ವಭಾವದ ಒಬ್ಬ ಸೌಜನ್ಯದ ಅಧ್ಯಾಪಕರು. ಎಲ್ಲ ವಿದ್ಯಾರ್ಥಿಗಳಿಗೂ ಜಾತಿಭೇದ ಮಾಡದೇ ಮನಮುಟ್ಟುವಂತೆ ಪಾಠ ಮಾಡುತಿದ್ದ ಇವರು ನೈತಿಕ ಮೌಲ್ಯವನ್ನು ಸಹ ಒತ್ತಿ ಒತ್ತಿ ಹೇಳುತ್ತಿದ್ದರು. ಮಾರಲ್ ಎಂಬುದು ಪ್ರತ್ಯೇಕ ವಿಷಯವೇನಿರಲಿಲ್ಲ. ಮೇಷ್ಟ್ರ ವ್ಯಕ್ತಿತ್ವವೇ ನಮಗೆಲ್ಲರಿಗೂ ಮೇಲ್ಪಂಕ್ತಿ. ಕಚ್ಚೆ ಪಂಚೆಯನುಟ್ಟು ಸೈಕಲ್ ಮೇಲೆ ದೂರದ ಊರಿಂದ ಪ್ರತಿನಿತ್ಯ ಬರುತಿದ್ದ ಇವರು ಭಾನುವಾರದಂದೂ ಸಹ ಎಲ್ಲ ವಿದ್ಯಾರ್ಥಿಗಳ ಮನೆಗೆ ಭೇಟಿ ಕೊಟ್ಟು ಮೇಲುಸ್ತುವಾರಿ ಮಾಡಿದ ಪ್ರಸಂಗವೂ ಇದೆ!! ಇವರು ಮನಮುಟ್ಟುವಂತೆ ಪಾಠ ಕಲಿಸುತಿದ್ದ ರೀತಿಯೂ ನನಗೆ ಈಗಲೂ ಮನಸ್ಸಿನಲ್ಲಿದೆ.**

**ನಾ**ನೀಗ ಇಂಗ್ಲಿಷ್ ಭಾಷೆ ಹಾಗೂ ಸಾಹಿತ್ಯವನ್ನು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಬೋಧಿಸುವ ಅಧ್ಯಾಪಕ. ಓದಿದ್ದು ಇಂಗ್ಲಿಷ್ ವಿಷಯದಲ್ಲಿ ಎಂಎ. ಆದರೆ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವೆಲ್ಲ ನಡೆದದ್ದು ಸೊರಬ ತಾಲ್ಲೂಕಿನ ಬನದಕೊಪ್ಪ ಮತ್ತು ನಿಸರಾಣಿ ಎಂಬ ಪುಟ್ಟ ಗಾಮಗಳ ಕನ್ನಡ ಶಾಲೆಯಲ್ಲಿ. ಐದನೆಯ ತರಗತಿಯವರೆಗೂ ನಮಗೆ ಇಂಗ್ಲಿಷ್ ಪಠ್ಯವೇನಿರಲಿಲ್ಲ. ನನಗೆ ಯಾವತ್ತೂ ಇಂಗ್ಲಿಷ್ ವಿಷಯ ತೀರಾ ಕಬ್ಬಿಣದ ಕಡಲೆ ಎಂದು ಎನ್ನಿಸಿಯೂ ಇಲ್ಲ. ಈಗೀಗ ಮಕ್ಕಳನ್ನು ಎಲ್.ಕೆ.ಜಿಯಿಂದ ಇಂಗ್ಲಿಷ್ ಮಾಧ್ಯಮದಲ್ಲಿ ಓದಿಸಿದರೆ ಮಾತ್ರ ಇಂಗ್ಲಿಷನ್ನು ಪಳಗಿಸಬಹುದೆಂಬ ಒಂದು ದೊಡ್ಡ ಆಕರ್ಷಣೆ ಪೋಷಕರಲ್ಲಿ ಬಂದಿದೆ. ಆದರೆ ಒಂದನೆಯ ತರಗತಿಯಿಂದ ಕನ್ನಡ ಮಾಧ್ಯಮದಲ್ಲಿ ನಾನು ಓದಿದ್ದು ನನ್ನ ಮುಂದಿನ ಬದುಕಿಗೆ ಒಂದು ಕೊರತೆ ಎಂದು ನನಗ್ಯಾವತ್ತು ಅನ್ನಿಸಿಲ್ಲ. ಬದಲಾಗಿ, ಕನ್ನಡ ಮಾಧ್ಯಮದಲ್ಲಿ ಓದಿದ್ದು ನನಗೆ ಶಿಕ್ಷಣವನ್ನು ಸಹಜವಾಗಿ ಕಲಿಯಲು ಸಹಾಯ ಮಾಡಿತು ಎಂದು ಅನ್ನಿಸುತ್ತದೆ.



ನಾನು ಒಂದರಿಂದ ಹತ್ತನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ಓದಿದ್ದು ನನ್ನ ಪುಟ್ಟ ಜಗತ್ತನ್ನು ಹಂತಹಂತವಾಗಿ ವಿಸ್ತರಿಸಿಕೊಳ್ಳಲು ಅನುವು ಮಾಡಿಕೊಟ್ಟಿತು ಎಂದೇ ನನಗನ್ನಿಸುತ್ತದೆ. ನಾನು ೧೯೮೦ರ ದಶಕದಲ್ಲಿ ಓದುತ್ತಿದ್ದಾಗ ಹಳ್ಳಿಗಳಲ್ಲಿ ಮಾಧ್ಯಮದ ಪ್ರಶ್ನೆ ತೀವ್ರವಾಗಿ ಕಾಡಿರಲೇ ಇಲ್ಲ.



ಅನುಕೂಲವಿರುವವರು ಸಾಗರದ ಖಾಸಗೀ ಇಂಗ್ಲಿಷ್ ಶಾಲೆಗೆ ಹೋಗುತ್ತಿದ್ದರು. ಆದರೆ ಈ ರೀತಿ ಹೋಗುವವರು ತುಂಬಾ ವಿರಳ. ನಮಗೆಲ್ಲ ಕಣ್ಣೆದುರು ಇದ್ದಿದ್ದು ನಮ್ಮದೇ ಊರಿನ ಸಣ್ಣ ಕಟ್ಟಡದ ಸರ್ಕಾರಿ ಶಾಲೆ. ಒಬ್ಬರೇ ಶಿಕ್ಷಕರು. ವಿದ್ಯಾರ್ಥಿಗಳು ಬೇರೆ ಬೇರೆ ಜಾತಿಗೆ ಸೇರಿದವರಾಗಿದ್ದರು. ಬಹುತೇಕ ಬ್ರಾಹ್ಮಣರು ತಮ್ಮ ಮಕ್ಕಳನ್ನು ಇದೇ ಶಾಲೆಗೆ ಸೇರಿಸುತ್ತಿದ್ದರು. ನನಗೆ ಥಟ್ಟನೆ ನೆನಪಿಗೆ ಬರುವುದು ಶೇಷಗಿರಿ ಮೇಷ್ಟ್ರೆಂಬ ಸರಳ, ಸೌಮ್ಯ ಸ್ವಭಾವದ ಒಬ್ಬ ಸೌಜನ್ಯದ ಅಧ್ಯಾಪಕರು. ಎಲ್ಲ ವಿದ್ಯಾರ್ಥಿಗಳಿಗೂ ಜಾತಿಬೇಧ ಮಾಡದೇ ಮನಮುಟ್ಟುವಂತೆ ಪಾಠ ಮಾಡುತಿದ್ದ ಇವರು ನೈತಿಕ ಮೌಲ್ಯವನ್ನು ಸಹ ಒತ್ತಿ ಒತ್ತಿ ಹೇಳುತ್ತಿದ್ದರು. ಮಾರಲ್ ಎಂಬುದು ಪ್ರತ್ಯೇಕ ವಿಷಯವೇನಿರಲಿಲ್ಲ.ಮೇಷ್ಟ್ರ ವ್ಯಕ್ತಿತ್ವವೇ ನಮಗೆಲ್ಲರಿಗೂ ಮೇಲ್ಪಂಕ್ತಿ. ಕಚ್ಚೆ ಪಂಚೆಯನುಟ್ಟು ಸೈಕಲ್ ಮೇಲೆ ದೂರದ ಊರಿಂದ ಪ್ರತಿನಿತ್ಯ ಬರುತಿದ್ದ ಇವರು ಭಾನುವಾರದಂದೂ ಸಹ ಎಲ್ಲ ವಿದ್ಯಾರ್ಥಿಗಳ ಮನೆಗೆ ಭೇಟಿ ಕೊಟ್ಟು ಮೇಲುಸ್ತವಾರಿ ಮಾಡಿದ ಪ್ರಸಂಗವೂ ಇದೆ!! ಇವರು ಮನಮುಟ್ಟುವಂತೆ ಪಾಠ ಕಲಿಸುತಿದ್ದ ರೀತಿಯೂ ನನಗೆ ಈಗಲೂ ಮನಸ್ಸಿನಲ್ಲಿದೆ.

ಮಿಡ್ಲ್ ಸ್ಕೂಲ್ ನಮ್ಮೂರಿನಲ್ಲಿರಲಿಲ್ಲ. ಪಕ್ಕದ ನಿಸರಾಣಿ ಗ್ರಾಮದಲ್ಲಿತ್ತು. ಇದು ನನ್ನ ಸಣ್ಣ ಜಗತ್ತನ್ನು ಸ್ವಲ್ಪ ವಿಸ್ತರಿಸಿದ ಒಂದು ಅನುಭವ ನೀಡಿತು ಎಂದು ಈಗೆನ್ನಿಸುತ್ತಿದೆ. ಈ ಶಾಲೆಯಲ್ಲಿ ಬೇರೆ ಬೇರೆ ವಿಷಯಗಳಿಗೆ ಬೇರೆ ಬೇರೆ ಅಧ್ಯಾಪಕರಿದ್ದರು. ಹಾಗೆಯೇ ವಿದ್ಯಾರ್ಥಿಗಳು ಕೂಡಾ ಸುತ್ತಮುತ್ತಲ ಹತ್ತಾರು ಗ್ರಾಮಗಳಿಂದ ನಡೆದುಕೊಂಡು ಬರುತಿದ್ದರು. ಇಂಗ್ಲಿಷ್ ಹಾಗೂ ಹಿಂದಿ ವಿಷಯುಗಳನ್ನು ಬೇರೆ ಬೇರೆ ಮೇಷ್ಟ್ರುಗಳು ಕನ್ನಡದಲ್ಲಿಯೇ ಹೇಳಿಕೊಡುತಿದ್ದರು. ಆಟವಾಡಲು ದೊಡ್ಡ ಮೈದಾನವೂ ಇತ್ತು. ಗಣಪತಿ ಹಬ್ಬವನ್ನು ಮೂರು ದಿನಗಳ ಕಾಲ ಶಾಲೆಯಲ್ಲಿಯೇ ಆಚರಿಸಲಾಗುತಿತ್ತು. ತರತರದ ವಿದ್ಯಾರ್ಥಿಗಳು ಸಹಪಾಠಿಗಳಾಗಿ ಜಗಳ-ಪಾಠ-ಆಟಗಳಲ್ಲಿ ತೊಡಗಿಕೊಂಡಿದ್ದು ಈಗಲೂ ನೆನಪಾಗುತ್ತದೆ. ನಮ್ಮ ಮೇಷ್ಟ್ರುಗಳು, ಜೊತೆಗೆ ಏಳನೆಯ ತರಗತಿಯಲ್ಲಿ ಓದುತಿದ್ದ ನಮ್ಮೂರಿನ ಒಬ್ಬಿಬ್ಬರು ಹುಡುಗರೇ ನನಗೆ ಲೀಡರ್ ಹಾಗೂ ಫಿಲಾಸಫರ್‌ಗಳಾಗಿದ್ದರು! ಸಾಕಷ್ಟು ದೊಡ್ಡದಿದ್ದ ಈ ಶಾಲೆಯ ಬೇಲಿಯನ್ನೂ ಸಹ ನಾವೆಲ್ಲ ವಿದ್ಯಾರ್ಥಿಗಳು ಸಾಮೂಹಿಕ ಶ್ರಮದಾನದ ಮೂಲಕ ಕಟ್ಟಿದ್ದೆವು. ಲೆಕ್ಕ ಹಾಗೂ ವಿಜ್ಞಾನ ಹೇಳಿಕೊಡುತ್ತಿದ್ದ ದುಂಡೇಶ್ ಮೇಷ್ಟ್ರ ಅವರ ಪಾಠಕ್ಕಷ್ಟೇ ಅಲ್ಲ ಭರ್ಜರಿ ಹೊಡೆತ ಕೊಡುವುದರಲ್ಲೂ ಸುಪ್ರಸಿದ್ಧರಾಗಿದ್ದರು. ಅತ್ಯುತ್ತಮವಾಗಿ ಪಾಠ ಮಾಡುತಿದ್ದ ಇವರಿಗೆ ಬಹುತೇಕ ವಿದ್ಯಾರ್ಥಿಗಳು ತಮ್ಮ ಕೈ ಹಾಗೂ ಕಿವಿಗಳನ್ನು ಅಡಮಾನವಾಗಿಟ್ಟಿದ್ದರು!!!. ಇವರಿಂದ ನಾನು ಯಾವತ್ತೂ ಒಂದು ಹೊಡೆತ ತಿಂದಿರಲಿಲ್ಲ ಎಂಬುದು ನನಗೆ ಹೆಮ್ಮೆಯ ವಿಷಯ.

ನಿಸರಾಣಿಯಲ್ಲೇ ಇದ್ದ ಪ್ರೌಢಶಾಲೆ ಅದರ ಗಾತ್ರದಿಂದ ಮಾತ್ರವಲ್ಲದೇ ಅಲ್ಲಿನ ಅತ್ಯುತ್ತಮ ಶಿಕ್ಷಕರಿಂದಲೂ ಪ್ರಸಿದ್ಧವಾಗಿತ್ತು. ಆ ಕಾಲದಲ್ಲಿಯೇ ಹತ್ತನೇ ತರಗತಿಯಲ್ಲಿ ಇಡೀ ರಾಜ್ಯಕ್ಕೆ ರ್‍ಯಾಂಕ್ ಬಂದ ವಿದ್ಯಾರ್ಥಿನಿಯೊಬ್ಬಳು ಇಡೀ ರಾಜ್ಯ ಈ ಶಾಲೆಯತ್ತ ಕಣ್ಣು ಹಾಯಿಸಲು ಕಾರಣಳಾಗಿದ್ದಳು. ಪ್ರತಿವರ್ಷ ಒಳ್ಳೆಯ ಫಲಿತಾಂಶ ತಂದುಕೊಡುತ್ತಿದ್ದ ಈ ಖಾಸಗಿ ಕನ್ನಡ ಪ್ರೌಢಶಾಲೆ ನಮ್ಮ ಹೋಬಳಿಯ ಬಹುತೇಕರಿಗೆ ವಿದ್ಯಾದಾನ ಮಾಡಿದ ಶಾಲೆಯಾಗಿತ್ತು. ಶಾಲೆಯಲ್ಲಿ ಡೊನೇಶನ್ ಎಂದೇನೂ ಇರಲಿಲ್ಲ. ಅನುಕೂಲಸ್ಥರಿಂದ ಸಹಕಾರಿ ತತ್ವದಡಿಯಲ್ಲಿ ಅಲ್ಪಸ್ವಲ್ಪ ಹಣ ಸ್ವೀಕರಿಸುತಿದ್ದರು. ಪಾಠಕ್ಕಷ್ಟೇ ಅಲ್ಲದೇ ಆಟಕ್ಕೂ ಅಷ್ಟೇ ಪ್ರಾಮುಖ್ಯತೆ ನೀಡುತಿದ್ದ ಈ ಶಾಲೆಯಲ್ಲಿ ಕೇವಲ ಕನ್ನಡವಷ್ಟೇ ಅಲ್ಲ ಇಂಗ್ಲಿಷನ್ನು ಕೂಡಾ ಸಮರ್ಥವಾಗಿ ಪಾಠ ಮಾಡುವ ಅಧ್ಯಾಪಕರಿದ್ದರು. ಈ ಹಂತದಲ್ಲಿಯೇ ಗ್ರಾಮದ ಕ್ರಿಕೆಟ್ ತಂಡ ನನ್ನ ಮೇಲೆ ಪ್ರಭಾವ ಬೀರಿ ಅವರೊಟ್ಟಿಗೆ ಆಟವಾಡಲು ಪ್ರೇರೇಪಿಸಿತು. ನನ್ನ ಸೋದರಮಾವನಿಂದ, ರೇಡಿಯೋದಲ್ಲಿ ಬರುತಿದ್ದ ಕ್ರಿಕೆಟ್ ಕಾಮೆಂಟರಿ ಕೇಳುವ ಗೀಳೂ ಹುಟ್ಟಿಕೊಂಡಿತ್ತು. ಪಠ್ಯದ ಜೊತೆಗಿನ ಈ ರೀತಿಯ ಗೀಳುಗಳು ನನಗೆ ಇಂಗ್ಲಿಷ್ ಭಾಷೆ ಕಲಿಯಲು ನೆರವಾದವು. ಈ ಶಾಲೆಯಲ್ಲಿನ ವಾರ್ಷಿಕೋತ್ಸವ ಕೇವಲ ಮನನೀಯ ಅಷ್ಟೇ ಅಲ್ಲ, ಅದು ಸುತ್ತಮುತ್ತಲಿನ ಗ್ರಾಮಗಳಲ್ಲಿ ಸುಪ್ರಸಿದ್ಧವೂ ಆಗಿತ್ತು. ಬಗೆಬಗೆಯ ಮನರಂಜನೆ ಜೊತೆಗೆ ಕ್ರೀಡಾ ಕೌಶಲ್ಯಗಳೂ ವಿದ್ಯಾರ್ಥಿಗಳಿಂದ ಪ್ರದರ್ಶನಗೊಳ್ಳುತ್ತಿದ್ದವು. ಇಲ್ಲಿನ ಉತ್ಸಾಹಿ ಕ್ರೀಡಾ ಅಧ್ಯಾಪಕ ಗುಂಡಣ್ಣನವರು ಚಿತ್ರ ವಿಚಿತ್ರ ಕ್ರೀಡಾ ಕೌಶಲ್ಯಗಳನ್ನು ವಿದ್ಯಾರ್ಥಿಗಳಿಂದ ಮಾಡಿಸುತಿದ್ದರು. ಈ ವಾರ್ಷಿಕೋತ್ಸವದಲ್ಲಿ ಹಳೆಯ ವಿದ್ಯಾರ್ಥಿಗಳು ಕೂಡಾ ಕಾರ್ಯಕ್ರಮ ನೀಡುತ್ತಿದ್ದರು. ಸ್ಥಳೀಯ ಕಲೆಗಳಾದ ಡೊಳ್ಳು , ಕೋಲಾಟ, ಯಕ್ಷಗಾನವನ್ನು ವಿದ್ಯಾರ್ಥಿಗಳೇ ಕಲಿತು ಪ್ರದರ್ಶಿಸುತಿದ್ದರು. ವಾರ್ಷಿಕೋತ್ಸವವೆಂದರೆ ಮೂರನೆಯ ದರ್ಜೆಯ ಹಾಡು ಕುಣಿತಗಳ ಸಂಗಮವಾಗಿರದೇ ಮಕ್ಕಳ ಸೃಜನಶೀಲತೆ ಮತ್ತು ಕ್ರಿಯಾಶೀಲತೆಯ ಪ್ರದರ್ಶನವಾಗಿರುತಿತ್ತು.

ಪ್ರಾಯಃ ಇಂಗ್ಲಿಷ್ ಈಗ ನಮ್ಮೆಲ್ಲರನ್ನು ಆವರಿಸಿಕೊಳ್ಳುತ್ತಿರಬಹುದು. ಆದರೆ ಒಬ್ಬ ಸಾಮಾನ್ಯ ಮನುಷ್ಯ ಕೂಡ ಕನ್ನಡ ಮಾಧ್ಯಮದ ಓದಿನ ಮೂಲಕವೇ ಎರಡೂ ಜಗತ್ತುಗಳನ್ನು ನಾವು ಪ್ರವೇಶಿಸಬಹುದು ಎಂಬ ನಂಬಿಕೆ ನನಗಿದೆ.

---

# ಆಹಾ! ಆ ನನ್ನ ಕನ್ನಡ ಶಾಲೆ!!

**– ಜೀವಯಾನದ ಎಸ್ ಮಂಜುನಾಥ್**

**ನಾವೆಲ್ಲ ಓದಿ ಜಾಣರಾಗಬೇಕು ಎಂದು ನಮ್ಮ ಮೇಸ್ಟರುಗಳು ಆಗಾಗ ಹೇಳುತ್ತಿದ್ದುದೇನೋ ಇತ್ತು. ಆದರೆ ಯಾಕೆ ಎಂದು ನಮಗೂ ಗೊತ್ತಿರಲಿಲ್ಲ, ಅವರೂ ಅದನ್ನು ನಮ್ಮ ತಲೆಯಲ್ಲಿ ತುರುಕಿದ್ದಿಲ್ಲ. ತುಂಬ ಜಾಣರಾಗಬೇಕು, ತುಂಬ ದುಡ್ಡು ಮಾಡಬೇಕು, ಊರು ಬಿಟ್ಟು ಹೋಗಬೇಕು, ಹೀಗೆಲ್ಲ ಅವರು ಎಂದೂ ಸೂಚನೆ ಕೊಟ್ಟಿದ್ದಿಲ್ಲ. ಪಾಠ ಪ್ರವಚನ ಶಿಕ್ಷೆಯಂತಲ್ಲದೆ ಬರೀ ನಿಮಿತ್ತವಾಗಿ, ಈ ಅಧಿಕಾರ–ಧನಾಕಾಂಕ್ಷೆಯ ಹುಚ್ಚಿನ ನಾಗರೀಕ ಸೋಂಕನ್ನು ಹುಟ್ಟಿಂದಲೇ ಇಂಜೆಕ್ಟ್ ಮಾಡುವ ಕ್ಯಾಂಪ್‌ಗಳಂತೆ ನಮ್ಮ ಶಾಲೆಗಳಿರಲಿಲ್ಲ. ನಾವೆಲ್ಲ ಸದಾ ಒಟ್ಟಿಗೇ ತಾಳಗುಪ್ಪದಲ್ಲಿರಬೇಕು, ಇವತ್ತು ಚಿಕ್ಕವರಾದವರು ನಾಳೆ ದೊಡ್ಡವರಾಗಿ ಈ ಊರಿನ ಜೀವನ ಮುಂದುವರೆಸಬೇಕು, ಕನ್ನಡ, ತಾಳಗುಪ್ಪ, ನಮ್ಮಗಳ ಸಂಬಂಧ ಬದುಕಿನ ಸಾರ್ಥಕತೆಗೆ ಇಷ್ಟು ಸಾಕು, ಇದಕ್ಕೂ ಮಿಗಿಲಾದ್ದು ಬದುಕಲ್ಲಿ ಮತ್ತ್ಯಾವುದು?–ಹೀಗೆ ಅವರ ಇಂಗಿತವಿದ್ದಂತೆ ಕಾಣುತ್ತದೆ.**

**ಕ**ನ್ನಡ ಬಿಟ್ಟು ಬೇರೆ ಭಾಷೆಯಿದೆ ಎಂದು ನಮಗೇನು ಗೊತ್ತಿತ್ತು? ನಮ್ಮ ತಾಳಗುಪ್ಪದಲ್ಲಿ–ಅದು ಹಳ್ಳಿ ಎಂದು ನಾನು ಈಗ ಬರೆಯಬಹುದಾದ್ದು ಅಪಚಾರ, ಆಗ ನಮ್ಮ ಜಗತ್ತು ಅದು–ಮರಾಠಿ ಮಾತಾಡುವ ಒಂದೆರಡು ದರ್ಜಿ ಕುಟುಂಬ, ಕೊಂಕಣಿ ಮಾತಾಡುವ ಒಂದು ಕ್ರಿಶ್ಚಿಯನ್ ಮನೆ ಒಂದು ಗೌಡ ಸಾರಸ್ವತ ಮನೆ ಇದ್ದರೂ ನಮಗೆ ಅವರು ಮಾತಾಡುವುದು ಕನ್ನಡವಲ್ಲದೆ ಬೇರೆ ಎಂದೇನು ತಿಳಿದಿರಲಿಲ್ಲ! ಕನ್ನಡವೇ, ಆದರೆ ಅವರ ಮನೆಯ ವೈಯಕ್ತಿಕ ಸಣ್ಣ ವಿಚಾರಗಳನ್ನು ಮಾತಾಡುವಾಗ ನಮಗೆ ಗೊತ್ತಾಗದಿರಲಿ ಎಂದು ಏನೋ ಕೋಡ್‌ನಲ್ಲಿ ಮಾತಾಡುತ್ತಾರೆ, ಅದು ನಮಗೇನೂ ಸಂಬಂಧಿಸಿದ್ದಲ್ಲ ಎಂದು ನಾನು ಭಾವಿಸಿದ್ದೆ. ಮನುಷ್ಯರೆಲ್ಲ ಇಂಗ್ಲೀಷ್ ಮಾತಾಡುತ್ತಾರೆ ಎಂದು ತಿಳಿದ ಹಕಲ್ ಬೆರಿ ಫಿನ್ ಕಾದಂಬರಿಯ ಕಪ್ಪು ಪಾತ್ರ ಜಿಮ್‌ನಂತೆ ಮನುಷ್ಯರೆಲ್ಲ ಕನ್ನಡ ಮಾತಾಡುತ್ತಾರೆ ಎಂದು ನಾನು ತಿಳಿದವನಾಗಿದ್ದೆ. ಬರೀ ಕನ್ನಡ ಕಿವಿಗೆ ಬೀಳುತ್ತಿದ್ದ ತಾಳಗುಪ್ಪ ಒಂದು ಜಗತ್ತು ಎಂದು ತಿಳಿದಿದ್ದೆ ಎಂದು ಹೇಳಿದೆನಲ್ಲ, ಅದು ಬಾಯಿಮಾತಿಗಲ್ಲ, ನಿಜಕ್ಕೂ. ನಾವು ಟೆಂಟ್‌ನಲ್ಲಿ ನೋಡುತ್ತಿದ್ದ ಒಂದೇ ಬಳ್ಳಿಯ ಹೂಗಳು ಇರಲಿ, ಶ್ರೀ ರಾಮಾಂಜನೇಯ ಯುದ್ಧ ಸಹ ತಾಳಗುಪ್ಪದ ಈ ಈ ಜಾಗದಲ್ಲಿ ನಡೆದಿದ್ದು ಎಂದು ನಾನು ಮನಸ್ಸಲ್ಲೇ ಗುರುತಿಸುತ್ತಿದ್ದೆ. ಓ ಇದು ನಮ್ಮ ಬಂಗ್ಲೆ ಗುಡ್ಡ, ಇದು ನಮ್ಮ ಗೌರಿ ಕೆರೆ, ಇದು ಕೂಡ್ಲಿ ಮಠ–ಎಂದು! ರೇಡಿಯೋದಲ್ಲಿ ಒಂದು



ಜಾಹೀರಾತು ಬರುತ್ತಿತ್ತು 'ಲಿಪ್ಟನ್ ಟೀ ಲಾವ್ಗೋಜಿ' ಎಂದು. ತಾಳಗುಪ್ಪದಲ್ಲಿ ಲಿಪ್ಟನ್ ಟೀ ಏಜೆಂಟರಾಗಿ ಅವರ ಮನೆಯ ಮುಂದೆ ಒಂದು ದೊಡ್ಡ ಬೋರ್ಡಿದ್ದುದು ಎಲ್ಲೋಜಿಯುವರು, ನನಗೆ ಯಾವಾಗಲೂ ಆ



ಗೊಂದಲವಾಗುತ್ತಿತ್ತು–ಯಾಕೆ ರೇಡಿಯೋದಲ್ಲಿ ತಪ್ಪು ಬರುತ್ತದೆ? ಅದನ್ನು ಎಲ್ಲೋಜಿಯವರ ಗಮನಕ್ಕೇ ತರೋಣವೆಂದರೆ ಎತ್ತರಕ್ಕೆ ಕಪ್ಪಗೆ ಇದ್ದು ಬಿಳೀ ತುಂಬು ತೋಳಿನ ಷರಟು, ಕಚ್ಚೆ ಪಂಚೆ ಹಾಕುತ್ತಿದ್ದ ಗಂಭೀರಸ್ವರಾದ ಅವರನ್ನು ಮಾತಾಡಿಸುವ ಧೈರ್ಯ ನಮಗಂತೂ ಇದ್ದಿಲ್ಲ. ಆದರೂ ಯಾರಾದರೂ ಈ ತಪ್ಪನ್ನು ಸರಿಪಡಿಸಲೇಬೇಕಲ್ಲ ಎನಿಸುತ್ತಿತ್ತು.

ಇಂಥ ಊರಲ್ಲಿನ ಕನ್ನಡದ ಕಂದ ನಾನು ಶಾಲೆಗೆ ಹೋದೆ. ಹೋಗಿದ್ದೇನಲ್ಲ, ದೊಡ್ಡಿಗೋ ಜೈಲಿಗೋ ಹಾಕಲ್ಪಟ್ಟಂತೆ ಕೂಡಲ್ಪಟ್ಟೆ! ಆಗ ತಾನೇ ತಾಯಿಯನ್ನು ಕಳೆದುಕೊಂಡಿದ್ದ ನಾನು ಶಾಲೆಗೆ ಹೋಗಲೇಬೇಕೆಂದು ಸಾಮ ದಾನ ದಂಡ ಇತ್ಯಾದಿಗಳನ್ನು ಬಳಸಿ ಸೋತ ನನ್ನಣ್ಣ ಕಡೆಗೆ ಪೋಲೀಸ್ ಭಯದಿಂದಾದರೂ ಹೋಗಲಿ ಎಂದು ಆ ಹಳ್ಳಿಯ ಪೋಲೀಸ್ ಸ್ಟೇಷನ್‌ನಲ್ಲೂ ಕೂರಿಸುತ್ತಿದ್ದ! ಅದಕ್ಕಿಂತ ಶಾಲೆಯೇ ಒಳ್ಳೆಯದು ಎಂದು ನಾನು ಹೋಗಿ ಹೋಗದೆ ಕದ್ದು ಹೋದ ರೀತಿಯಲ್ಲಿ ಹೋದೆ! ಒಂದು ಎರಡು ಮೂರನ್ನು ದಡ್ಡನೆಂಬ ಖ್ಯಾತಿಯಲ್ಲಿ ಅರ್ಧ ಎಚ್ಚರ ಅರ್ಧ ಮಂಕಲ್ಲಿ ತಳ್ಳಿದೆ. ಒಡೆದ ಪಾಟಿಯ ಹೊಡೆದಾಟ, ಹರಿದ ಪುಸ್ತಕದ ಹಾರಾಟ, ಜಗಳದಲ್ಲಿ ಯಾರದಾದರೂ ಅಂಗಿ ಹರಿದರೆ 'ಬಟ್ಟೆ ನಿಮ್ಮಪ್ಪ ಹೊಲೆಸಿಕೊಡುತ್ತಾನೇನೋ' ಎಂಬ ಬೈದಾಟ, ಮತ್ತೆ 'ಅಪ್ಪನ ಸುದ್ದಿಗೆ ಬಂದರೆ ಎಪ್ಪತ್ತಾರು ಮೆಟ್ಟು' ಎಂಬ ಯುದ್ಧಾಹ್ವಾನ–ಈ ಎಲ್ಲವನ್ನೂ ನಮ್ಮ ಪ್ರೀತಿಯ ಗೆಳೆಯರಾದ ಬಡವ ಅನುಕೂಲಸ್ತ ಹವ್ಯಕ ಗೊಲ್ಲ ಲಿಂಗಾಯತ ದೀವರು ಸಾಬರ ಕಲಸುಮೇಲೋಗರದ ಸಮುದಾಯದಲ್ಲಿ ಕಲಿಯುತ್ತ ಹೋದೆ.

ಆ 'ಬದುಕಿಗಾಗಿ ಹೋರಾಟ'ದ ಮಧ್ಯೆ ಮೇಸ್ಟರು ಕರೆಕೊಟ್ಟಾಗ ಎರಡೊಂದ್ಲೆರಡು ಎರಡೆರಡ್ಲ ನಾಕು ಎರಡೊಂಬೋತ್ಲ ಹದ್ನೆಂಟು ಎರಡ್ಹತ್ಲ ಇಪ್ಪತ್ತು, ಕ ತಲಕೊಟ್ಟು ಕ ಕ ಕಿಳೀ ಕಾ ಕಕೊಂದ್ಲೊನ್ನೆ ಕಂ ಕಕೆರಡ್ಲೊನ್ನೆ ಕಹ ಎಂಬ, ಈಗ ನೆನೆದರೆ ಭೈರವಿ ಕಲ್ಯಾಣಿಯಂತೆ ಕರ್ಣಾನಂದಕರವಾದ ರಾಗಮಯ ಅಂಕಿ ಅಕ್ಷರ ಕಲಿತೆವು.

ಜೀವ ಪುಟಿಯುವ ಅಂತಹ ಪರಿಸರದಲ್ಲಿ ಹಚ್ಚೇವು ಕನ್ನಡದ ದೀಪ, ಕನ್ನಡವೆನೆ ಕುಣಿದಾಡುವುದೆನ್ನೆದೆಗಳು ತಾವಾಗಿ ನಮ್ಮ ಮನಸ್ಸಲ್ಲಿ ಬಿತ್ತಿಕೊಂಡವು, ಕುದುರಿದವು. ಕನ್ನಡ ನಮ್ಮ ಗುರುತಾಯಿತು. ಇನ್ನು ಬದುಕಲ್ಲಿ ಏನನೇ ಕಂಡರೂ ಪಟ್ಟರೂ ಕನ್ನಡದ ಮೂಲಕವೇ ಎಂದಾಗಿಸಿದವು.

ಮೂರನೇ ಕ್ಲಾಸಿನ ಒಬ್ಬ ಮೇಸ್ಟರು 'ನಾಳೆ ನೀವೆಲ್ಲ ವಿಷಲ್ ಹಾಕುವುದನ್ನು ಕಲಿತು ಬರಬೇಕು' ಎಂಬ ಆದೇಶ ಹೊರಡಿಸಿದಾಗ, ಶಾಲೆ ಹಿಂಭಾಗದಲ್ಲಿ ಆ ವಿದ್ಯೆಗೆ ನನಗೆ ಗುರುವಾಗಿ ಒದಗಿದವನು ಅತ್ಯಂತ ದಡ್ಡನಾದ ಪರಶುರಾಮ ಎಂಬ ಹಜಾಮರ ಹುಡುಗ! ಆದರೆ ಅಂಗೈ ಸೆಟೆಸಿ ಹೆಬ್ಬೆರಳು ತೋರುಬೆರಳುಗಳ ನಡುವೆ ತುಟಿಯಿಟ್ಟು ರೈಲು ಬಿಡುವುದನ್ನು ಕಲಿಸಿದವ ಲಕ್ಷ್ಮೀನಾರಾಯಣ ಎಂಬ ಆಚಾರರ ಹುಡುಗ. ಅವ ದಡ್ಡ, ಆದರೆ ಅವನಕ್ಕ ಕಪ್ಪು ಲಕ್ಷಣ ಹುಡುಗಿ ಸರಸ್ವತಿ ಬಲು ಜಾಣೆ. ಈಚೆಗೆ ಲಕ್ಷ್ಮೀನಾರಾಯಣ ಸಿಕ್ಕಾಗ ಸರಸ್ವತಿಯ ಬಗ್ಗೆ ಕೇಳಿದೆ. 'ಅವಳ ಸುದ್ದಿ ಎತ್ತಬೇಡ' ಎಂದು ಕೆರಳಿದ. ಯಾಕೆಂದರೆ ಅವಳು ಬೇರೆ ಜಾತಿಯವನನ್ನು ಪ್ರೀತಿಸಿ ಮದುವೆಯಾಗಿದ್ದಳು.

ಅಕ್ಕ ಅಕ್ಕ ಎಂದು ಸದಾ ಬಾಲಬಡಿಯುತ್ತಿದ್ದ ಬಾಲಕ ಎಲ್ಲಿ ಹೋದನೋ?

ಇಸ್ತ್ರಿ ಅಂಗಡಿ ಹುಚ್ಚಣ್ಣನ ಮಗ ಈಶ್ವರ, ಎಕ್ಸರ್‌ಸೈಜ್ ಮೇಲಿನ ಬಿಳೀ ಟೋಪಿ ಹಾಕಿದ್ದ ನೆಹರೂ ಚಿತ್ರ ಎಷ್ಟು ಚೆನ್ನಾಗಿ ಬರೆದಿದ್ದನೆಂದರೆ ನನಗೆ ಹೊಟ್ಟೇಕಿಚ್ಚಾಗಿ ನಾನೂ ನೆಹರೂವನ್ನ ಬರೆದು ಬರೆದು ಹಾಕಿದೆ. ಆ ಹೊಟ್ಟೇಕಿಚ್ಚಲ್ಲಿ ಈಶ್ವರನಿಗೆ ನಾನು ಕೊಟ್ಟಿದ್ದ ೧೭ ಪೈಸೆ ಸಾಲವನ್ನು ವಾಪಾಸು ಕೊಡು ಎಂದು ಪೀಡಿಸತೊಡಗಿದೆ.

ಶಾಲೆಗೆ ನಾನು ಅರ್ಧ ಗಂಟೆ ಮುಂಚಿತವಾಗಿ ಹೋಗತೊಡಗಿದ್ದು ನನ್ನ ಅತ್ಯಂತ ಪ್ರೀತಿಯ ಮಿತ್ರ ವಿಶ್ವನಾಥನ ಜೊತೆ ಕುಸ್ತಿ ಆಡಲಿಕ್ಕೆ! ತಳ್ಳಿ ತಬ್ಬಿ ಗುದ್ದಾಡುವುದರಿಂದ ನಮ್ಮ ಗೆಳೆತನ ಗಾಢವಾಗುತ್ತಿತ್ತು. ಆ ವಿಶ್ವನಾಥನ ಮನೆಗೊಬ್ಬ ಬಾಡಿಗೆಗೆ ಬಂದ. ಹಿತ್ತಲಿಂದ ದೂರ ಮರೆಯಲ್ಲಿ ಸಿಗರೇಟ್ ಸೇದುತ್ತಿದ್ದ ಆತನ ಬಗ್ಗೆ ವಿಶ್ವ ಹೇಳಿದ್ದು–'ಅವನು ಬರೇ ಇಂಗ್ಲೀಷು' ಎಂದು. ಆಗ ನಮಗೆ ಬಹಳ ಗಾಬರಿ ಮತ್ತು ಭಯವಾಗಿತ್ತು.

ಸೋನೆಯಂತೆ ಒಂದೇ ಸಮ ಧ್ರುವನ ಕತೆ ಹೇಳುತ್ತಿದ್ದ ಒಂದನೇ ಕ್ಲಾಸಿನ ಗುತ್ಯಪ್ಪ ಮೇಸ್ಟರು ನಮ್ಮ ಚಿಕ್ಕಪ್ಪನೋ ಸೋದರಮಾವನೋ ಇದ್ದಂತಿದ್ದರು. ಮೂರನೇ ಕ್ಲಾಸಿನ ಶ್ರೀನಿವಾಸಮೂರ್ತಿ ನಾಟಕ ಚಿತ್ರ ಕವಿತೆ ಎಲ್ಲ ಬಲ್ಲ ಮಹಾ ಪ್ರತಿಭಾವಂತ. ನಾಕನೇ ಕ್ಲಾಸಲ್ಲಿ ಅವರು ಸಿದ್ಧಾರ್ಥನ ನಾಟಕ ಮಾಡಿಸಿ ಬುದ್ಧನ ಬಾಯಲ್ಲಿ ಬಸವಣ್ಣನ ವಚನಕ್ಕೆ ತಮ್ಮದೆರಡು ಸಾಲು ಸೇರ್ಪಡೆಯೊಂದಿಗೆ ಹಾಡಿಸಿ ನನಗೆ ಕವಿತೆಯ ಎಲ್ಲೆಯಿರದ ಸ್ವಾತಂತ್ರ್ಯದ ಬಗ್ಗೆ ಬೆರಗು ಮೂಡಿಸಿಬಿಟ್ಟರು. ಐದರ ಇಂಗ್ಲೀಷಿನ ಐಎಮ್‌ಸಿ ಹೊರಗೆ ಖಡಕ್ ಒಳಗೆ ಕಮಂಗಿ! ಆದರೆ ಅಸಿಸ್ಟೆಂಟ್ ಹೆಡ್ ಮಾಸ್ಟರಾದ ನಾರಾಯಣಪ್ಪ ದಯಾಳು ಮತ್ತು ಜಾನಪದ ಹಾಡು ಹಾಡಿಕೊಂಡು ಕುಣಿಯುವ ಕಲಾವಿದ. ತುಂಬ ಹೊಡೆಯುತ್ತಿದ್ದ ಆದರೂ ಒಳ್ಳೆಯವರಾಗಿದ್ದ ಸಿದ್ದಪ್ಪ ಹೆಮ್ಮೆಯಿಂದ ಹೇಳುತ್ತಿದ್ದುದು–'ತಾಯಿ ಕರುಳು ನಾಟಕದಲ್ಲಿ ನಾನು ಅತ್ತೆಯ ಪಾತ್ರ ಮಾಡಿದಾಗ ಜನರೆಲ್ಲ ನನಗೆ ಸಗಣಿಯಲ್ಲಿ ಹೊಡೆದಿದ್ದರು'. ಆಗ ನಮಗೆ 'ಇವರಿಗೆ ಹಾಗೇ ಆಗಬೇಕು' ಅನಿಸುತ್ತಿತ್ತು. ನಾಗಪ್ಪನವರು ಶಾಲೆ ಮಾತ್ರವಲ್ಲ ಊರಿಗೇ ಹೆಡ್ ಮಾಸ್ಟರಾಗಿದ್ದರು! ಅವರು ಬಂದರೆ ಊರವರು ಎದ್ದು ನಿಲ್ಲುತ್ತಿದ್ದರು.

ಮಿಡ್ಲ್‌ಸ್ಕೂಲ್‌ನಲ್ಲಿ ಯಾವ ಮೇಸ್ಟರಿಗೆ ಬಂದ ವಿಚಾರವೋ ಗೊತ್ತಿಲ್ಲ, ಶಾಲೆಯ ದೊಡ್ಡ ಆವರಣದ ತುಂಬ ಬೀನ್ಸ್ ಬೆಳೆಸಿದರು. ಶಾಲೆ ಹಿಂದೆ ಇದ್ದ ರಂಗಪ್ಪನ ಗುಡ್ಡದಿಂದ ಸೊಪ್ಪು ಮುರಿದು ತಂದು ಗೊಬ್ಬರ ಮಾಡಿದ್ದೆವು. ಗಿಡಗಳಲ್ಲಿ ಕಾಯಿ ತೂಗಿದಾಗ ಅವುಗಳ ನಡುವಿನ ದಾರಿಯಲ್ಲಿ ನಡೆದು ಬರುವುದು ಆನಂದವಾಗಿರುತ್ತಿತ್ತು. ಬಳಿಕ ಬೀನ್ಸ್ ಹರಾಜು ನಡೆದು ನಾವು ಕೂಗಿದ್ದೂ ಆಯಿತು. ಪಾಠ ಟ್ಯೂಷನ್ ಪರೀಕ್ಷೆ ಎಂಬ ಚಪ್ಪಡಿ ಹೊರಿಸಲ್ಪಟ್ಟ ಈಗಿನ ಮಕ್ಕಳಿಗೆ ಬೀನ್ಸ್ ಬೆಳೆಯುವುದೂ ಕಲಿಕೆಯೇ ಎಂದು ತಿಳಿಸಿದ್ದೇವೆಯೇ? ಇಲ್ಲ, ಕನ್ನಡ ಶಾಲೆಯನ್ನೂ ನಾವು 'ಕಾರ್ಮೆಂಟ್' ಮಾಡಿಹಾಕಿದ್ದೇವಲ್ಲ!

ನಾವೆಲ್ಲ ಓದಿ ಜಾಣರಾಗಬೇಕು ಎಂದು ನಮ್ಮ ಮೇಸ್ಟರುಗಳು ಆಗಾಗ ಹೇಳುತ್ತಿದ್ದುದೇನೋ ಇತ್ತು. ಆದರೆ ಯಾಕೆ ಎಂದು ನಮಗೂ ಗೊತ್ತಿರಲಿಲ್ಲ, ಅವರೂ ಅದನ್ನು ನಮ್ಮ ತಲೆಯಲ್ಲಿ ತುರುಕಿದ್ದಿಲ್ಲ. ತುಂಬ ಜಾಣರಾಗಬೇಕು, ತುಂಬ ದುಡ್ಡು ಮಾಡಬೇಕು, ಊರು ಬಿಟ್ಟು ಹೋಗಬೇಕು, ಹೀಗೆಲ್ಲ ಅವರು ಎಂದೂ ಸೂಚನೆ ಕೊಟ್ಟಿದ್ದಿಲ್ಲ. ಪಾಠ ಪ್ರವಚನ ಶಿಕ್ಷೆಯಂತಲ್ಲದೆ ಬರೀ ನಿಮಿತ್ತವಾಗಿ, ಈ ಅಧಿಕಾರ–ಧನಾಕಾಂಕ್ಷೆಯ ಹುಚ್ಚಿನ ನಾಗರೀಕ ಸೋಂಕನ್ನು ಹುಟ್ಟಿಂದಲೇ ಇಂಜೆಕ್ಟ್ ಮಾಡುವ ಕ್ಯಾಂಪ್‌ಗಳಂತೆ ನಮ್ಮ ಶಾಲೆಗಳಿರಲಿಲ್ಲ. ನಾವೆಲ್ಲ ಸದಾ ಒಟ್ಟಿಗೇ ತಾಳಗುಪ್ಪದಲ್ಲಿರಬೇಕು, ಇವತ್ತು ಚಿಕ್ಕವರಾದವರು ನಾಳೆ ದೊಡ್ಡವರಾಗಿ ಈ ಊರಿನ ಜೀವನ ಮುಂದುವರೆಸಬೇಕು, ಕನ್ನಡ, ತಾಳಗುಪ್ಪ, ನಮ್ಮಗಳ ಸಂಬಂಧ ಬದುಕಿನ ಸಾರ್ಥಕತೆಗೆ ಇಷ್ಟು ಸಾಕು, ಇದಕ್ಕೂ ಮಿಗಿಲಾದ್ದು ಬದುಕಲ್ಲಿ ಮತ್ಯಾವುದು?–ಹೀಗೆ ಅವರ ಇಂಗಿತವಿದ್ದಂತೆ ಕಾಣುತ್ತದೆ. ಆ ಕಾಲವೂ ಅಷ್ಟೇ ಸೌಮ್ಯಯುತವಾಗಿತ್ತು.

ಹಾಗೇ ಈಗ ನಮ್ಮ ಲಕ್ಷ್ಮೀನಾರಾಯಣ ಅಂಗಡಿಯಿಟ್ಟು ಫಾರೆಸ್ಟ್ ಕಂಟ್ರಾಕ್ಟರಾಗಿ, ವಿಶ್ವ ಮೆಡಿಕಲ್ ಸ್ಟೋರ್ ಇಟ್ಟುಕೊಂಡು, ಅಣ್ಣಪ್ಪ ಬ್ಯಾಂಗಲ್ ಸ್ಟೋರ್ ಮಾಲಿಕನಾಗಿ, ಮೋಹನ ರಾಜಕೀಯ ಗಣ್ಯನಾಗಿ, ಬಾಳುತ್ತಿದ್ದಾರೆ. ನಾನು ಈಚೆಗೆ ಗೋವಿಂದಯ್ಯನ ಜೊತೆ ಜೋಗಕ್ಕೆ ಹೋಗುವಾಗ ತಾಳಗುಪ್ಪದಲ್ಲಿ ನಮ್ಮ ಎನ್‌ಟಿಎಮ್‌ಎಸ್ ಮುಂದೆ ಒಳಗೇ ಕಣ್ಣೀರಾಗಿ ನಿಂತೆ. ಯಾರಾದರೂ ಗೆಳೆಯರು ತಾಳಗುಪ್ಪಾದ ಮೇಲಾಸಿ ಬರುವುದಿದ್ದರೆ ಅಲ್ಲಿಂದ ಏನಾದರೂ ನನಗಾಗಿ ತನ್ನಿ ಎನ್ನುತ್ತೇನೆ. ಏನು ಎಂದು ಕೇಳುತ್ತಾರೆ. ಏನಾದರೂ, ಯಾವುದೇ ಅಂಗಡಿಯಿಂದ ಎರಡು ರೂಪಾಯಿನ ಒಂದು ಬಾಚಣಿಗೆ, ಕಡೆಗೆ ರಸ್ತೆ ಬದಿಯ ಒಂದು ಕಲ್ಲಾದರೂ ಸಾಕು ಎನ್ನುತ್ತೇನೆ.

ಯಾಕೆ ಈ ಲೋಕ ಮನ್ನಣೆ, ಯಾವ ಸುಖಕ್ಕಾಗಿ ಹುಡುಕಾಟ, ದೊಡ್ಡವರಾಗಿ ಲೋಕವನ್ನು ಆಳುವ ತೆವಲು, ಅದಕ್ಕಾಗಿ ಇಂಗ್ಲೀಷು, ಪರದೇಶ, ನಾನಾ ವೇಷ? ಅಲ್ಲಮ ಹೇಳುತ್ತಾನೆ 'ಬೇರಿಂದಲಾದ ಫಲವ ತರಿದುಂಡವ ಊರಿಂಗೆ ಹೊರತಾದ ಗುಹೇಶ್ವರಾ'. ನಮಗೆ ಕನ್ನಡದ ಬೇರಿನ ಆ ಫಲವೇ ಸಾಕೆನಿಸದಂತೆ ಹೊತ್ತೊಯ್ದಿದ್ದು ಆಮಿಷದ ಯಾವ ಸುಂಟರಗಾಳಿ?

ಸಾಹಿತ್ಯ–ಸಂಸ್ಕೃತಿ–ನಾಟಕ ಇತ್ಯಾದಿ

# ನೀನಾಸಂನ ಬೌದ್ಧಿಕ ಸಂಪ್ರದಾದಾಯವೂ, ಅದರ ನಾಟಕಗಳೂ



**ಕ**ಳೆದ ಅಕ್ಟೋಬರ್ ೨ರಂದ ೮ರವರೆಗೆ ನಡೆದ ಹೆಗ್ಗೋಡಿನ ನೀನಾಸಂ ಸಂಸ್ಕೃತಿ ಶಿಬಿರದ ಈ ವರ್ಷದ ವಿಷಯು 'ಭಾರತೀಯು ಚಿಂತನಾಕ್ರಮವೊಂದಿದೆಯೇ?' ಎಂಬುದಾಗಿತ್ತು. ಇದು ಎರಡು–ಮೂರು ದಶಕಗಳ ಹಿಂದೆ ಎ.ಕೆ. ರಾಮಾನುಜನ್ ತಮ್ಮದೊಂದು ಮುಖ್ಯ ಲೇಖನವೊಂದರ ಮೂಲಕ ಎತ್ತಿದ ಪ್ರಶ್ನೆ ಕೂಡಾ ಆಗಿತ್ತು. ಅದು ವಸಾಹತೋತ್ತರ ಚಿಂತನೆಯೆಂಬುದೊಂದು ಬಲಿಯುತ್ತಿದ್ದ ಕಾಲದಲ್ಲಿ ಹುಟ್ಟಿದ ಮುಖ್ಯ ಪ್ರಶ್ನೆಯಾಗಿತ್ತು. ಆಗ ಅದಕ್ಕೊಂದು ಬೌದ್ಧಿಕ ಸಂದರ್ಭವೂ ಇತ್ತು. ಅದಕ್ಕೆ ತಕ್ಕಂತೆ ಆಗ ಆ ಬಗ್ಗೆ ಸಣ್ಣ ಪುಟ್ಟ ಚರ್ಚೆಯೂ ನಡೆದಿದ್ದ ನೆನಪು ನನಗೆ. ಆ ಸಂದರ್ಭದಲ್ಲೇ ಈ ಲೇಖನವನ್ನು ಕೆ.ವಿ. ಸುಬ್ಬಣ್ಣನವರು ಕನ್ನಡಕ್ಕೆ ಅನುವಾದಿಸಿದ್ದರು. ಆದರೆ ಅದು ಕನ್ನಡದಲ್ಲಿ ಅಂತಹ ದೊಡ್ಡ ಚರ್ಚೆಯನ್ನೇನೂ ಹುಟ್ಟುಹಾಕಿದ ನೆನಪು ನನಗಿಲ್ಲ.

ಆ ಪ್ರಶ್ನೆಯನ್ನು ನೀನಾಸಂ ಮತ್ತೆ ಈಗ ಎತ್ತಿರುವ ಮಹತ್ವದ ಬಗ್ಗೆ ಸ್ವತಃ ನೀನಾಸಂ ಏನೂ ಹೇಳಿದಂತಿಲ್ಲ. ಜಾಗತೀಕರಣವು ವಸಾಹತೋತ್ತರ ಚಿಂತನೆಯನ್ನು ಒಯ್ದಿರುವ ಹೊಸ–ಆಧುನಿಕೋತ್ತರ ನೆಲೆಯಲ್ಲಿ–ಈ ಚರ್ಚೆ ಪುನರಾರಂಭಕ್ಕೆ ಅರ್ಹ ಅಥವಾ ಸೂಕ್ತ ಕಾಲ ಎಂದು ಕೆ.ವಿ. ಅಕ್ಷರ ಅವರಿಗೆ ಅನಿಸಿರಬೇಕು. ಅವರು ಶಿಬಿರಕ್ಕೆ ಮುನ್ನ ಅನೌಪಚಾರಿಕವಾಗಿ ಶಿಬಿರದ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದಾಗ ನಾನು ವಿಷಯದಲ್ಲಿನ 'ಭಾರತೀಯ' ಎಂಬುದೇ ಒಂದು ಜಟಿಲ ಮತ್ತು ಸಮಸ್ಯಾತ್ಮಕ ಶಬ್ದ ಮತ್ತು ಅನುಮಾನಾಸ್ಪದ ಪರಿಕಲ್ಪನೆಯಾಗಿದ್ದು, ಆ ಕುರಿತ ಚರ್ಚೆಯ ಈ ಮುಖ್ಯ ನೆಲೆಯೇ ಭದ್ರವಿಲ್ಲದಿರುವಾಗ ಚರ್ಚೆ ಕಷ್ಟವಾಗಬಹುದು ಎಂದೆ. ಸತ್ಯಜಿತ್ ರೇ ಅವರಂತಹ ಸತ್ಯಜಿತ್ ರೇ ಅವರೇ ತಮ್ಮ ಚಲನಚಿತ್ರಗಳನ್ನು ಕುರಿತ ಚರ್ಚೆಯ ಸಂದರ್ಭದಲ್ಲಿ 'ನಾನೊಬ್ಬ ಬಂಗಾಳಿ ನಿರ್ದೇಶಕನೇ ಹೊರತು ಭಾರತೀಯನಲ್ಲ' ಎಂದು ಹೇಳಿದ್ದನ್ನು ನೆನಪಿಸಿದೆ. ಜಾಗತೀಕರಣದ ಹಿಂದಿರುವ ರಾಜಕಾರಣದ ಗುಟ್ಟುಗಳು ರಟ್ಟಾಗುತ್ತಿರುವಂತೆಯೇ ಭಾರತ ಎಂಬುದರ ಹಿಂದಿರುವ ರಾಜಕಾರಣದ ಗುಟ್ಟುಗಳೂ ರಟ್ಟಾಗುತ್ತಿರುವುದನ್ನು ಗಮನಿಸಿದಾಗ ಭಾರತೀಯ ಚಿಂತನ ಕ್ರಮದ ಅನನ್ಯತೆಯನ್ನು ಕುರಿತು ಜಾಗತಿಕ ನೆಲೆಯಲ್ಲಿ–ಅಂದರೆ ರಾಮಾನುಜನ್‌ರಂತೆ–ಚರ್ಚಿಸಲಾಗದೆಂದು ನನ್ನ ಅಭಿಮತವಾಗಿತ್ತು. ರಾಮಾನುಜನ್ ಭಾರತದ ಹೊರಗಿದ್ದುಕೊಂಡು ಓರ್ವ ಅಂತಾರಾಷ್ಟ್ರೀಯ ವಿದ್ವಾಂಸನಾಗಿ ಈ ಪ್ರಶ್ನೆಯನ್ನು ಎತ್ತಿದುದಕ್ಕೆ ಒಂದು ಸ್ಥಾನಿಕವಾದ ಪರಿಪ್ರೇಕ್ಷ್ಯವಿದ್ದುದರಿಂದ ಅದು ಆಗ ಅಸಂಗತವಾಗೇನೂ ಕಾಣುತ್ತಿರಲಿಲ್ಲ. ಆದರೆ ಈಗ ಈ ಜಾಗತೀಕರಣದ ಸಂದರ್ಭದಲ್ಲಿ, ಭಾರತದೊಳಗಿದ್ದುಕೊಂಡೇ ಈ ಪ್ರಶ್ನೆಯನ್ನು ಎತ್ತಿಕೊಂಡಾಗ ಈ ಚರ್ಚೆಯು ಪರಿಪ್ರೇಕ್ಷ್ಯವೇ ಬೇರೆಯಾಗಿ, ಚರ್ಚೆ ಮೊದಲಾಗಿ ಭಾರತವೆಂದರೇನೆಂಬುದನ್ನು ಮೊದಲು ನಿರ್ವಚಿಸಿಕೊಂಡು ನಂತರ ಚರ್ಚೆ ಮುಂದುವರೆಯಬೇಕಾಗುತ್ತದೆ ಎಂದು ನನಗನ್ನಿಸಿತು.

ಶಿಬಿರಕ್ಕೆ ಎರಡು ದಿನ ಹೋಗಿದ್ದೆ. ಶಿವ ವಿಶ್ವನಾಥನ್, ಗೋಪಾಲ ಗುರು, ಸುಂದರ ಸಾರುಕ್ಕೈ, ರಘುರಾಂ ರಾಜು, ಪ್ರಭಾಕರ ಜೋಷಿ, ಲಕ್ಷ್ಮೀಶ ತೋಳ್ಪಾಡಿ ಮುಂತಾದವರ ಮಾತುಗಳನ್ನು ಕೇಳಿದೆ. ಎಲ್ಲರೂ ಘನ ವಿದ್ವಾಂಸರೇ. ಎಲ್ಲರೂ ವಿದ್ವತ್ಪೂರ್ಣವಾಗಿಯೇ ಮಾತನಾಡಿದರು. ಆದರೆ ಎಲ್ಲರೂ ಭಾರತ ಕುರಿತ ಸ್ಥಾಪಿತ ಗ್ರಹೀತದೊಂದಿಗೇ ಅದರ ಚಿಂತನಾ ಕ್ರಮದ ಚಹರೆಗಳನ್ನು–ಗುಣ ವಿಶೇಷಗಳನ್ನು ಗುರುತಿಸುತ್ತಾ ಹೋದರೇ ಹೊರತು ಯಾರೂ ಪ್ರಧಾನ ಪ್ರಶ್ನೆಯ ಹತ್ತಿರ ಕೂಡ ಸುಳಿಯಲಿಲ್ಲ! ಇದಕ್ಕೆ ನನ್ನ ಬಳಿ ಅಕ್ಷರ ನೀಡಿದ ವಿವರಣೆ: ನಾವು ಏನೋ ಹೇಳಿದರೆ, ಉಪನ್ಯಾಸಕರು ಇನ್ನೇನನ್ನೋ ಅರ್ಥ ಮಾಡಿಕೊಂಡು ಮಾತನಾಡುತ್ತಾರೆ. ಇಷ್ಟಾದರೂ, ಪ್ರಶ್ನೆ ಕೇಳಿ ಒಂದಿಷ್ಟು ಚರ್ಚೆಗೆ ಕಾರಣರಾದ ಕೆಲ 'ಪ್ರತಿಷ್ಠಿತ'ರ ಹೊರತಾಗಿ ಶಿಬಿರಾರ್ಥಿಗಳ ಮುಖ್ಯವಾಹಿನಿಗೆ ಇವರೆಲ್ಲರ ಮಾತುಗಳು ಎಷ್ಟರ ಮಟ್ಟಿಗೆ ತಲುಪಿತೋ ನಾ ಕಾಣೆ.

ನಿಜವಾಗಿ ಶಿಬಿರದ ಪ್ರಧಾನ ವಿಷಯಕ್ಕೆ ಸಂಬಂಧಿಸಿದಂತೆ ಪರೋಕ್ಷವಾಗಿಯಾದರೂ ಒಂದು ಮುಖ್ಯ ಮಾತನಾಡಿದಂತೆ ತೋರಿದವರು, ಶಿಬಿರದ ಕೊನೆಯೆರಡು ದಿನಗಳಿಗೆ ಬಂದ ಆಶೀಶ್ ನಂದಿಯವರು. ಅವರ ಮಾತುಗಳ ಸಾರಾಂಶವನ್ನು ನಾನು ಪತ್ರಿಕೆಗಳಲ್ಲಿ ಓದಿದೆ. ಅವರು ಗಾಂಧಿ ಚಿಂತನೆ ನಮ್ಮ ಸಂವಿಧಾನದಲ್ಲಿ ಅಳವಡಿಕೆಯಾಗದಿರುವ ಲೋಪದ ಬಗ್ಗೆ–ತುಂಬಾ ತಡವಾಗಿಯಾದರೂ–ಮಾತನಾಡಿದ್ದರು. ಭಾರತವನ್ನು ಕೇವಲ ಒಂದು ಬೌದ್ಧಿಕ ವಿದ್ಯಮಾನವಾಗಿ ನೋಡಲು ನಿರಾಕರಿಸಿದ ತನ್ನ ಅಸಲೀ ಚಿಂತನೆಯ ಕ್ರಮದಲ್ಲೇ ಗಾಂಧಿ ಭಾರತವೆಂದರೇನು ಎಂದು ಅರ್ಥ ಮಾಡಿಕೊಳ್ಳುವ ನಿಜವಾದ ಪ್ರಯತ್ನ ಮಾಡಿದ್ದರು. ರಾಷ್ಟವೊಂದನ್ನು ಅಥವಾ ಅದರ ಚಲನಾತ್ಮಕತೆಯನ್ನು ಪಶ್ಚಿಮದ ನೋಟಕ್ರಮಕ್ಕೆ ವಿರುದ್ಧವಾಗಿ ನೋಡುವ ಕ್ರಮವಿದು. ಈ ದೃಷ್ಟಿಯಿಂದ ನೋಡಿದಾಗ ಈ ಶಿಬಿರ ಚರ್ಚಿಸ ಹೊರಟ ರಾಮಾನುಜನ್‌ರ ಮೂಲ ಪ್ರಶ್ನೆಯೇ ಅ–ಭಾರತೀಯವಾಗಿತ್ತು. ಅದು, 'I think, so I am' ಎಂಬ ಡೆಕಾರ್ಟ್‌ನ ತತ್ವದ ತಾರ್ಕಿಕತೆಯನ್ನು ಅನುಸರಿಸಿ, ಸಹಜವಾಗಿಯೇ ಅಂತಹುದೇ ತರ್ಕಕ್ಕೆ ಸಮ್ಮತವಾಗಬಹುದಾದ 'ನಾಗರಿಕ' ಉತ್ತರವನ್ನು ಬೇಡುವ ರೀತಿಯಲ್ಲಿ ಸಂಯೋಜಿತವಾಗಿತ್ತು. ಆದರೆ ಭಾರತ ಡೆಕಾರ್ಟನ ತತ್ವವನ್ನು ನಂಬಿಯೇನೂ ಬದುಕಿಲ್ಲ. ಗಾಂಧಿ ಇನ್ನೂ ಉಸಿರಾಡುತ್ತಿರುವ ಅವರ 'ಹಿಂದ್ ಸ್ವರಾಜ್'ನಲ್ಲಿ ವ್ಯಕ್ತವಾಗಿರುವಂತೆ ಅವರಿಗೆ ಸ್ವಾತಂತ್ರ್ಯ ಎಂದರೆ ಬ್ರಿಟಿಷರ ನಿರ್ಗಮನದಷ್ಟೇ ಮುಖ್ಯವಾಗಿ, ಬ್ರಿಟಿಷ್ ನಾಗರೀಕತೆಯಿಂದ ಕಿಂಚಿತ್ತೂ ಪ್ರಭಾವಿತರಾಗದಿರುವ (ರೈತ)ಭಾರತವನ್ನು ಬ್ರಿಟಿಷ್ ಪ್ರಭುತ್ವದ ನಾಗರೀಕತೆಗೆ ಮಾರು ಹೋಗಿದ್ದ ಭಾರತೀಯರಿಂದ ರಕ್ಷಿಸುವುದೇ ಆಗಿತ್ತು. ಆದರೆ ಆಶೀಶ್ ನಂದಿಯವರ ಹೊರತಾಗಿ ಶಿಬಿರದ ಇತರ ಯಾರೂ ಗಾಂಧಿಯ ಈ ಭಾರತದ ಕಡೆ ಸುಳಿಯಲೇ ಇಲ್ಲ. ಗಾಂಧಿಯ ಹೆಸರನ್ನೂ ಎತ್ತಲಿಲ್ಲ.

ಹಾಗಾಗಿಯೇ ಚರ್ಚೆ ಭಾರತೀಯ ತತ್ವಶಾಸ್ತ್ರದ ಮಾದರಿ ಪಠ್ಯಪುಸ್ತಕದ ಚೌಕಟ್ಟಿನೊಳಗೇ ಸಿಕ್ಕಿಕೊಂಡು ಸೂತ್ರಬದ್ಧ ಉತ್ತರಕ್ಕಾಗಿ ತೊಳಲಾಡಿ ಆಯಾಸಪಟ್ಟುಕೊಂಡಂತೆ ಕಂಡಿತು. ಆ ಆಯಾಸ ಘನವಾದ ಬೌದ್ಧಿಕ ಆಯಾಸವೇ ಆಗಿದ್ದರೂ! ಆದರೆ ಶಿಬಿರ ನಿಜವಾಗಿ ಆಶೀಶ್ ನಂದಿಯವರು ಬರುವ ಮುನ್ನವೇ ಒಮ್ಮೆ ಸರಿ ದಾರಿಯ ಹತ್ತಿರಕ್ಕೇ ಬಂದಂತೆ ಕಂಡಿತ್ತು.. ಆದರೆ ಅದು ದಾರಿ ತೋರಿಸುವ ತೋರುಗೈಯಾಗಿ ಶಿಬಿರದಲ್ಲಿ ಅಳವಡಿಕೆಯಾಗಿಲಿಲ್ಲ. ಅದು ಶಿಬಿರದ ಮಧ್ಯೆ ಪ್ರದರ್ಶಿತವಾದ 'ಇಲ್ಲಿಯ ತೀರ್ಪು' ಎಂಬ ಮಾಸ್ತಿಯವರ ಸಣ್ಣ ಕತೆಯನ್ನು ಆಧರಿಸಿದ ಕಿರುನಾಟಕವನ್ನು ಚರ್ಚೆಗೆ(ಸಂಜೆಯ ದೊಡ್ಡ ನಾಟಕಗಳನ್ನು ಕುರಿತ ವರ್ಣನಾತ್ಮಕ ಚರ್ಚೆಯ ಬದಲಿಗೆ) ಎತ್ತಿಕೊಂಡು ಆ ನಾಟಕದಲ್ಲಿ ಬರುವ ತಿಮ್ಮಾಬೋಯಿ ಮತ್ತು ರಾಮಾಬೋಯಿಗಳ 'ವಿವೇಚನೆ'ಯನ್ನು ಚರ್ಚೆಗೆ ಒಡ್ಡಿದ್ದರೆ ಸಾಕಿತ್ತು, ಶಿವ ವಿಶ್ವನಾಥನ್–ಸಾರುಕ್ಕೈಗಳು ಹೇಳಲಾಗದ್ದೆಲ್ಲ ಈ ನಾಟಕವನ್ನು ಮನದುಂಬಿಕೊಂಡು ನೋಡಿದ ಶಿಬಿರಾರ್ಥಿಗಳ ಬಾಯಿಂದಲೇ ಹೊರಹೊಮ್ಮುತ್ತಿತ್ತು. ಆಗ ಚರ್ಚೆ ಸಹಜವಾಗಿಯೇ ನಮ್ಮ ಜಾತಿ ಪದ್ಧತಿಯ ಕಡೆಗೂ ಹೊರಳಿ ಒಂದಿಷ್ಟು ನಿಜಸತ್ವವನ್ನು ಪಡೆದುಕೊಳ್ಳುತ್ತಿತ್ತು. ನೀನಾಸಂ ಏನಾದರೂ, ನಮ್ಮ ಚಿಂತನಾ ಕ್ರಮಕ್ಕೂ ನಮ್ಮ ಜಾತಿ ಪದ್ಧತಿಗೂ ಏನೂ ಸಂಬಂಧವೇ ಇಲ್ಲ ಎಂದು ಭಾವಿಸಿದೆಯೇ? ಪುರೋಹಿತರುಗಳಿಗೂ ಚಿಂತನೆಗೂ ಅಂಥ ಸಂಬಂಧವೇನೂ ಇರಲಾರದು, ಅವರ ಹುಟ್ಟು ಜಾತಿ ಯಾವುದೇ ಆಗಿದ್ದರೂ.

ಅಥವಾ ಶಿಬಿರದಲ್ಲಿ ಒಂದೆರಡು ಗೋಷ್ಠಿಗಳಲ್ಲಾದರೂ ನಮ್ಮ ಒಂದೆರಡು ಅಭಿಜಾತ ಮಹಾಕಾವ್ಯ(ಅವೈದಿಕದವೂ ಸೇರಿದಂತೆ) ಜನಪದ ಮಹಾಕಾವ್ಯ ಮತ್ತು ಪ್ರೇಂಚಂದ್, ಟ್ಯಾಗೋರ್, ಮಾಸ್ತಿ ಮತ್ತು ಕುವೆಂಪು ಅವರ ಆಯ್ದ ಕೃತಿಗಳನ್ನು ಚರ್ಚೆಗೆ ಇಟ್ಟಿದ್ದರೂ ಚರ್ಚೆಗೆ ಒಂದು ದಿಕ್ಕು ದೊರಕುತ್ತಿತ್ತು. ಉದಾಹರಣೆಗೆ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನೇ ಒಂದು ಪಠ್ಯವಾಗಿ ತೆಗೆದುಕೊಂಡು ಅದನ್ನು ತಾತ್ವಿಕವಾದ





ಚರ್ಚೆಗೆ ಈಡು ಮಾಡಿದ್ದರೆ, ಈ ಇಡೀ ಶಿಬಿರದಲ್ಲಿ ಏನು ಮಂಥನ ನಡೆದು ವಿಚಾರಾಮೃತ ಉಕ್ಕಿತೋ ಅದಕ್ಕಿಂತ ಹೆಚ್ಚು ಕುತೂಹಲಕಾರಿ ಮತ್ತು ಪರಿಣಾಮಕಾರಿ ಆದ ಅಮೃತ ದಕ್ಕುತ್ತಿತ್ತು ಎಂದು ನನಗನ್ನಿಸಿತು. ಏಕೆಂದರೆ ಶಿಬಿರಾರ್ಥಿಗಳೇ ಶಿಬಿರದ ಮುಖ್ಯ ಗಮನವಾಗಿದ್ದಲ್ಲಿ, ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಚರ್ಚೆ ನಡೆಯಬೇಕಾಗುತ್ತದೆ. ಶಿಬಿರದುದ್ದಕ್ಕೂ ವೇದ, ಉಪನಿಷತ್ತು, ಪುರಾಣ, ಶಾಸ್ತ್ರ, ಆಗಮ, ಆಪೋಹ, ಬುದ್ಧ, ಜೈನ, ಸಾಂಖ್ಯ, ಚಾರ್ವಾಕ, ಕುಮಾರಿಲ ಭಟ್ಟ ಇತ್ಯಾದಿ ಹೆಸರುಗಳನ್ನು ಎತ್ತಿಕೊಂಡು ಪುಂಖಾನುಪುಂಖವಾಗಿ ಮಂತ್ರ–ಶ್ಲೋಕ–ಸೂತ್ರಾದಿಗಳನ್ನು ಉಲ್ಲೇಖಿಸುತ್ತಾ ಶಿಬಿರಾರ್ಥಿಗಳಿಗೆ ಬೌದ್ಧಿಕ ಮಂಕು ಹಿಡಿಸುವುದರಿಂದ ಏನು ಪ್ರಯೋಜನ? ಉದಾಹರಣೆಗೆ ಪ್ರಭಾಕರ ಜೋಷಿ–ಲಕ್ಷೀಶ ತೋಳ್ಪಾಡಿಯವರ ಏಕಮುಖವಾದ ಜೋಡಿ ಭಾಷಣ ಮಾಹಿತಿ ಮತ್ತು ಬೋಧನೆಯ ಮಟ್ಟಕ್ಕಿಂತ ಮೇಲೇರಲಾಗಲಿಲ್ಲ ಏಕೆ? ಅದು ವಿಷಯದ ಸಂಪೂರ್ಣ ಅಪರಿಚಿತತೆಯಿಂದಾಗಿ ಮೂಲಸ್ವರೂಪದಲ್ಲೇ participatoryಯಾಗಿರಲಿಲ್ಲ ಎಂಬುದೂ ಒಂದು ಕಾರಣ.

ಹಾಗೆ ನೋಡಿದರೆ ಪ್ರಭಾಕರ ಜೋಷಿಯವರ ಭಾಷಣ ಒಂದು ರೀತಿಯಲ್ಲಿ participatoryಯಾಗಿತ್ತು ಎಂದೇ ಹೇಳಬೇಕು. ಎಷ್ಟಾದರೂ ಅವರದ್ದು ತಾಳಮದ್ದಲೆ ಶೈಲಿಯಲ್ಲವೇ? ಅವರು ಒಂದೇ ಸಮನೆ ಬಿಡುತ್ತಿದ್ದ ಮಂತ್ರ–ಶ್ಲೋಕಗಳ ಬಾಣ ಬಿರುಸುಗಳ ವಾಗ್ವೈಖರಿಯಲ್ಲಿ ಭಾರತೀಯ ಪರಂಪರೆಯ ಹೆಮ್ಮೆಯನ್ನು ಗುರುತಿಸಿ ಹಿಗ್ಗಿ ಹೀರೇಕಾಯಿಯಾದ ನನ್ನ ಪಕ್ಕ ಕೂತಿದ್ದ ಮಹಿಳೆಯೊಬ್ಬರು ಆ ಹೆಮ್ಮೆಯನ್ನೆಲ್ಲ ಟಿಪ್ಪಣಿ ಮಾಡಿಕೊಳ್ಳಲು ಹವಣಿಸುತ್ತಾ; ಆದರೆ ಜೋಷಿಯವರ ವೇಗಕ್ಕೆ ಹೊಂದಿಕೊಳ್ಳಲಾಗದೆ ತಮ್ಮ ಟಿಪ್ಪಣಿಗಳು, ಅಪೂರ್ಣ ಮತ್ತು ಅಸ್ತವ್ಯಸ್ತವಾಗುತ್ತಿದ್ದುದರ ಬಗ್ಗೆ ಅಭಿಮಾನ–ಆತಂಕಗಳಿಗೆ ಸಿಕ್ಕಿ ವಿಚಿತ್ರವಾಗಿ ಭುಸುಗುಡುತ್ತಿದ್ದುದನ್ನು ಗಮನಿಸುವುದೇ ಒಂದೆ ಚೆಂದವಾಗಿತ್ತು!

ಇರಲಿ. ಇದು ಎಷ್ಟಾದರೂ ನೀನಾಸಂ ಶಿಬಿರ. ಅದಕ್ಕೊಂದು ಸಂಪ್ರದಾಯವಿದೆ. ಹಾಗಾಗಿ ಅದಕ್ಕೆ ತನ್ನದೇ ಆದ ಮಡಿ–ಮೈಲಿಗೆಗಳೂ ಇವೆ. ಅವೇನೂ ಭೌತಿಕ ಮಡಿ–ಮೈಲಿಗೆಗಳಲ್ಲವಾದ್ದರಿಂದ, ಆ ಮಡಿ–ಮೈಲಿಗೆಗಳನ್ನು ಒಪ್ಪಿಕೊಂಡು ಆ ಚೌಕಟ್ಟಿನಲ್ಲಿ ನಡೆಯುವ ಸಂಸ್ಕೃತಿ ಶಿಬಿರವೆಂಬ ಈ ಬೌದ್ಧಿಕ ಆಟವನ್ನು ನೋಡುವುದೂ ಒಂದು ಖುಷಿಯೇ. ಕಾರಣ, ಕರ್ನಾಟಕದ ಇತರ ವಲಯಗಳಲ್ಲಿ–ಅಕಾಡೆಮಿಗಳು, ವಿಶ್ವವಿದ್ಯಾನಿಲಯಗಳು ಇತ್ಯಾದಿ–ಬೌದ್ಧಿಕ ಚಟವಟಿಕೆಯ ಹೆಸರಿನಲ್ಲಿ ನಡೆಯುತ್ತಿರುವ ಆಟ ಪಾಠಗಳನ್ನು ನೋಡಿದರೆ ಜಿಗುಪ್ಸೆ ಹುಟ್ಟುತ್ತದೆ. ಆದರೆ ಇಲ್ಲಿ ಬೌದ್ಧಿಕತೆ ತನ್ನೆಲ್ಲ ಗಾಂಭೀರ್ಯದೊಂದಿಗೆ ತನ್ನದೇ ಆದ ಒಂದು ಶಿಸ್ತಿನಲ್ಲಿ ಉಳಿದು ಬೆಳೆಯುತ್ತಿರುವುದನ್ನು ನೋಡಿದರೆ ಸಂತೋಷವೇ ಆಗುತ್ತದೆ. ನಿಮ್ಮ ಮನಸ್ಸು ಎಲ್ಲೆ ಮೀರಿ ಹಾರುತ್ತದೆ. ಈ ಬಾರಿ ನಾನು ಇಷ್ಟು ಯೋಚಿಸಲು ಈ ಶಿಬಿರ ಪ್ರೇರಣೆ ನೀಡಿದೆಯಲ್ಲಾ, ಇದೂ ಈ ಶಿಬಿರದ ಪ್ರತಿಫಲವೇ ಎಂದು ನಾನು ಭಾವಿಸಿದ್ದೇನೆ. ಮುಂದಿನ ವರ್ಷದಿಂದ ಶಿಬಿರದ ಅವಧಿ ಕಡಿಮೆ ಮಾಡಿ, ಅದರ ಸ್ವರೂಪವನ್ನು ಬದಲಿಸುವ ಯೋಚನೆ ಇದೆಯೆಂದು ಅಕ್ಷರ ಹೇಳಿದರು. ನಾವೆಲ್ಲ ಕುತೂಹಲದಿಂದ ಕಾಯಬಹುದು. ಏಕೆಂದರೆ ಅದರೆಲ್ಲ ಮಿತಿಗಳೊಂದಿಗೂ, ಕರ್ನಾಟಕದಲ್ಲಿ ಉಳಿದಿರುವ ನಿಜವಾದ ಬೌದ್ಧಿಕ ಕೇಂದ್ರ ಇದೊಂದೇ. ಅದನ್ನು ವಿಮರ್ಶಿಸುತ್ತಲೇ ನಾವು ಕಾಪಾಡಬೇಕಿದೆ.

ಶಿಬಿರದ ಭಾಗವಾಗಿ ನಡೆದ ಮೂರು ಸಂಜೆಯ ಕನ್ನಡ ನಾಟಕಗಳ ಪೈಕಿ ಎರಡನ್ನು ನಾನು ನೋಡಿದೆ. ರಘುನಂದನರ 'ನಮ್ಮ ಸಂಸಾರ'ವನ್ನು ಅವರ ಅಭಿಮಾನಿಗಳ ಶಿಫಾರ್ಸಿನಿಂದಾಗಿ ಮತ್ತು ಸ್ವತಃ ಅವರೇ ನಾನು ಅದನ್ನು ನೋಡಬಾರದೆಂದು ಬಯಸಿದಂತೆ ತೋರಿದ್ದರಿಂದ ನೋಡಲಿಲ್ಲ. ಈ ಹಿಂದಿನ ಅವರ 'ಪರಿಮಳದವರು' ಪ್ರಯೋಗದ ನೆನಪೂ ಇದಕ್ಕೆ ಕಾರಣವಿರಬಹುದು. ಅದೇನೇ ಇರಲಿ, ಹೆಗ್ಗೋಡು ಮತ್ತು ಸುತ್ತಮುತ್ತಲಿನ ಹಳ್ಳಿಗಳ ಸಾರ್ವಜನಿಕರೇ ಮೌನೇಶ್ ಬಡಿಗೇರರ ನಿರ್ದೇಶನದಲ್ಲಿ ಆಡಿದ ರವೀಂದ್ರನಾಥ ಟ್ಯಾಗೂರರ 'ಚಿರಕುಮಾರ ಸಭಾ'ದ ಕನ್ನಡ ಅವತರಣಿಕೆ ಒಂದು ಲಘು ಮನರಂಜನೆಯ ನಾಟಕ. ಆದರೂ ಅದು ಎರಡು ಕಾರಣಗಳಿಗಾಗಿ ನನ್ನ ಗಮನ ಸೆಳೆಯಿತು. ಒಂದು, ಇದನ್ನು ಟ್ಯಾಗೂರ್ ವಿವೇಕಾನಂದರ ಧೀರ ಗಂಭೀರ ಧರ್ಮ ಪ್ರಚಾರದ ಭಾವ–ಭಂಗಿಗಳನ್ನು ಚುಡಾಯಿಸಲು ಬರೆದದ್ದು ಎಂಬ ವ್ಯಾಖ್ಯಾನದ ಹಿನ್ನೆಲೆಯಲ್ಲಿ ವಂಗ ನವೋದಯದ ಜೀವಂತಿಕೆಯನ್ನು ಸೂಚಿಸುತ್ತದೆ ಎಂಬುದು. ಇನ್ನೊಂದು, ನೀನಾಸಂ ಹೆಗ್ಗೋಡಿನಲ್ಲಿದೆ ಎಂಬ ಕಾರಣಕ್ಕೇ ಅದರ ಗಾಳಿಗೆ ಸಿಕ್ಕವರಂತೆ ಈ ಊರಿನ ಮತ್ತು ಸುತ್ತಮುತ್ತಲಿನ ಜನ ಎಂತಹ ಅದ್ಭುತ ರಂಗ ಪ್ರಜ್ಞೆಯೊಂದಿಗೆ ಎಷ್ಟು ಒಳ್ಳೆಯ ನಟ–ನಟಿಯರಾಗಿದ್ದಾರೆ ಎಂದು ಆಶ್ಚರ್ಯ ಹುಟ್ಟಿಸುವ ಕಾರಣಕ್ಕೆ.

ಇನ್ನು ಬನ್ನಂಜೆ ಗೋವಿಂದಾಚಾರ್ಯರ ಅತಿ ಸೊಬಗಿನ ಕನ್ನಡದಲ್ಲಿ ಅನುವಾದಿತವಾಗಿರುವ ಭವಭೂತಿಯ ಸಂಸ್ಕೃತ ನಾಟಕ 'ಉತ್ತರ ರಾಮಚರಿತೆ' ಬಿ.ಆರ್ ವೆಂಕಟರಮಣ ಐತಾಳರ ನಿರ್ದೇಶನದಲ್ಲಿ ಅಚ್ಚುಕಟ್ಟಾಗಿ ಪ್ರದರ್ಶಿತಗೊಂಡಿತು. ನೀನಾಸಂ ತಿರುಗಾಟದ ರಂಗತಂಡದ ಭಾವಪೂರ್ಣ ಅಭಿನಯ(ವಿಶೇಷವಾಗಿ ಸೀತೆ ಪಾತ್ರದ ತೇಜು) ಶಿಶಿರ–ವಿದ್ಯಾ–ಅಕ್ಷರರು ಸಂಯೋಜಿಸಿರುವ ಅಲ್ಲಲ್ಲಿ ಪಾಶ್ಚಿಮಾತ್ಯ ಲಯಗಳೊಂದಿಗೆ ಪಲುಕಾಡುವ ಮೃದುಮಧುರ ಸಂಗೀತ ಮತ್ತು ಐತಾಳರ ಮೂಲ ಶಕ್ತಿಯಾದ ಯಕ್ಷಗಾನ ಮತ್ತು ಕಥಕ್ಕಳಿಯ ರಂಗ ಪಟ್ಟುಗಳು ಒಂದು ಘನವಾದ ಮೆಲೋಡ್ರಾಮವನ್ನು ಸೃಷ್ಟಿಸಿ, ನಾಟಕದ ಒಳಗಿಂದೇಳುವ ಹಲವು ಪ್ರಶ್ನೆಗಳನ್ನು ಮುಳುಗಿಸುವ ಪ್ರಯತ್ನವೂ ಇಲ್ಲಿ ನಡೆದಂತೆ ನನಗೆ ತೋರಿತು.

ಐತಾಳರು ಭವಭೂತಿಗೆ ನಿಷ್ಠರಾಗಿದ್ದಾರೆ ಎಂದು ಭಾವಿಸಿ ಹೇಳುವುದಾದರೆ, ರಾಮಾಯಣದ ಎಲ್ಲ ಸಾಂಪ್ರದಾಯಿಕ ಆವೃತ್ತಿಗಳಂತೆಯೇ ಇದು ಕೂಡಾ ರಾಮನನ್ನು, ಶೂದ್ರ ಮತ್ತು ಹೆಣ್ಣಿಗೆ ಸಂಬಂಧಿಸಿದಂತಿರುವ ಹಲವು ರೀತಿಯ ವಧೆ, ಹಿಂಸೆ ಮತ್ತು ಪರಿತ್ಯಾಗಗಳಿಂದ ಕೂಡಿದ ಅವನ 'ಅಪರಾಧ ಪರಂಪರೆಯ ಹೊರತಾಗಿಯೂ–ಅವುಗಳ ಹಿನ್ನೆಲೆಗಳನ್ನು ಇಲ್ಲಿ ನಿಸರ್ಗದ ಭಿತ್ತಿಯಲ್ಲಿ ಹೆಚ್ಚು ಸಂಕೀರ್ಣಗೊಳಿಸಿ ನ್ಯಾಯಸಮ್ಮತಗೊಳಿಸುವ ಸಾಹಿತ್ಯಿಕ ಪ್ರಯತ್ನದ ಮೂಲಕ–ಪುಣ್ಯ ಪುರುಷನಂತೆ ಮಂಡಿಸುವ ಪ್ರಯತ್ನವೇ ಆಗಿದೆ ಎಂದೆನ್ನಿಸದಿರದು. ನಾನು ನೋಡಿದ, ಓದಿದ, ಕೇಳಿದ ರಾಮಾಯಣ ಕಥೆಯ ಯಾವ ಆವೃತ್ತಿಯಲ್ಲೂ ರಾಮನ ಈ ಅಪರಾಧಗಳನ್ನು ಸಮರ್ಥಿಸಲು ಬಳಸಲಾಗುವ ಪ್ರಜಾವಾತ್ಸಲ್ಯದ ಯಾವೊಂದು ಜೀವಂತ ದೃಷ್ಟಾಂತವೂ ನನಗೆ ಕಂಡಿಲ್ಲ. ಹಾಗಿದ್ದೂ ಏಕೆ ಈ ಪ್ರಯತ್ನ? ಈ ನಾಟಕದಲ್ಲಂತೂ ರಾಮ ತೀವ್ರ ಮಾನಸಿಕ ಅಸ್ವಸ್ಥತೆಯಿಂದ ಬಳಲುವ ದುರಂತ ನಾಯಕನಂತೆಯೇ ಕಾಣುತ್ತಾನೆ

ಪದೇ ಪದೇ ನನಗೆ ಅನ್ನಿಸುವುದು, ರಾಮಾಯಣ ಸಂಪ್ರದಾಯವು ಮೂಲತಃ ಗಂಡು ಉತ್ತರವು ಹೆಣ್ಣು ದಕ್ಷಿಣದ ಮೇಲೆ ನಡೆಸಿದ ವಸಿಷ್ಠ ರಾಜಕಾರಣವನ್ನು ನ್ಯಾಯಸಮ್ಮತಗೊಳಿಸುವ ಒಂದು ನಿರಂತರ ಸಾಂಸ್ಕೃತಿಕ ಯೋಜನೆಯೇ ಆಗಿದೆ. ಭವಭೂತಿಯ ಪ್ರಯತ್ನ ಹೆಚ್ಚು 'ಆಧುನಿಕ'ವಾಗಿದೆ ಅಷ್ಟೆ.

ಆದರೆ ನನ್ನ ಮುಖ್ಯ ಪ್ರಶ್ನೆ: ಈ ಬಾರಿಯ ಸಂಸ್ಕೃತಿ ಶಿಬಿರ ಚರ್ಚಿಸಿದ ಭಾರತೀಯ ಚಿಂತನ ಕ್ರಮದ ರೀತಿ–ನೀತಿಗಳಿಗೂ ಈ ನಾಟಕದ ಸ್ವರೂಪಕ್ಕೂ ಏನಾದರೂ ಸಂಬಂಧವಿರಬಹುದಾ ಎಂಬುದು.

**–ಡಿ.ಎಸ್. ನಾಗಭೂಷಣ**

## ಪುಸ್ತಕಾವಲೋಕನ

ಪು: **ಆನಂದ ತಾಂಡವ** (ಕಲಾ ಚಿಂತಕ ಆನಂದ ಕುಮಾರಸ್ವಾಮಿ ಮರುಶೋಧನೆ) ಅಭಿನವ ಚಾತುರ್ಮಾಸಿಕ ಸಂ: ೨೦-೨೧, ಸಂಚಿಕೆ-೩, ಪ್ರಧಾನ ಸಂ. ನ. **ರವಿಕುಮಾರ** ಪ್ರ: **ಅಭಿನವ ಪ್ರಕಾಶನ,** ಬೆಂಗಳೂರು

# ಭಾರತೀಯ ಕಲಾ ಮೀಮಾಂಸೆಯ ಹೊಸ ವ್ಯಾಖ್ಯಾನ




ಆನಂದ ಕುಮಾರಸ್ವಾಮಿಯವರು ರಾಷ್ಟ್ರೋದಯದ ಕಾಲದಲ್ಲಿ ಬದುಕಿದ್ದ ಕಲಾಚಿಂತಕ. ಅವರು ಮಂಡಿಸಿದ ಕಲಾಮೀಮಾಂಸೆ ಭಾರತೀಯ ಸಂಸ್ಕೃತಿಯನ್ನು ಮರುವ್ಯಾಖ್ಯಾನಿಸಿ ಪಶ್ಚಿಮದ ಪಶ್ಚಿಮತ್ವವನ್ನು ಒಡೆದಿತ್ತು. ರಾಷ್ಟ್ರೀಯತೆಯ ಐಕ್ಯತೆಯನ್ನು ತಮ್ಮ ಬಹುಶಿಸ್ತೀಯ ಕಲಾ ಮೀಮಾಂಸೆಯ ಮೂಲಕ ನಿರೂಪಿಸಿದರು. ಭೂಗರ್ಭಶಾಸ್ತ್ರಜ್ಞರಾಗಿದ್ದ ಕುಮಾರಸ್ವಾಮಿ ಅವರು ಭಾರತೀಯ ತತ್ವಶಾಸ್ತ್ರಗಳ ಚಿಂತಕರಾಗಿ, ಚಿತ್ರಕಲೆ, ಕರಕುಶಲಕಲೆ ಮುಂತಾದ ಕಲಾ ಇತಿಹಾಸವನ್ನು ಹಾದು ಕಲಾ ವಿಮರ್ಶಕರಾಗಿ ಕಾಣಿಸಿಕೊಂಡವರು. ಅವರ ವಿಚಿತ್ರ ಆಸಕ್ತಿಯ ಕ್ಷೇತ್ರಗಳ ಅತಿವ್ಯಾಪ್ತಿಯ ಕಾರಣಗಳಿಂದಲೇ ಕುಮಾರಸ್ವಾಮಿಯವರ ಕಲಾ ಮೀಮಾಂಸೆಯನ್ನು ಒಂದು ಶಿಸ್ತಿನ ನೆಲೆಯಲ್ಲಿ ಅರ್ಥೈಸಿಕೊಳ್ಳುವುದು ಕಠಿಣ ಎನ್ನಿಸುತ್ತದೆ. ಆದರೆ ಅವರ ಎಲ್ಲಾ ಕಲಾ ಚಿಂತನೆಯೊಳಗೆ ಒಂದು ಆಧ್ಯಾತ್ಮಿಕ ನೆಲೆಯನ್ನು ಆತ್ಯಂತಿಕವಾಗಿ ಕಂಡುಕೊಳ್ಳುವ ಪ್ರವೃತ್ತಿ ಇದೆ. ಈ ಅಂಶವು ಅವರನ್ನು ಅರ್ಥ ಮಾಡಿಕೊಳ್ಳಲು ಸ್ವಲ್ಪ ಸಹಾಯ ಮಾಡುತ್ತದೆ. ಪ್ರಸ್ತುತ 'ಆನಂದ ತಾಂಡವ' ಪುಸ್ತಕವು ಕುಮಾರಸ್ವಾಮಿಯವರ ಅನೇಕ ಚಿಂತನೆಗಳನ್ನು ಸಾರರೂಪದಲ್ಲಿ ಗ್ರಹಿಸಿದೆ. ಶಿಲ್ಪಕಲೆ, ಚರಿತ್ರೆ, ಸಂಸ್ಕೃತಿ, ಮೀಮಾಂಸೆ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಕೆಲಸ ಮಾಡಿದ ಕುಮಾರಸ್ವಾಮಿಯವರ ವಿದ್ವತ್ತನ್ನು ಪರಿಚಯಿಸುವ ಲೇಖನಗಳು ಇಲ್ಲಿವೆ.

ಮೇಲ್ನೋಟಕ್ಕೆ ಕುಮಾರಸ್ವಾಮಿ ಓರ್ವ ಓರಿಯೆಂಟಲಿಸ್ಟ್ ಎಂಬಂತೆ ಕಾಣುತ್ತಾರೆ. ಅವರು ಬದುಕಿದ್ದು ಬರೆದಿದ್ದು ಪಶ್ಚಿಮದಲ್ಲಿ ನಿಂತು. ಹೀಗೆ ಪಶ್ಚಿಮದಲ್ಲಿ ನೆಲೆನಿಂತು ಪೌರ್ವಾತ್ಯ ಸಂಸ್ಕೃತಿ ಮತ್ತು ಕಲೆಗಳ ಬಗ್ಗೆ ಮಾತನಾಡುವಾಗ ಅವರು ಪಶ್ಚಿಮವೇ ಹಾಕಿಕೊಂಡಿದ್ದ ಕೆಲವು ಮಿತಿಗಳನ್ನು ಮೀರಿದರು. ಅಂದರೆ ಕಲೆ ಮತ್ತು ಸಂಸ್ಕೃತಿಗಳ ನಡುವೆ ಆ ಮೊದಲು ಇದ್ದ ದ್ವಿತ್ವ ಅನಂತರ ಕಲೆ ಮತ್ತು ಸಂಸ್ಕೃತಿಗಳನ್ನು ಬೆಸೆದು ಮಾತನಾಡಬೇಕಾದ ಒತ್ತಡ ಇವುಗಳನ್ನು ಮೀರಿ ಕುಮಾರಸ್ವಾಮಿ ದ್ವಂದ್ವಾತ್ಮಕತೆಯನ್ನು ನೋಡುವ ಹೊಸ ವಿಧಾನವನ್ನು ಪರಿಚಯಿಸಿಕೊಟ್ಟರು. ದ್ವಂದ್ವಗಳು ಪೌರ್ವಾತ್ಯದ ಸಂದರ್ಭದಲ್ಲಿ ಪರಸ್ಪರ ವಿರೋಧಿಯಾಗಿರದೇ ಪೂರಕವಾಗಿರುತ್ತವೆ ಎಂಬುದರಿಂದ ಆಧ್ಯಾತ್ಮಿಕ ಮೂಲ ಗುರಿಯತ್ತ ಕರೆದೊಯ್ದರು. ಇದರಿಂದ ಪಶ್ಚಿಮದ ಗ್ರಹಿಕೆಯ ಅನೇಕ ವಿಸಂಗತಿಗಳು ಕುಮಾರಸ್ವಾಮಿಯವರಲ್ಲಿ ವಿಶಿಷ್ಟತೆಯನ್ನು ಪಡೆದುಕೊಳ್ಳುವಂತಾಯಿತು. ಹೀಗೆ ಕುಮಾರಸ್ವಾಮಿ ಪೌರ್ವಾತ್ಯದ ಹಾಗು ಪಾಶ್ಚಿಮಾತ್ಯದ ಚಿಂತನಾ ಎಲ್ಲೆಗಳನ್ನು ವಿಸ್ತರಿಸಿದರು.

ಆನಂದ ಕುಮಾರಸ್ವಾಮಿಯವರ ಕಲಾಚಿಂತನೆಗಳಿಗೆ ಹಿನ್ನೆಲೆಯಾಗಿ ರಾಷ್ಟ್ರೀಯತೆಯ ಚಾರಿತ್ರಿಕ ಸಂದರ್ಭವಿತ್ತು. ವಸಾಹತೀಕರಣದ ಸಂದರ್ಭವನ್ನು ಅವರು ಗ್ರಹಿಸಿದ ರೀತಿ ವಿಭಿನ್ನವಾಗಿದೆ. ಪಶ್ಚಿಮದ ಆಧುನಿಕತೆಯನ್ನು ಅವರು ಒಪ್ಪಲಿಲ್ಲ. ಆದರೆ ಹಾಗೆಂದು ಅದರ ಪೂರ್ವಪರಂಪರೆಯನ್ನು ಮರೆಯಲಿಲ್ಲ. ಅವರಿಗೆ ಅಲ್ಲಿನ ಪ್ಲೇಟೋನಿಸಂ ಬೇಕು. ರೆನೆಸಾನ್ಸ್ ಕಾಲದ ನಂತರ ಬೆಳವಣಿಗೆಯಾದ ಸೌಂದರ್ಯ ಮೀಮಾಂಸೆಯಲ್ಲಿ ಗ್ರೀಕ್ ಮತ್ತು ರೋಮನ್ ಕಲಾಮೀಮಾಂಸೆ ಬಂದು ಕ್ರಿಶ್ಚಿಯಾನಿಟಿಯ ಜೊತೆಗೆ ಬೆರೆತುಕೊಂಡ ಮಾದರಿಯನ್ನು ಅವರು ಒಪ್ಪಿದ್ದರು. ಅದನ್ನೆ ಅವರು ಪೌರ್ವಾತ್ಯ ಕಲಾಮೀಮಾಂಸೆಯ ಸಂದರ್ಭಕ್ಕೂ ಅನ್ವಯಿಸಿ ಬೆಳೆಸಿದರು. ಇದರ ಹಿಂದೆ ಪೌರ್ವಾತ್ಯ ಕಲಾಮೀಮಾಂಸೆಯನ್ನು ಜಾಗತಿಕವಾಗಿ ಚರ್ಚಿಸುವ ಉದ್ದೇಶವಿದ್ದಿರಬೇಕು. ಕುಮಾರಸ್ವಾಮಿಯವರು ಈ ಬಗೆಯ ವಿಸ್ತಾರವನ್ನು ಬಯಸಿಯೇ ಇದ್ದರು.'

ಕುಮಾರಸ್ವಾಮಿಯವರ ವಿಫುಲ ಓದು ಮತ್ತು ತಿರುಗಾಟದಲ್ಲಿ ಕಂಡ ಎಲ್ಲ ಬಗೆಯ ಭಾರತೀಯ ಕಲೆಗಳನ್ನು ಅವರು ವಿಶ್ವಾತ್ಮಕತೆಯ ಸೂತ್ರದಲ್ಲಿ ಬಂಧಿಸುತ್ತಾರೆ. ಇದರಿಂದ ವಿಭಿನ್ನತೆಗಳೇ ವಿಶಿಷ್ಟವಾಗಿದ್ದ ಅನೇಕ ಕಲೆಗಳು ಭಾರತೀಯ ಸಂದರ್ಭದಲ್ಲಿ ಮುಖಾಮುಖಿಯಾಗುವುದನ್ನು ಅವರು ಗುಡಿಸಿಕೊಂಡು ಹೋಗಿಬಿಡುತ್ತಾರೆ ಎನ್ನುವ ಆರೋಪವಿದೆ. ಆದರೆ ಭಾರತೀಯ ಕಲೆಗಳ ಹಿಂದೆ ಒಂದು ದರ್ಶನ ಇದೆ ಎನ್ನುವುದನ್ನು ಅಪ್ರತಿಮವಾಗಿ ಸಾಧಿಸಿದ ಕೀರ್ತಿ ಕುಮಾರಸ್ವಾಮಿಯವರದು. ಅವರ 'ದಿ ಡಾನ್ಸ್ ಆಫ್ ಶಿವ' ಎನ್ನುವ ಲೇಖನವು ಶಿವನ ನಾಟ್ಯವನ್ನು ತಾತ್ವೀಕರಿಸಿದ ರೀತಿ, ಸೌಂದರ್ಯವನ್ನು ಅವರು ವಾಗ್ವಿಲಾಸ ಎಂದು ನೋಡಿದ್ದು, ರಸಗ್ರಹಣ ಅಂತಿಮವಾಗಿ ನೋಡುಗನ ನೋಟದಲ್ಲಿದೆ ಎನ್ನುವ ತಿಳಿವಳಿಕೆ, ಏಷ್ಯಾದ ಕಲಾಮೀಮಾಂಸೆಯಲ್ಲಿ ಶ್ರೇಷ್ಠ ಮತ್ತು ಕನಿಷ್ಠ ಎಂಬ ವರ್ಗೀಕರಣಗಳಿಲ್ಲ ಎಂದುದು-ಎಲ್ಲವೂ ಹೊಸ ಹೊರಳುಗಳೇ.

ಪ್ರಸಕ್ತ ಪುಸ್ತಕದಲ್ಲಿ ಆನಂದ ಕುಮಾರಸ್ವಾಮಿಯವರ ಕಲಾಮೀಮಾಂಸೆಯ ಬಗೆಗೆ ಅನೇಕ ಚಿಂತಕರು ಬರೆದಿದ್ದಾರೆ. ಈ ಲೇಖನಗಳಲ್ಲಿ ಆನಂದರ ಕಲಾಮೀಮಾಂಸೆಯ ವೈಶಿಷ್ಟ್ಯಗಳನ್ನು ಕಾಣಿಸುವ ಯತ್ನವಿದೆ. ಇಲ್ಲಿರುವ ಲೇಖಕರೆಲ್ಲರು ಆನಂದ ಕುಮಾರಸ್ವಾಮಿಯವರ ಕಲಾಮೀಮಾಂಸೆಯನ್ನು ಒಂದಲ್ಲ ಒಂದು ರೀತಿ ಒಪ್ಪುವವರೆ. ಅವರನ್ನು ಬಹಳ ಚರ್ಚಿಸಲು ಹೋಗಿಲ್ಲ. ಲಕ್ಷ್ಮೀಶ ತೋಳ್ಪಾಡಿಯವರು ಕುಮಾರಸ್ವಾಮಿಯವರ ಮಹತ್ವಾಕಾಂಕ್ಷಿ ಲೇಖನ 'ಡಾನ್ಸ್ ಆಫ್ ಶಿವ' ಅನ್ನು ಕೇಂದ್ರೀಕರಿಸಿ ಅಲ್ಲಿನ 'ಹೊಳಹು' ಮತ್ತು 'ಸಂಕಲ್ಪ'ಗಳ ಬಗ್ಗೆ ಮೆಚ್ಚಿ ಬರೆದಿದ್ದಾರೆ. ತೋಳ್ಪಾಡಿಯವರ ಉಲ್ಲೇಖಗಳಲ್ಲಿ ಕುಮಾರಸ್ವಾಮಿಯರ ತಾತ್ವಿಕತೆ ರೂಪುಗೊಳ್ಳುವುದನ್ನು ಗುರುತಿಸಬಹುದು. ವಿವಿಧ ಕ್ಷೇತ್ರಗಳ ವಿದ್ವಾಂಸರುಗಳಾದ ಎ.ರಂಗನಾಥನ್, ಸೂರ್ಯಪ್ರಕಾಶ ಪಂಡಿತ, ಪಾರುಲ್ ದಾವೆ ಮುಖರ್ಜಿ, ವೈ.ಜಿ.ಮುರಳೀಧರ ಮುಂತಾದವರ ಲೇಖನಗಳು ಕುಮಾರಸ್ವಾಮಿಯವರ ಒಟ್ಟಾರೆ ಗ್ರಹಿಕೆಗಳನ್ನು ಕುರಿತು ಬರೆಯಲ್ಪಟ್ಟಿವೆ. ಆನಂದರು ಸಮರ್ಥಿಸಿದ ಆಧ್ಯಾತ್ಮ ಹೇಗೆ ಪೊಲಿಟಿಕಲ್ ಹಾಗು ಹೇಗೆ ಅಪೊಲಿಟಿಕಲ್ ಆಗಿತ್ತು ಎನ್ನುವುದನ್ನು ಈ ಲೇಖನಗಳು ಬೇರೆ ಬೇರೆ ರೀತಿಯಲ್ಲಿ ನಿರೂಪಿಸಿವೆ. ಚಿದಾನಂದ ದಾಸ್‌ಗುಪ್ತರ ಲೇಖನವು ಕುಮಾರಸ್ವಾಮಿಯವರ ಕಲಾಚಿಂತನೆಗಳಿಂದ ಹೊರಹೊಮ್ಮಿದ ಸಾಮಾಜಿಕ ಆಲೋಚನೆಗಳನ್ನು ಗಮನಿಸಬೇಕೆಂಬ ಅಂಶವನ್ನು ಮುಂದಿಡುತ್ತದೆ. ಷ.ಶೆಟ್ಟರ್ ತಮ್ಮ ಲೇಖನದಲ್ಲಿ 'ಭಾರತೀಯ ಕಲಾವಿದ ತನ್ನ ವಿವರಗಳನ್ನು ಮರೆಯಲ್ಲಿಟ್ಟು ಕಲಾಕೃತಿಯನ್ನು ಮಾತ್ರ ಮುನ್ನೆಲೆಗೆ ತರುತ್ತಾನೆ' ಎಂಬ ಕುಮಾರಸ್ವಾಮಿಯವರ ಮಾತನ್ನು ಹಿಡಿದು ತಾವು ಸಾಮಾಜಿಕ ಆಯಾಮಗಳನ್ನು ಶೋಧಿಸಿದ್ದಾಗಿ ವಿವರಿಸಿದ್ದಾರೆ. ಆದರೆ ಡಿ.ಆರ್.ನಾಗರಾಜ್ ಅವರ ಪ್ರಕಾರ ಪೌರ್ವಾತ್ಯವಾದವನ್ನು ತಮ್ಮ ಕಲಾ ಮೀಮಾಂಸೆಯಲ್ಲಿ ಬೆಳೆಸಿದ ಕುಮಾರಸ್ವಾಮಿ ವಸಾಹತೋತ್ತರ ಚಿಂತಕರಂತೆ ವಸಾಹತೀಕರಣವನ್ನು ಒಂದು ಆಲೋಚನೆಯಾಗಿ ಗ್ರಹಿಸಲಿಲ್ಲ. ಆಧುನಿಕತೆಯನ್ನು ಅವರು ಖಂಡಿಸಿದರಾದರೂ ಅದು ವಸಾಹತೀಕರಣದ ಉತ್ಪನ್ನವಾಗಿ ಅವರಿಗೆ ತೋರಲಿಲ್ಲ. ಕುಮಾರಸ್ವಾಮಿಯವರ ಮೇಲೆ ಡಿ.ಆರ್ ಅವರ ಇನ್ನೊಂದು ಆರೋಪ ಎಂದರೆ ಅವರು ಭಾರತೀಯತೆ, ವಿಶ್ವಾತ್ಮಕತೆಗಳನ್ನು ಎತ್ತಿಹಿಡಿಯುವ ಭರದಲ್ಲಿ ಜಾತಿಪದ್ಧತಿಯಂತಹ ಅನಿಷ್ಟಗಳನ್ನು ಸಮರ್ಥಿಸಿಬಿಟ್ಟರು ಎಂಬುದು. ಇದಕ್ಕೆ ಕುಮಾರಸ್ವಾಮಿ ವಿಶ್ವಾತ್ಮಕತೆಯತ್ತ ತುಡಿಯುತ್ತಿದ್ದುದೇ ಕಾರಣವಿರಬಹುದು.

ಕುಮಾರಸ್ವಾಮಿಯವರ ವಿಮರ್ಶೆ ಯಾಕೆ ಭಾರತೀಯ ಕಲೆಗಳ ಮೇಲೆ ಭಕ್ತಿ ಚಳವಳಿಗಳ ಪರಿಣಾಮವನ್ನು ಸರಿಯಾಗಿ ಗಮನಿಸಲಿಲ್ಲ? ಎಲ್ಲ ಭಾರತೀಯ ಕಲೆಗಳನ್ನೂ ಒಂದೇ ಆಧ್ಯಾತ್ಮಿಕ ಅಚ್ಚಿನಲ್ಲಿ ಗ್ರಹಿಸಿದ್ದು ಸರಿಯೇ? ಎಂಬೆಲ್ಲಾ ಪ್ರಶ್ನೆಗಳು ಇಲ್ಲಿನ ಅವಲೋಕನದಲ್ಲಿ ಹುಟ್ಟುತ್ತವೆ. ಆದರೆ ಅವರು ಬದುಕಿದ ಚಾರಿತ್ರಿಕ ಪರಿಸರದಲ್ಲಿ ಅವರು ಹೆಚ್ಚು ಹೆಚ್ಚು ಪೌರ್ವಾತ್ಯರಾಗಬೇಕಾಗಿದ್ದುದು ಅನಿವಾರ್ಯವಾಗಿತ್ತು ಎನ್ನಿಸುತ್ತದೆ. ವೈರುಧ್ಯಗಳನ್ನು ಮೀರುವ ಹೊಸ ಕಾಣ್ಕೆಯನ್ನು ತಂದುಕೊಟ್ಟ ಕುಮಾರಸ್ವಾಮಿಯವರ ಚದುರಿಹೋದ ಚಿಂತನೆಗಳನ್ನು ಸ್ಥೂಲವಾಗಿ ಗ್ರಹಿಸಲು ಕನ್ನಡದ ಈ ಪುಸ್ತಕ ಸಹಾಯ ಮಾಡುತ್ತದೆ.

**-ತಾರಿಣಿ ಶುಭದಾಯಿನಿ**

'ಹೊಸ ಮನುಷ್ಯ'ದ ಓದುಗರೆಲ್ಲರಿಗೂ
ಕನ್ನಡ ರಾಜ್ಯೋತ್ಸವದ
ಹಾರ್ದಿಕ ಶುಭಾಶಯಗಳು!

ಫ್ಲ್ಯಾಟುಗಳು ಮತ್ತು ಸ್ವತಂತ್ರ ಮನೆಗಳ
ಖರೀದಿ ಮತ್ತು ನಿರ್ಮಾಣಕ್ಕಾಗಿ ಸಂಪರ್ಕಿಸಿ:



**ಶಿವ ಬಿಲ್ಡರ್ಸ್ ಅಂಡ್ ಡೆವಲಪರ್ಸ್**
ಪ್ರೊ: ಶಶಿಧರ್ ಎಸ್, ಕಡಲೂರು
ನಂ.೩, ಎಸ್.ಜೆ.ವಿ. ಕಾಂಪ್ಲೆಕ್ಸ್
ಮೆಂಟಲ್ ಆಸ್ಪತ್ರೆ ಎದುರು, ಧಾರವಾಡ

ಓದುಗರೆಲ್ಲರಿಗೂ
ಕನ್ನಡ ರಾಜ್ಯೋತ್ಸವದ
ಹಾರ್ದಿಕ ಶುಭಾಶಯಗಳು!



–ಎಂ.ಎಸ್. ರುದ್ರೇಶ್ವರಸ್ವಾಮಿ
ವನಜಾಕ್ಷಿ
ಬೆಂಗಳೂರು

**'ಹೊಸ ಮನುಷ್ಯ'ದ ಓದುಗರೆಲ್ಲರಿಗೂ**
**ಕನ್ನಡ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು!**



–ಜೆ.ವಿ.ಮಂಜುನಾಥ್
ಎಂ. ಪ್ರಮೀಳಾ
ಮತ್ತು ಕು. ಪಿ.ಎಂ. ನಿಧಿ
ಚಿತ್ರದುರ್ಗ

**ತಿಂಗಳ ಸಾಲುಗಳು...**



ಬರಿಯ ಜಡರ ಮೈಲಿಗಳಲ್ತು ಕರ್ಣಾಟಕ ದೇಶವಿಸ್ತೀರ್ಣಮಂ
ನೆನೆನೆನೆ ಮನೋಮಯದ ಸಂಸ್ಕೃತಿಕೋಶ ವಿಸ್ತೀರ್ಣಮಂ
ಮರೆಯದಿರು ಜಡರ ಸಂವತ್ಸರ ಶತಮಾನಗಳ ಕಾಲ ವಿಸ್ತೀರ್ಣಮಂ
ಪ್ರಾಣಮಯ, ಭಾವಮಯ ವಿಸ್ತೀರ್ಣಮಂ, ಚಿದಾಕಾಶ ವಿಜ್ಞಾನ ವಿಸ್ತೀರ್ಣಮಂ

–ಕುವೆಂಪು

ಪತ್ರಿಕೆಗೆ ಶುಭ ಕೋರುತ್ತಾ...

–ಬಿ.ಸುರೇಶ
ಡಾ. ವಿಜಯಾ

HOSA MANUSHYA, a kannada monthly solely owned, edited, published and printed by D. S. Nagabhushana, at HIG-5, Kallahally Extn.,Vinoba Nagara, SHIVAMOGGA-577204. Printed at Ila Mudrana, Bengaluru-560 026 Ph.: 080-26757159

**Regd. News Paper** RNI No. KARKAN/2012/47568
Rgd No. KA/SK/SMG-1209/2013-15
ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204 (Karnataka)